ಮಂಗಳವಾರ, ಜೂನ್ 10, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅತೀಕಾ ಮಿಂಚು

ಕಾಶ್ಮೀರದ 10 ವರ್ಷ ವಯಸ್ಸಿನ ರೇಸಿಂಗ್ ಪ್ರತಿಭೆ ಅತೀಕಾ ಮೀರ್ ಅವರು ಝೆಕ್ ರಿಪಬ್ಲಿಕ್‌ನ ಟ್ರಿನೆಕ್‌ನಲ್ಲಿ ನಡೆದ ರೋಟಾಕ್ಸ್ ಯೂರೊ ಟ್ರೋಫಿ ಸ್ಪರ್ಧೆಯಲ್ಲಿ ಅಗ್ರ ಹತ್ತು ಮಂದಿಯಲ್ಲಿ ಸ್ಥಾನ ಗಳಿಸಿದ್ದಾಳೆ. ಈ ಸಾಧನೆ ಮಾಡಿದ ಭಾರತದ ಮೊದಲ ಸ್ಪರ್ಧಿ ಈಕೆ.



ಸಂಕ್ಷಿಪ್ತ ಸುದ್ದಿ

ರಸ್ತೆ ಅಪಘಾತದಲ್ಲಿ ಚಿರತೆ ಸಾವು




ಮಾಯಕೊಂಡ (ದಾವಣಗೆರೆ): ಸಮೀಪದ ಲಕ್ಕಮುತ್ತೇನಹಳ್ಳಿ ರಾಷ್ಟ್ರೀಯ ಹೆದ್ದಾರಿ 47ರ ಬಳಿ ಭಾನುವಾರ ರಾತ್ರಿ ಚಿರತೆ ಮೃತಪಟ್ಟಿದೆ.

ರಾತ್ರಿ 11.30ರ ಸಮಯದಲ್ಲಿ ಹತ್ತು ವರ್ಷದ ಗಂಡು ಚಿರತೆಯು ಅರಣ್ಯದಿಂದ ರಸ್ತೆಗೆ ಬಂದಿದೆ. ಆಗ ವಾಹನವೊಂದು ಡಿಕ್ಕಿ ಹೊಡೆದಿದ್ದರಿಂದ ಸಾವಿಗೀಡಾಗಿದೆ.

‘ಆನಗೋಡು ಹಾಗೂ ದಾವಣಗೆರೆ ವಿಭಾಗದ ಅರಣ್ಯ ಸಿಬ್ಬಂದಿ ಸೋಮವಾರ ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಿದರು. ನಂತರ ಆನಗೋಡು ಬಳಿ ಅಂತ್ಯಕ್ರಿಯೆ ನಡೆಸಲಾಯಿತು’ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವರದರಂಗನಾಥ್ ತಿಳಿಸಿದರು.

ಚಾಕು ನುಂಗಿದ ನಾಗರ ಹಾವಿನ ರಕ್ಷಣೆ



ಕುಮಟಾ ತಾಲ್ಲೂಕಿನ ಹೆಗಡೆ ಗ್ರಾಮದಲ್ಲಿ ನಾಗರ ಹಾವಿನ ಬಾಯಿಯಿಂದ ಚಾಕು ಹೊರತೆಗೆಯಲಾಯಿತು

ಕುಮಟಾ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಹೆಗಡೆ ಗ್ರಾಮದಲ್ಲಿ ಸೋಮವಾರ ಒಂದು ಅಡಿ ಉದ್ದದ ಕಬ್ಬಿಣದ ಚಾಕು ನುಂಗಿದ್ದ ನಾಗರಹಾವನ್ನು ಉರಗ ರಕ್ಷಕ ಪವನ್ ನಾಯ್ಕ ಮತ್ತು ಪಶುವೈದ್ಯ ಆಸ್ಪತ್ರೆ ಸಹಾಯಕ ಅದ್ವೈತ ಭಟ್ಟ ರಕ್ಷಿಸಿದ್ದಾರೆ.

ಗೋವಿಂದ ನಾಯ್ಕ ಅವರ ಮನೆಯೊಳಗೆ ಬಂದ ನಾಗರ ಹಾವು, ಅಲ್ಲಿಯೇ ಇದ್ದ ಚಾಕು ನುಂಗಿತು. ವಿಷಯ ತಿಳಿದ ಕೂಡಲೇ ಮನೆಗೆ ಬಂದ ಉರಗ ರಕ್ಷಕ ಪವನ್ ನಾಯ್ಕ್ ಅವರು ಹಾವನ್ನು ಅದ್ವೈತ ಭಟ್ಟ ಅವರ ಮನೆಗೆ ಒಯ್ದರು. ಅಲ್ಲಿ ಅರ್ಧ ಗಂಟೆಯೊಳಗೆ ಚಾಕು ಹೊರತೆಗೆದರು.

‘ಚಾಕುವಿನಿಂದ ಮಾಂಸ ಕತ್ತರಿಸಿ, ತೊಳೆಯದೇ ಇಡಲಾಗಿತ್ತು. ಅದಕ್ಕೆ ಅಂಟಿದ್ದ ಮಾಂಸದ ವಾಸನೆಯಿಂದ, ಅದನ್ನು ಆಹಾರವೆಂದು ಭಾವಿಸಿ ಹಾವು ನುಂಗಿರಬಹುದು. ಹಾವಿಗೆ ಗಾಯ ಆಗಿಲ್ಲ. ನಂತರ ಕಾಡಿನಲ್ಲಿ ಬಿಡಲಾಯಿತು’ ಎಂದು ಪವನ್ ನಾಯ್ಕ್ ತಿಳಿಸಿದರು.

ಬಿತ್ತನೆ ಬೀಜಕ್ಕಾಗಿ ರೈತರ ಧರಣಿ

ಔರಾದ್ (ಬೀದರ್ ಜಿಲ್ಲೆ): ಬಿತ್ತನೆ ಬೀಜಕ್ಕೆ ಆಗ್ರಹಿಸಿ ತಾಲ್ಲೂಕಿನ ವಿವಿಧ ಗ್ರಾಮಗಳ ರೈತರು ಪಟ್ಟಣದ ರೈತ ಸಂಪರ್ಕ ಕೇಂದ್ರದ ಎದುರು ಸೋಮವಾರ ಧರಣಿ ನಡೆಸಿದರು.

ಬಿತ್ತನೆ ಬೀಜ ವಿತರಣೆಗೆ ದಿನಾಂಕ ನಿಗದಿಪಡಿಸಲಾಗಿದ್ದು, ಅದರಂತೆ ರೈತರು ನಸುಕಿನ ಜಾವ 4 ಗಂಟೆಗೆ ರೈತ ಸಂಪರ್ಕ ಕೇಂದ್ರಕ್ಕೆ ಬಂದು ಸರತಿಯಲ್ಲಿ ಕುಳಿತರು. ರೈತ ಮಹಿಳೆಯರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರದ ಬಳಿ ಕಾಯುತ್ತ ಕುಳಿತುಕೊಂಡಿದ್ದು ಕಂಡುಬಂತು.

ಮಧ್ಯಾಹ್ನದವರೆಗೂ ಕೇಂದ್ರದ ಬಾಗಿಲು ತೆರೆಯಲಿಲ್ಲ. ಇದರಿಂದ ಬೇಸತ್ತು ಕೆಲವು ರೈತರು ಬರಿಗೈಯಲ್ಲೇ ಮನೆಗೆ ಹಿಂತಿರುಗಿದರು. ಮತ್ತೆ ಕೆಲವು ರೈತರು ಅಲ್ಲೇ ಠಿಕಾಣಿ ಹೂಡಿ ಧರಣಿ ಮುಂದುವರಿಸಿದರು.

‘ಸೋಯಾಬಿನ್ ಬೀಜದ ದಾಸ್ತಾನ ಬರಲಿದೆ. ನಾಳೆ ಕೊಡುತ್ತೇವೆ ಎಂದು ಹೇಳಿದರೂ ರೈತರು ರೈತ ಸಂಪರ್ಕ ಕೇಂದ್ರದಿಂದ ಹೋಗುತ್ತಿಲ್ಲ’ ಎಂದು ಕೃಷಿ ಅಧಿಕಾರಿ ಸ್ವಾತಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

₹10 ಲಕ್ಷ ಲಂಚ: ಅಧಿಕಾರಿ ಸೆರೆ

ಭುವನೇಶ್ವರ (ಪಿಟಿಐ): ಉದ್ಯಮಿಯಿಂದ ₹10 ಲಕ್ಷ ಲಂಚ ಪಡೆಯುತ್ತಿದ್ದ ಐಎಎಸ್ ಅಧಿಕಾರಿಯನ್ನು ಒಡಿಶಾ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸೋಮವಾರ ಬಂಧಿಸಿದೆ.

ಕಾಲಹಂದಿ ಜಿಲ್ಲೆಯ ಧರ್ಮಗಢದ ಉಪ ವಿಭಾಗಾಧಿಕಾರಿ ಧಿಮನ್ ಚಕ್ಮಾ ಅವರು ಸ್ಥಳೀಯ ಉದ್ಯಮಿಯೊಬ್ಬರಿಂದ ₹20 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ತಮ್ಮ ಮನೆಯಲ್ಲಿ ಮುಂಗಡವಾಗಿ ₹10 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಅಧಿಕಾರಿ ಸಿಕ್ಕಿಬಿದ್ದಿದ್ದಾರೆ.

ಉದ್ಯಮಿ ನೀಡಿದ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಿ, ಕಾರ್ಯಾಚರಣೆ ನಡೆಸಲಾಗಿದೆ. ಮನೆಯಲ್ಲಿ ಶೋಧ ನಡೆಸಿದ್ದು, ಅಲ್ಲಿ ಪತ್ತೆಯಾದ ₹47 ಲಕ್ಷ ನಗದನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸಿಬಿ ಪ್ರಕಟಣೆಯಲ್ಲಿ ತಿಳಿಸಿದೆ.

ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳಿಗಷ್ಟೇ ರಾಜ್ಯ ಸರ್ಕಾರದ ಮಾನ್ಯತೆ

ಡಿಪ್ಲೊಮಾ ನರ್ಸಿಂಗ್ ತರಬೇತಿ ಸ್ಥಗಿತ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕಿರಿಯ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರಗಳನ್ನು ಮುಚ್ಚುತ್ತಿರುವ ರಾಜ್ಯ ಸರ್ಕಾರ, ಈಗ ಡಿಪ್ಲೊಮಾ ನರ್ಸಿಂಗ್ ಶಾಲೆಗಳನ್ನು (ಜಿಎನ್‌ಎಂ) ಬಿ.ಎಸ್‌ಸಿ ನರ್ಸಿಂಗ್ ಕಾಲೇಜುಗಳಾಗಿ ಉನ್ನತೀಕರಿಸುವ ಪ್ರಕ್ರಿಯೆಗೆ ಚಾಲನೆ ನೀಡಿದೆ.

ಗ್ರಾಮೀಣ ಭಾಗದ ಆರೋಗ್ಯ ಸೇವೆಯ ಭಾಗವಾಗಿದ್ದ ಕಿರಿಯ ಆರೋಗ್ಯ ಸಹಾಯಕಿಯರಾಗಲು (ಎಎನ್‌ಎಂ) ಬಯಸುವ ಯುವತಿಯರಿಗೆ ದಶಕಗಳಿಂದಲೂ ತರಬೇತಿ ನೀಡುತ್ತಿದ್ದ ತರಬೇತಿ ಕೇಂದ್ರಗಳು ಹಾಗೂ ದ್ವಿತೀಯ ಪಿಯುನಲ್ಲಿ ಕಲಾ, ವಾಣಿಜ್ಯ, ವಿಜ್ಞಾನ ಯಾವುದೇ ವಿಷಯ ಕಲಿತ ವಿದ್ಯಾರ್ಥಿನಿಯರಿಗೆ ಡಿಪ್ಲೊಮಾ ನರ್ಸಿಂಗ್ ಶಿಕ್ಷಣ ನೀಡುತ್ತಿದ್ದ ಜಿಎನ್‌ಎಂ ತರಬೇತಿ ಶಾಲೆಗಳು ಶಾಶ್ವತವಾಗಿ ಬಾಗಿಲು ಹಾಕುತ್ತಿದ್ದು, ಇತಿಹಾಸ ಸೇರಲಿವೆ.

ದ್ವಿತೀಯ ಪಿಯುನಲ್ಲಿ ವಿಜ್ಞಾನ ವಿಷಯ ಓದಿದ ವಿದ್ಯಾರ್ಥಿಗಳು ಮಾತ್ರ ಇನ್ನು ಮುಂದೆ ಶುಶ್ರೂಷಕಿಯರಾಗಹುದು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ (ಸಿಇಟಿ) ಪರೀಕ್ಷೆ ಬರೆದು, ನಾಲ್ಕು ವರ್ಷಗಳ ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್ ಪದವಿ ಪೂರೈಸಿದವರನ್ನಷ್ಟೇ ಶುಶ್ರೂಷಣಾ ಅಧಿಕಾರಿಗಳಾಗಿ ನೇಮಕ ಮಾಡಲಾಗುತ್ತದೆ. ಯಾವುದೇ ಆಸ್ಪತ್ರೆ ಸೇರಿದಂತೆ ಆರೋಗ್ಯ ಸೇವೆಯಲ್ಲಿ ಶುಶ್ರೂಷಣೆಯ ಮೊದಲ ಹಂತದ ನೇಮಕಕ್ಕೆ ಬಿ.ಎಸ್‌ಸಿ ನರ್ಸಿಂಗ್ ಪದವಿಯನ್ನು ಕಡ್ಡಾಯಗೊಳಿಸಲಾಗುತ್ತಿದೆ.



ಕಿರಿಯ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರಗಳನ್ನು ಆರೋಗ್ಯ ಇಲಾಖೆ ಹಾಗೂ ಡಿಪ್ಲೊಮಾ ನರ್ಸಿಂಗ್ ತರಬೇತಿ ಶಾಲೆಗಳನ್ನು ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ವಹಿಸುತ್ತಿವೆ. ಆರೋಗ್ಯ ಸೇವೆಯಲ್ಲಿ ವೈದ್ಯರ ನಂತರದ ಮಹತ್ವದ ಸೇವೆಯನ್ನು ಇದುವರೆಗೆ ಈ ಎರಡು ಹಂತದ ಶುಶ್ರೂಷಕಿಯರು ನಿರ್ವಹಿಸುತ್ತಾ ಬಂದಿದ್ದರು.

‘ಶುಶ್ರೂಷಣಾ ವೃತ್ತಿಯ ಮೊದಲ ಸ್ತರದಲ್ಲೇ ವಿಜ್ಞಾನದ ವಿದ್ಯಾರ್ಥಿಗಳಿಗೆ ಅವಕಾಶ ಇರಬೇಕು. ನರ್ಸಿಂಗ್ ಪದವಿ ಪಡೆದವರನ್ನೇ ಅಂತಹ ವೃತ್ತಿಗಳಿಗೆ ಪರಿಗಣಿಸಬೇಕು. ಬಿ.ಎಸ್‌ಸಿ ನರ್ಸಿಂಗ್ ಕಾಲೇಜುಗಳನ್ನು ಬಲವರ್ಧನೆಗೊಳಿಸಬೇಕು. ಅಗತ್ಯ ಮೂಲಸೌಕರ್ಯ, ಬೋಧಕ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು. ಅದಕ್ಕಾಗಿ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಬೇಕು’ ಎಂಬ ಭಾರತೀಯ ನರ್ಸಿಂಗ್ ಪರಿಷತ್ ಹಾಗೂ ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2ರ ಶಿಫಾರಸಿನಂತೆ ಇದುವರೆಗೂ ಇದ್ದ ಮೊದಲ ಸ್ತರದ ಎರಡು ನರ್ಸಿಂಗ್ ಹಂತಗಳನ್ನು ರದ್ದು ಮಾಡಲು ಸರ್ಕಾರ ಮುಂದಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಸಭೆಯ ಸೂಚನೆಯಂತೆ ಎಲ್ಲ ಜಿಎನ್‌ಎಂ ಕೇಂದ್ರಗಳ ಪ್ರಾಂಶುಪಾಲರು ಬಿ.ಎಸ್‌ಸಿ ನರ್ಸಿಂಗ್ ಕಾಲೇಜುಗಳಾಗಿ ಉನ್ನತೀಕರಿಸಲು ಕೋರಿ ಪ್ರಸ್ತಾವ ಸಲ್ಲಿಸಿದ್ದಾರೆ.

ಅಂಕಿ ಅಂಶಗಳು

18 ಸರ್ಕಾರಿ ಡಿಪ್ಲೊಮಾ ನರ್ಸಿಂಗ್ ಶಾಲೆಗಳು

840 ಒಟ್ಟು ಡಿಪ್ಲೊಮಾ ನರ್ಸಿಂಗ್ ಶಾಲೆಗಳು

32 ಸರ್ಕಾರಿ ಬಿ.ಎಸ್‌ಸಿ ನರ್ಸಿಂಗ್ ಕಾಲೇಜುಗಳು

685 ಒಟ್ಟು ಬಿ.ಎಸ್‌ಸಿ ನರ್ಸಿಂಗ್ ಕಾಲೇಜುಗಳು

ಕೇಂದ್ರದ ಸೂಚನೆಯಂತೆ ಜಿಎನ್‌ಎಂಗಳನ್ನು ಬಿ.ಎಸ್‌ಸಿ ನರ್ಸಿಂಗ್‌ಗೆ ಉನ್ನತೀಕರಿಸಲಾಗುತ್ತಿದೆ. ಹಂತಹಂತವಾಗಿ ಕ್ರಮ ಕೈಗೊಳ್ಳಲಾಗುವುದು

ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

ಖಾಸಗಿ ನರ್ಸಿಂಗ್ ಸಂಸ್ಥೆಗಳ ಆಕ್ಷೇಪ

ಡಿಪ್ಲೊಮಾ ನರ್ಸಿಂಗ್ ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರಕ್ಕೆ ಹಲವು ಖಾಸಗಿ ನರ್ಸಿಂಗ್ ಶಿಕ್ಷಣ ಸಂಸ್ಥೆಗಳು ಆಕ್ಷೇಪ ವ್ಯಕ್ತಪಡಿಸಿವೆ.

ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳು, ವಿಜ್ಞಾನ ವಿಷಯ ಹೊರತಾದ ವಿದ್ಯಾರ್ಥಿಗಳು ಮೂರು ವರ್ಷಗಳ ಡಿಪ್ಲೊಮಾ ನರ್ಸಿಂಗ್ ಓದಿ, ದೇಶ, ವಿದೇಶಗಳ ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸೇವೆ ಮಾಡುತ್ತಲೇ ಹಲವರು ಬಿ.ಎಸ್‌ಸಿ ಪದವಿಯನ್ನೂ ಪಡೆದಿದ್ದಾರೆ. ಸರ್ಕಾರದ ಇಂತಹ ನಿರ್ಧಾರದಿಂದ ಕಲೆ, ವಾಣಿಜ್ಯ ಮತ್ತಿತರ ಕೋರ್ಸ್‌ಗಳನ್ನು ಕಲಿತ ವಿದ್ಯಾರ್ಥಿಗಳಿಗೆ ನರ್ಸಿಂಗ್ ಕ್ಷೇತ್ರದ ಬಾಗಿಲು ಶಾಶ್ವತವಾಗಿ ಮುಚ್ಚಲಿದೆ. ಬಹು ಬೇಡಿಕೆ ಇರುವ ಈ ಕ್ಷೇತ್ರದಲ್ಲಿ ಶುಶ್ರೂಷಕಿಯರ ಕೊರತೆ ತೀವ್ರವಾಗಿ ಕಾಡಲಿದೆ ಎನ್ನುತ್ತಾರೆ ನರ್ಸಿಂಗ್ ಶಿಕ್ಷಣ ಸಂಸ್ಥೆಯೊಂದರ ಮುಖ್ಯಸ್ಥ ಆರ್.ಎಂ. ರಾಕೇಶ್.

ವಿದ್ಯಾರ್ಥಿಗಳಿಗೆ ಶುಲ್ಕದ ಹೊರೆ

ಎರಡು ವರ್ಷದ ಎಎನ್‌ಎಂ ತರಬೇತಿ, ಮೂರು ವರ್ಷಗಳ ಡಿಪ್ಲೊಮಾ ನರ್ಸಿಂಗ್ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಸರ್ಕಾರವೇ ಪ್ರತಿ ತಿಂಗಳು ಶಿಷ್ಯ ವೇತನ ನೀಡುತ್ತದೆ. ಬಿ.ಎಸ್‌ಸಿ ನರ್ಸಿಂಗ್ ಕಾಲೇಜುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶಿಷ್ಯ ವೇತನದ ಸೌಲಭ್ಯ ಇಲ್ಲ. ಸಿಇಟಿ ಮೂಲಕ ಆಯ್ಕೆಯಾದವರಿಗೆ ಸರ್ಕಾರಿ ಕಾಲೇಜುಗಳು ಸಿಕ್ಕರೆ ₹10 ಸಾವಿರ ಶುಲ್ಕ, ಖಾಸಗಿ ಕಾಲೇಜುಗಳಲ್ಲಿ ಸೀಟು ದೊರೆತರೆ ₹1 ಲಕ್ಷ ಶುಲ್ಕ ಭರಿಸಬೇಕು. ಇದು ಬಡ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ ಎನ್ನುತ್ತಾರೆ ಯಲಹಂಕ ಉಪನಗರದ ಖಾಸಗಿ ಕಂಪನಿ ಉದ್ಯೋಗಿ ಕೆ.ಟಿ. ಜಗದೀಶ್.



250 ಸೀಟುಗಳಿಗೆ ಹೆಚ್ಚಳ

ರಾಜ್ಯದಲ್ಲಿ ಈಗಿರುವ ಬಿ.ಎಸ್‌ಸಿ ನರ್ಸಿಂಗ್ ಕಾಲೇಜಿನಲ್ಲಿ ಗರಿಷ್ಠ 100 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅನುಮತಿ ಇದೆ. ಎಲ್ಲ ಕಾಲೇಜುಗಳೂ ಸೇರಿ 31,812 ಸೀಟುಗಳು ಲಭ್ಯವಿವೆ. ಹಾಗಾಗಿ, ಪ್ರತಿ ಕಾಲೇಜುಗಳು ಗರಿಷ್ಠ 250 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ವೈದ್ಯಕೀಯ ಶಿಕ್ಷಣ ಇಲಾಖೆ ಅನುಮತಿ ನೀಡುತ್ತಿದೆ.

ಸುದ್ದಿ 2 ನಿಮಿಷ

ಖಾತೆ ಬದಲಿಸುವಂತೆ ಯಾರ ಬಳಿಯೂ ಕೇಳಿಲ್ಲ– ಪರಮೇಶ್ವರ

ಬೆಂಗಳೂರು: ‘ಖಾತೆ ಬದಲಾಯಿಸುವಂತೆ ಮುಖ್ಯಮಂತ್ರಿ ಸೇರಿದಂತೆ ಯಾರ ಬಳಿಯೂ ನಾನು ಮಾತನಾಡಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಕಾಲ್ತುಳಿತ ಘಟನೆ ನಡೆದ ಬೆನ್ನಲ್ಲೇ ಖಾತೆ ಬದಲಾವಣೆಗೆ ನಾನು ಪಟ್ಟು ಹಿಡಿದಿದ್ದೇನೆಂಬ ವದಂತಿ ಹರಡಿದೆ. ನಾನು ಖಾತೆ ಬದಲಾವಣೆಗೆ ಕೇಳಿದ್ದೇನೆಂದು ಯಾರು ಹೇಳಿದ್ದಾರೆ? ಯಾವ ಮೂಲಗಳ ಆಧಾರದಲ್ಲಿ ಸುದ್ದಿಯಾಗಿದೆ. ನನ್ನನ್ನು ನೇರವಾಗಿ ಕೇಳಬೇಕಿತ್ತಲ್ಲವೇ’ ಎಂದು ಹೇಳುತ್ತಲೇ ಗರಂ ಆದರು.

‘ಯಾರು ಏನೇ ಹೇಳಲಿ. ನೀವು ನನ್ನ ಬಳಿ ನೇರವಾಗಿ ಬಂದು ಕೇಳಿ. ನಾನು ಸಂಯಮದಿಂದಲೇ ನಡೆದುಕೊಂಡಿದ್ದೇನೆ. ಈ ರೀತಿ ಒಬ್ಬರ ವ್ಯಕ್ತಿತ್ವವನ್ನು ಕೊಲೆ ಮಾಡಬಾರದು. ಇದು ಸರಿ ಎನಿಸುವುದಿಲ್ಲ. ಯಾರಿಗೂ ಶೋಭೆ ತರುವುದಿಲ್ಲ’ ಎಂದರು.



ಕಾಲ್ತುಳಿತ ಘಟನೆ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ‘ಇಂತಹ ಘಟನೆ ಆಗಬಾರದಿತ್ತು. ಇದಕ್ಕೆ ಎಲ್ಲರೂ ನೋವು ಅನುಭವಿಸುತ್ತಿದ್ದೇವೆ. ಈ ಪ್ರಕರಣ ನಮಗೆ ಸವಾಲು. ಇಂತಹ ಸಂದರ್ಭದಲ್ಲಿ ನಾವು ಖಾತೆ ಬದಲಾವಣೆಗೆ ಕೇಳುವುದು ಸರಿಯಲ್ಲ. ಈ ಸಂದರ್ಭವನ್ನು ನಾವು ಗಟ್ಟಿಯಾಗಿ ಎದುರಿಸಬೇಕು’ ಎಂದೂ ಹೇಳಿದರು.

ಘಟನೆಯ ಬಗ್ಗೆ ಹೈಕಮಾಂಡ್‌ಗೆ ದೂರವಾಣಿ ಮೂಲಕ ಮಾಹಿತಿ ಕೊಟ್ಟಿದ್ದೇವೆ’ ಎಂದರು.

‘ಕೇಂದ್ರಕ್ಕೆ ಝೀರೊ ಅಂಕ’

ಮೈಸೂರು: ‘ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಶೂನ್ಯ ಅಂಕ ಕೊಡುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಇಲ್ಲಿನ ಟಿ.ಕೆ. ಬಡಾವಣೆಯ ತಮ್ಮ ನಿವಾಸದ ಬಳಿ ಸೋಮವಾರ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಬಳಿಕ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಪ್ರಚಾರದಿಂದಷ್ಟೇ ಬದುಕಿದ್ದಾರೆ. ₹1,000 ಹಾಗೂ ₹500 ಮುಖಬೆಲೆಯ ನೋಟುಗಳ ಚಲಾವಣೆ ರದ್ದತಿಯಿಂದ ಯಾರಿಗೆ ಅನುಕೂಲವಾಯಿತು. ಒಳ್ಳೆಯ ದಿನಗಳು ಬರುತ್ತವೆ ಎಂದಿದ್ದರು, ಪ್ರತಿ ವರ್ಷ 2 ಕೋಟಿ ಉದ್ಯೋಗ ಕೊಡುತ್ತೇವೆ ಎಂದಿದ್ದರು, ಏನಾಯಿತು? ರೈತರ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದಿದ್ದರು, ಆಗಿದೆಯೇ? ರೈತರೇಕೆ ಆ ಸರ್ಕಾರದ ವಿರುದ್ಧ ದೆಹಲಿಯ ಗಡಿಗಳಲ್ಲಿ ಚಳವಳಿ ನಡೆಸಿದ್ದರು? ಮುಖ್ಯವಾಗಿ ಹೇಳಿದ್ದ ಒಂದನ್ನೂ ಮೋದಿ ಮಾಡಲಿಲ್ಲ. 11 ವರ್ಷ ತುಂಬಿಸಿದ್ದಾರಷ್ಟೆ’ ಎಂದು ಟೀಕಿಸಿದರು.

‘ನಾವು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದಾಗ, ಅವನ್ನೆಲ್ಲಾ ಜಾರಿಗೊಳಿಸಲಾಗುವುದಿಲ್ಲ. ಒಂದು ವೇಳೆ ಜಾರಿಗೊಳಿಸಿದರೆ ರಾಜ್ಯ ಸರ್ಕಾರಗಳು ದಿವಾಳಿ ಆಗುತ್ತವೆ ಎಂದಿದ್ದರು. ಅವರೇ ಅದನ್ನೆಲ್ಲಾ ಕಾಪಿ ಮಾಡಿಬಿಟ್ಟರು. ಮಧ್ಯಪ್ರದೇಶ, ರಾಜಸ್ಥಾನ, ಉತ್ತರಪ್ರದೇಶ, ದೆಹಲಿಯಲ್ಲಿ ಏನು ಮಾಡಿದರು? ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ತೆರಿಗೆಯಲ್ಲಿ ಶೇ 50ರಷ್ಟು ಪಾಲು ರಾಜ್ಯಕ್ಕೆ ಬರಬೇಕು ಎಂದಿದ್ದರು. ಅವರೇ ಪ್ರಧಾನಿಯಾದರಲ್ಲಾ ಆ ವಿಷಯದಲ್ಲಿ ಏನು ಮಾಡಿದರು? ಏನನ್ನೂ ಮಾಡಲಿಲ್ಲ. ನೀವು (ಮಾಧ್ಯಮದವರು) ಅದನ್ನೆಲ್ಲಾ ಹೇಳುವುದೇ ಇಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅರೆಬೆತ್ತಲೆ ಮೆರವಣಿಗೆ ಮಾಡಿ, ರಸ್ತೆ ತಡೆದು ಪ್ರತಿಭಟನೆ ನಡೆಸಿದ ಹೋರಾಟ ಸಮಿತಿ

‘ಬಡ್ತಿ ನಿಲ್ಲಿಸಿ, ಒಳಮೀಸಲಾತಿ ಜಾರಿಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಳಮೀಸಲಾತಿ ಜಾರಿ ಆಗುವವರೆಗೆ ಬಡ್ತಿಯಲ್ಲಿ ಮೀಸಲಾತಿ ನೀಡುವುದನ್ನು ನಿಲ್ಲಿಸಲು ಆದೇಶಿಸಬೇಕು. ಇಲ್ಲದೇ ಇದ್ದರೆ ನಾವು ಜೀವಕ್ಕೆ ಅಪಾಯ ತಂದುಕೊಳ್ಳುವ ಹೋರಾಟಕ್ಕೆ ಇಳಿಯುತ್ತೇವೆ. ಅದಕ್ಕೆ ಸರ್ಕಾರವೇ ಹೊಣೆಯಾಗಲಿದೆ’ ಎಂದು ಮಾದಿಗ ಒಳಮೀಸಲಾತಿ ಹೋರಾಟ ಸಮಿತಿ ಎಚ್ಚರಿಕೆ ನೀಡಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಮಾದಿಗರ ಕ್ರಾಂತಿಕಾರಿ ಸಂಘರ್ಷ ಹೋರಾಟದಲ್ಲಿ ಪಾಲ್ಗೊಂಡಿದ್ದ ಸಮುದಾಯದ ಮುಖಂಡರು ಈ ಘೋಷಣೆ ಮಾಡಿದರು.

ಹೋರಾಟದ ನೇತೃತ್ವ ವಹಿಸಿರುವ ಬಿ.ಆರ್. ಭಾಸ್ಕರ ಪ್ರಸಾದ್, ‘ಒಳಮೀಸಲಾತಿಗಾಗಿ 98 ದಿನಗಳಿಂದ ಅರೆಬೆತ್ತಲೆ ರಥಯಾತ್ರೆ ಮಾಡಲಾಗುತ್ತಿದೆ. ನಮ್ಮ ಸಮುದಾಯದೊಳಗೇ ಇರುವ ಮನುವಾದಿಗಳು, ಒಳಮೀಸಲಾತಿ ಹೋರಾಟಗಾರರು ಎಂದು ಹೇಳಿಕೊಳ್ಳುತ್ತಿದ್ದವರು, ಸಮುದಾಯದ ರಾಜಕಾರಣಿಗಳೆಲ್ಲ ಸೇರಿ ಈ ಪಾದಯಾತ್ರೆಯನ್ನು ಹತ್ತಿಕ್ಕಲು ಪ್ರಯತ್ನಿಸಿದರು. ಪ್ರಕರಣ ದಾಖಲಿಸಿದರು. ಬಂಧಿಸಿದರು. ಹೋರಾಟ ಮಾಡಿ, ಆದರೆ, ಕಾಂಗ್ರೆಸ್‌ಗೆ ತೊಂದರೆಯಾಗದಂತೆ ಮಾಡಿ ಎಂದು ಕೆಲವರು ಸಲಹೆ ನೀಡಿದ್ದರು’ ಎಂದು ಆರೋಪಿಸಿದರು.

ಮಾದಿಗರಿಗೆ ಸಿಗಬೇಕಾದ ಸೌಲಭ್ಯಗಳನ್ನು ಹೊಲೆಯರು ಬಳಸಿಕೊಳ್ಳುತ್ತಿದ್ದಾರೆ ಎಂದು ಸದಾಶಿವ ಆಯೋಗವೇ ಹೇಳಿದೆ. ಆದರೆ, ಮಾದಿಗ, ಹೊಲೆಯ ಎಂದೆಲ್ಲ ಹೇಳಬೇಡಿ. ಹಾಗೆ ಹೇಳಿದರೆ ಒಡಕು ಉಂಟಾಗುತ್ತದೆ. ಎಲ್ಲರೂ ದಲಿತರು ಎಂದು ಹೇಳಬೇಕು ಎಂದು ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದ್ದರು. ಮಹದೇವಪ್ಪ ಮಾದಿಗರ ವಿರೋಧಿ ಎಂದು ಹರಿಹಾಯ್ದರು.

ಕೇಂದ್ರದ ಮಾಜಿ ಸಚಿವ ಎ. ನಾರಾಯಣ ಸ್ವಾಮಿ ಮಾತನಾಡಿ, ‘ಪಂಜಾಬ್‌ನಲ್ಲಿ 1975ರಿಂದಲೇ ಒಳಮೀಸಲಾತಿ ಇತ್ತು. ನಮ್ಮನ್ನು ಹೋಮೋಜೀನಿಯಸ್ ಎಂದು ಕರೆದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ 2005ರಲ್ಲಿ ನೀಡಿದ ತೀರ್ಪು ನಮಗೆ ಮಾರಕವಾಯಿತು. ಇದನ್ನು ಪಂಜಾಬ್ ಬಿಟ್ಟು ಬೇರೆ ಯಾವ ರಾಜ್ಯ ಸರ್ಕಾರಗಳೂ ಪ್ರಶ್ನಿಸಿಲ್ಲ’ ಎಂದರು.

‘ಒಳಮೀಸಲಾತಿಯನ್ನು ಜಾರಿ ಮಾಡುವವರೆಗೆ ಬಡ್ತಿ ಮೀಸಲಾತಿ ನೀಡುವುದಿಲ್ಲ ಎಂದು ಆದೇಶ ಬಾರದೇ ಹೋದರೆ ನಮ್ಮನ್ನು ನಾವೇ ಕೊಂದುಕೊಳ್ಳುತ್ತೇವೆ’ ಎಂದು ಹೋರಾಟದ ನಾಯಕರು ಎಚ್ಚರಿಸಿದರು.



ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಮಾದಿಗರ ಕ್ರಾಂತಿಕಾರಿ ಸಂಘರ್ಷ ಹೋರಾಟದಲ್ಲಿ ಮಾದಿಗ ಒಳಮೀಸಲಾತಿ ಹೋರಾಟ ಸಮಿತಿಯ ಕಾರ್ಯಕರ್ತರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು ಚಿತ್ರ:ರಂಜು ಪಿ.

‘ವರದಿ ಬಳಿಕ ಜಾರಿ’

ಒಳಮೀಸಲಾತಿ ಜಾರಿ ಮಾಡುವುದಕ್ಕಾಗಿಯೇ ಪರಿಶಿಷ್ಟ ಜಾತಿಯ ಸಮೀಕ್ಷೆ ನಡೆಸಲಾಗುತ್ತಿದೆ. ಅದರ ವರದಿ ಬಂದ ಬಳಿಕ ಒಳಮೀಸಲಾತಿ ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ತಮ್ಮನ್ನು ಭೇಟಿ ಮಾಡಿದ ಹೋರಾಟಗಾರರ ನಿಯೋಗದೊಂದಿಗೆ ಮಾತನಾಡಿದ ಅವರು, ‘ನೀವು ಬೇಡ ಎಂದು ಹೇಳಿದರೂ ಒಳಮೀಸಲಾತಿ ಜಾರಿ ಮಾಡೇ ಮಾಡುತ್ತೇವೆ. ಇದು ನಮ್ಮ ಪಕ್ಷದ, ನಮ್ಮ ಸರ್ಕಾರದ ಬದ್ಧತೆ. ನಿಖರ ದತ್ತಾಂಶಕ್ಕಾಗಿ ಕಾಯುತ್ತಿದ್ದೇವೆ’ ಎಂದು ತಿಳಿಸಿದರು.

ಸಂಜೆವರೆಗೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಾರದೇ ಇದ್ದಿದ್ದರಿಂದ ಸ್ವಾತಂತ್ರ್ಯ ಉದ್ಯಾನದಿಂದ ರಸ್ತೆಗೆ ಇಳಿದರು. ಪೊಲೀಸರು ಬ್ಯಾರಿಕೇಡ್ ಹಾಕಿ ಪ್ರತಿಭಟನಕಾರರು ಮುಂದಕ್ಕೆ ಹೋಗದಂತೆ ತಡೆದರು. ಐವರು ಮುಖಂಡರು ಮುಖ್ಯಮಂತ್ರಿಯ ನಿವಾಸಕ್ಕೆ ತೆರಳಿ ಮಾತುಕತೆ ನಡೆಸಿದ ಬಳಿಕ ಪ್ರತಿಭಟನೆ ಕೊನೆಗೊಂಡಿತು.

ಮುಖಂಡರಾದ ಎಸ್. ಅರುಣ್ ಕುಮಾರ್, ಬಾಳೆಕಾಯಿ ಶ್ರೀನಿವಾಸ್, ಪ್ರಭುರಾಜ್ ಕೊಡ್ಲಿ, ಬಾಲಸ್ವಾಮಿ ಕೊಡ್ಲಿ, ರಾ.ಚಿಂತನ್, ಚೇತನ್ ಅಹಿಂಸಾ ಭಾಗವಹಿಸಿದ್ದರು.

ಬಾಲ್ಯವಿವಾಹ ನಿರ್ಲಕ್ಷ್ಯ: ಅಧಿಕಾರಿ ಮೇಲೆ ಕ್ರಮಕ್ಕೆ ಒತ್ತಾಯ

ಬೆಂಗಳೂರು: ಬಾಲ್ಯ ವಿವಾಹ, ಬಾಲ ಕಾರ್ಮಿಕರು, ಮಕ್ಕಳ ಸಾಗಣೆ ಯಂತಹ ಮಕ್ಕಳ ಹಕ್ಕುಗಳ ಉಲ್ಲಂಘನೆ ಪ್ರಕರಣಗಳ ಬಗ್ಗೆ ನಿರ್ಲಕ್ಷ್ಯ ವಹಿಸುವ ಅಧಿಕಾರಿ, ಸಮಿತಿ, ಪ್ರಾಧಿಕಾರದ ಮೇಲೆ ಇಲಾಖಾ ತನಿಖೆ ನಡೆಸಬೇಕು ಎಂದು ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ ಒತ್ತಾಯಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಕೇಂದ್ರದ ರಾಜ್ಯ ಸಂಚಾಲಕ ಎನ್.ವಿ. ವಾಸುದೇವ ಶರ್ಮಾ ಅವರು, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಗೊಲ್ಲರಹಳ್ಳಿ–ರೆಡ್ಡಿ ಹಳ್ಳಿಯಲ್ಲಿ ಸಾಮೂಹಿಕ ಹಲ್ಲೆ ಮಾಡಿ ಬಾಲ್ಯವಿವಾಹ ಮಾಡಲು ಯತ್ನಿಸಿದ ಪ್ರಕರಣ ಉಲ್ಲೇಖಿಸಿದ್ದಾರೆ.



‘ರಾಜ್ಯದಾದ್ಯಂತ ಬಾಲ್ಯವಿವಾಹ ತಡೆಗಟ್ಟಲು ತೀವ್ರ ಪ್ರಚಾರ ಮತ್ತು ಕಟ್ಟುನಿಟ್ಟಿನ ಕ್ರಮ ಜರುಗಿಸಿ ಹೆಣ್ಣುಮಕ್ಕಳ ಹಕ್ಕುಗಳನ್ನು ರಕ್ಷಿಸಬೇಕು’ ಎಂದು ಕೋರಿದ್ದಾರೆ.

‘ರೆಡ್ಡಿಹಳ್ಳಿಯಲ್ಲಿ ಎಷ್ಟೇ ಒತ್ತಡ, ದೈಹಿಕ ಹಲ್ಲೆ ನಡೆಸಿದರೂ ವಿವಾಹ ಬೇಡ ಎಂದು ಪ್ರತಿಭಟಿಸಿದ ಬಾಲಕಿಯ ನಿಲುವನ್ನು ಶ್ಲಾಘಿಸುತ್ತೇವೆ. ಈ ಬಾಲಕಿಗೆ, ಶಿಕ್ಷಣ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಸಂಪೂರ್ಣ ಉಚಿತವಾದ ವ್ಯವಸ್ಥೆಯನ್ನು ಸರ್ಕಾರ ಕಲ್ಪಿಸಬೇಕು’ ಎಂದಿದ್ದಾರೆ.

‘ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ–2009ಯನ್ನು ಬಳಸಿಕೊಂಡು, ಅದಕ್ಕೆ ತಿದ್ದುಪಡಿ ತಂದು, ಹೆಣ್ಣು ಮಕ್ಕಳಿಗೆ 18 ವರ್ಷಗಳವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಖಾತರಿ ಜಾರಿ ಮಾಡಬೇಕು’ ಎಂದು ಮನವಿ ಮಾಡಿದ್ದಾರೆ.

‘ಯಾವುದೇ ಬಾಲಕಿ ತನಗೆ ಬಾಲ್ಯ ವಿವಾಹ, ಲೈಂಗಿಕ ಶೋಷಣೆ, ಸಾಗಣೆ, ಮಾರಾಟ ಅಥವಾ ಅಂತಹ ಯಾವುದೇ ರೀತಿಯ ಒತ್ತಡ ಇದೆ ಎಂದು ಅಧಿಕಾರಿ, ಪ್ರಾಧಿಕಾರ, ಸಮಿತಿಗೆ ಸುದ್ದಿ ತಲುಪಿಸಿದಾಗ ಅವುಗಳನ್ನು ನಿರ್ಲಕ್ಷಿಸದಂತೆ ಕ್ರಮ ಕೈಗೊಳ್ಳಲು ತಾಕೀತು ಮಾಡಬೇಕು’ ಎಂದು ಹೇಳಿದ್ದಾರೆ.



ತಿರಂಗಾ ರ‍್ಯಾಲಿ

ಬೆಳಗಾವಿ ಜಿಲ್ಲೆಯ ನಿಪ್ಪಾಣಿಯಲ್ಲಿ ಸೋಮವಾರ ಜರುಗಿದ ತಿರಂಗಾ ರ‍್ಯಾಲಿಯಲ್ಲಿ ಸುಮಾರು 900 ಮೀಟರ್ ಉದ್ದದ ತ್ರಿವರ್ಣ ಧ್ವಜದೊಂದಿಗೆ ವಿದ್ಯಾರ್ಥಿಗಳು ಹೆಜ್ಜೆ ಹಾಕಿದರು



ಚಿಂತಾಮಣಿ ತಾಲ್ಲೂಕಿನ ಕುರುಟಹಳ್ಳಿ ಶ್ರವಣ್ ಕುಟುಂಬಕ್ಕೆ ಜಿಲ್ಲಾಧಿಕಾರಿ ಪರಿಹಾರದ ಚೆಕ್ ವಿತರಿಸಿದರು

ಪರಿಹಾರದ ಚೆಕ್ ವಿತರಣೆ

ಚಿಂತಾಮಣಿ: ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟಿದ್ದ ಶ್ರವಣ್ (20) ಮನೆಗೆ ಸೋಮವಾರ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಭೇಟಿ ನೀಡಿ ₹25ಲಕ್ಷ ಪರಿಹಾರದ ಚೆಕ್‌ನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದರು.

ಮೃತರ ತಾತ ಕೃಷ್ಣಪ್ಪ ಮತ್ತು ತಂದೆ ತಿಮ್ಮಯ್ಯ ಚೆಕ್ ಸ್ವೀಕರಿಸಿದರು. ಕೃಷಿ ಪದವಿ ಮುಗಿಸಿರುವ ಮೃತನ ಸೋದರನಿಗೆ ಸರ್ಕಾರಿ ಉದ್ಯೋಗ ನೀಡುವಂತೆ ಕುಟುಂಬ ಸದಸ್ಯರು ಮನವಿ ಮಾಡಿದರು.

ತಾಲ್ಲೂಕಿನ ಕುರುಟಹಳ್ಳಿ ಗ್ರಾಮದ ಕೆ.ಟಿ.ಶ್ರವಣ್ ಬೆಂಗಳೂರಿನ ಅಂಬೇಡ್ಕರ್ ದಂತ ವೈದ್ಯಕೀಯ ಕಾಲೇಜಿನಲ್ಲಿ ದ್ವಿತೀಯ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ.

ಅಕ್ಷತಾ ಅಂಬಳಿ ಕುಟುಂಬಕ್ಕೆ ಪರಿಹಾರ

ಸಿದ್ದಾಪುರ (ಉತ್ತರಕನ್ನಡ ಜಿಲ್ಲೆ): ಬೆಂಗಳೂರಿನಲ್ಲಿ ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತ ಪ್ರಕರಣದಲ್ಲಿ ಮೃತಪಟ್ಟ ಅಕ್ಷತಾ ಅಂಬಳಿ ಅವರ ಕುಟುಂಬಕ್ಕೆ ಸರ್ಕಾರದ ಪರವಾಗಿ ಜಿಲ್ಲಾಡಳಿತವು ಸೋಮವಾರ ₹ 25 ಲಕ್ಷ ಪರಿಹಾರದ ಚೆಕ್ ವಿತರಿಸಿತು.

ಪಟ್ಟಣದ ರವೀಂದ್ರನಗರದಲ್ಲಿ ಇರುವ ಅಕ್ಷತಾ ಅವರ ಮನೆಗೆ ಶಾಸಕ ಭೀಮಣ್ಣ ನಾಯ್ಕ ಮತ್ತು ಜಿಲ್ಲಾಧಿಕಾರಿ ಲಕ್ಷ್ಮಿಪ್ರಿಯಾ.ಕೆ ಅವರು ಕುಟುಂಬ ಸದಸ್ಯರನ್ನು ಭೇಟಿಯಾಗಿ ಸಾಂತ್ವನ ಹೇಳಿದರು.

ಕಾಲ್ತುಳಿತ ಪ್ರಕರಣ

ಕಾಲ್ತುಳಿತ ದುರಂತ; ₹25 ಲಕ್ಷ ಪರಿಹಾರ, ಆಕ್ಸಿಜನ್ ದುರಂತ; ₹2 ಲಕ್ಷದಿಂದ ₹5 ಲಕ್ಷ ಪರಿಹಾರ

‘ಪರಿಹಾರ’ದಲ್ಲಿ ತಾರತಮ್ಯ: ಆಕ್ರೋಶ

• ಬಾಲಚಂದ್ರ ಎಚ್.

ಚಾಮರಾಜನಗರ: ‘ಬೆಂಗಳೂರಿನಲ್ಲಿ ಈಚೆಗೆ ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ₹25 ಲಕ್ಷ ಪರಿಹಾರ ನೀಡಿರುವ ರಾಜ್ಯ ಸರ್ಕಾರ, ನಾಲ್ಕು ವರ್ಷಗಳ ಹಿಂದೆ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಸಿಗದೆ ಅಸುನೀಗಿದ 34 ಮಂದಿಯ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಿಲ್ಲ’ ಎಂದು ದಲಿತ, ಪ್ರಗತಿಪರ ಹಾಗೂ ಕನ್ನಡಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.

‘ಕಾಲ್ತುಳಿತ ಹಾಗೂ ಆಕ್ಸಿಜನ್ ದುರಂತ ಪ್ರಕರಣಗಳಲ್ಲಿ ಸರ್ಕಾರ ತಾರತಮ್ಯ ಅನುಸರಿಸಿದೆ. ಜನಾಕ್ರೋಶ ಹೆಚ್ಚಾಗುವ ಪ್ರಕರಣಗಳಿಗೆ ಒಂದು ರೀತಿ, ಇತರ ಪ್ರಕರಣಗಳಿಗೆ ಮತ್ತೊಂದು ರೀತಿಯ ಪರಿಹಾರ ನೀಡಿ ಅಮಾಯಕರ ಸಾವಿನ ವಿಚಾರದಲ್ಲಿ ರಾಜಕೀಯ ಮಾಡುತ್ತಿದೆ’ ಎಂದು ಆರೋಪಿಸಿವೆ.

‘ಸರ್ಕಾರ ಮಲತಾಯಿ ಧೋರಣೆ ಬಿಟ್ಟು ಆಕ್ಸಿಜನ್ ಸಂತ್ರಸ್ತರಿಗೆ ಗರಿಷ್ಠ ಪರಿಹಾರ ಹಾಗೂ ಸರ್ಕಾರಿ ಉದ್ಯೋಗ ನೀಡಬೇಕು. ಇಲ್ಲವಾದರೆ ರಾಜ್ಯದಾದ್ಯಂತ ಹೋರಾಟ ತೀವ್ರಗೊಳಿಸಬೇಕಾಗುತ್ತದೆ’ ಎಂದು ದಲಿತ ಮುಖಂಡ ಸಿ.ಎಂ. ಕೃಷ್ಣಮೂರ್ತಿ ಎಚ್ಚರಿಕೆ ನೀಡಿದ್ದಾರೆ. ಈ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲೂ ಚರ್ಚೆ ನಡೆಯುತ್ತಿದೆ.

ಪ್ರಕರಣದ ಹಿನ್ನೆಲೆ: 2021ರ ಮೇ 2ರಂದು ರಾತ್ರಿ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ 36 ಮಂದಿ ಅಸುನೀಗಿದರು. ಮೃತರ ಪೈಕಿ ಹೆಚ್ಚಿನವರು ದಲಿತ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದರು. ಕೋವಿಡ್–19ನಿಂದ ಪ್ರಾಣ ಉಳಿಸಿಕೊಳ್ಳಲು ಬಂದವರು ಸಕಾಲದಲ್ಲಿ ಆಮ್ಲಜನಕ ಸಿಗದೆ ನರಳಿ ಜೀವ ಬಿಡಬೇಕಾಯಿತು.



ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ನಾಲ್ಕು ವರ್ಷಗಳ ಹಿಂದೆ ಸಂಭವಿಸಿದ ಆಮ್ಲಜನಕ ದುರಂತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರು

ಇಂದು ಸಭೆ

ಸರ್ಕಾರದ ತಾರತಮ್ಯ ನೀತಿ ವಿರೋಧಿಸಿ ಹೋರಾಟ ರೂಪಿಸುವ ಸಂಬಂಧ ಜೂನ್ 10ರಂದು ಬೆಳಿಗ್ಗೆ 11.30ಕ್ಕೆ ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ಜಿಲ್ಲೆಯ ಎಲ್ಲ ಪ್ರಗತಿಪರ, ರೈತಪರ, ಕನ್ನಡಪರ, ದಲಿತಪರ ಹೋರಾಟಗಾರರ ಹಾಗೂ ಸಂತ್ರಸ್ತರ ಸಭೆ ಕರೆಯಲಾಗಿದೆ ಎಂದು ದಲಿತ ಮುಖಂಡ ಸಿ.ಎಂ.ಕೃಷ್ಣಮೂರ್ತಿ ತಿಳಿಸಿದರು.

ಕಾಲ್ತುಳಿತದಲ್ಲಿ ಮೃತರಾದವರ ಕುಟುಂಬಗಳಿಗೆ ₹25 ಲಕ್ಷ ಪರಿಹಾರ ಘೋಷಣೆ ಉತ್ತಮ ನಿರ್ಧಾರ. ಆದರೆ, ಸರ್ಕಾರದ ಬೇಜವಾಬ್ದಾರಿಯಿಂದ ಆಮ್ಲಜನಕ ಸಿಗದೆ ಮೃತಪಟ್ಟ 36 ಜನರ ಸಾವಿನ ಬಗ್ಗೆ ಕರುಣೆ ತೋರಿಲ್ಲ

ಜ್ಯೋತಿ ಬಿಸಲವಾಡಿ, ಸಂತ್ರಸ್ತೆ

ನಾಲ್ಕು ವರ್ಷಗಳಿಂದ ಸೂಕ್ತ ಪರಿಹಾರಕ್ಕಾಗಿ, ಸರ್ಕಾರಿ ಉದ್ಯೋಗಕ್ಕಾಗಿ ಅಂಗಲಾಚುತ್ತಿದ್ದರೂ ಸರ್ಕಾರ ಸ್ಪಂದಿಸಿಲ್ಲ. ಬಡವರ ಸಾವಿಗೆ ಬೆಲೆ ಇಲ್ಲ

ನಾಗರತ್ನಾ, ಸಂತ್ರಸ್ತೆ

ಈ ದುರ್ಘಟನೆ ನಡೆದು 4 ವರ್ಷಗಳು ಕಳೆದರೂ ಸಂತ್ರಸ್ತರಿಗೆ ಸಮರ್ಪಕವಾದ ಪರಿಹಾರವಾಗಲಿ, ಆಶ್ವಾಸನೆಯಂತೆ ಸರ್ಕಾರಿ ಉದ್ಯೋಗವಾಗಲಿ ಸಿಕ್ಕಿಲ್ಲ. ಇಂದಲ್ಲ; ನಾಳೆ ಪರಿಹಾರ ಹಾಗೂ ಉದ್ಯೋಗ ಸಿಗಬಹುದು ಎಂಬ ನಿರೀಕ್ಷೆಯೊಂದಿಗೆ ಸಂತ್ರಸ್ತರ ಕುಟುಂಬಗಳು ದಿನ ದೂಡುತ್ತಿವೆ.

ಪರಿಹಾರ ಸಿಕ್ಕಿದ್ದೆಷ್ಟು: ದುರಂತ ಸಂಬಂಧ ಹೈಕೋರ್ಟ್ ನೇಮಿಸಿದ್ದ ಸಮಿತಿಯ ವರದಿ ಆಧರಿಸಿ ಸರ್ಕಾರ 13 ಕುಟುಂಬಗಳಿಗೆ ತಲಾ ₹5 ಲಕ್ಷ, 11 ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ನೀಡಿದೆ. ಉಳಿದ 12 ಕುಟುಂಬಗಳಿಗೆ ಕಾಂಗ್ರೆಸ್ ಪಕ್ಷದಿಂದ ತಲಾ ₹1 ಲಕ್ಷ ಪರಿಹಾರವಷ್ಟೆ ಸಿಕ್ಕಿದೆ.

‘ಭಾರತ್ ಜೋಡೊ’ ಯಾತ್ರೆ ಭಾಗವಾಗಿ ಗುಂಡ್ಲುಪೇಟೆ ತಾಲ್ಲೂಕಿಗೆ ಬಂದಿದ್ದ ರಾಹುಲ್ ಗಾಂಧಿ, ‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಸರ್ಕಾರಿ ಕೆಲಸ ನೀಡಲಾಗುವುದು’ ಎಂಬ ಭರವಸೆ ಕೊಟ್ಟಿದ್ದರು. ರಾಹುಲ್ ವಾಗ್ದಾನಕ್ಕೆ ಡಿ.ಕೆ. ಶಿವಕುಮಾರ್ ಸಾಕ್ಷಿಯಾಗಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ ಕಳೆದರೂ ಭರವಸೆ ಈಡೇರಿಲ್ಲ’ ಎಂದು ದೂರುತ್ತಾರೆ ಸಂತ್ರಸ್ತರ ಪರ ಹೋರಾಟದಲ್ಲಿ ನಿರತರಾಗಿರುವ ಮಹೇಶ್ ಗಾಳಿಪುರ.

ಸಂತ್ರಸ್ತರ ನಿರೀಕ್ಷೆ ಏನಿತ್ತು: ‘ಈಚೆಗೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರಿ ಉದ್ಯೋಗ ಘೋಷಣೆಯ ನಿರೀಕ್ಷೆ ಹುಸಿಯಾಯಿತು. ಮುಂಬರುವ ಸಚಿವ ಸಂಪುಟದಲ್ಲಾದರೂ ಬೇಡಿಕೆ ಈಡೇರಬಹುದು ಎಂಬ ನಿರೀಕ್ಷೆ ಇದೆ’ ಎನ್ನುತ್ತಾರೆ ಸಂತ್ರಸ್ತೆ ಜ್ಯೋತಿ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಂತರಿಕ್ಷಯಾನ ಮುಂದೂಡಿಕೆ

ಭಾರತದ ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು ಮೂವರ ಅಂತರಿಕ್ಷಯಾನವನ್ನು ಹವಾಮಾನ ವೈಪರೀತ್ಯದ ಕಾರಣ ಜೂನ್ 11ಕ್ಕೆ ಮುಂದೂಡಲಾಗಿದೆ ಎಂದು ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ತಿಳಿಸಿದ್ದಾರೆ.



ಆಳ–ಅಗಲ
ಉತ್ಪಾದನೆ ಸ್ಥಗಿತ ಬದುಕಿಗೆ ಹೊಡೆತ
ಕ್ವಿಂಟಲ್ ಕೊಬ್ಬರಿ ₹22 ಸಾವಿರ 10
ರೈಲಿನಿಂದ ಬಿದ್ದು ನಾಲ್ವರ ಸಾವು 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,445 ▲	25,103 ▲	₹1 ಲಕ್ಷ (ಬೆಂಗಳೂರು) ▼	₹1.07 ಲಕ್ಷ (ಬೆಂಗಳೂರು) ▼	85.66 ▲

ವಿವಿಧ ಕ್ಷೇತ್ರಗಳಲ್ಲಿ ಕ್ಷಿಪ್ರ ಪರಿವರ್ತನೆ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): 'ಎನ್‌ಡಿಎ ಸರ್ಕಾರದ 11 ವರ್ಷಗಳ ಆಡಳಿತದಲ್ಲಿ ಭಾರತವು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಬದಲಾಗಿರುವ ಜತೆಯಲ್ಲೇ ಹವಾಮಾನ ಮತ್ತು ಡಿಜಿಟಲ್ ನಾವೀನ್ಯತೆಯಂತಹ ವಿಷಯಗಳಲ್ಲಿ ಪ್ರಮುಖ ಜಾಗತಿಕ ಧ್ವನಿಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ತಮ್ಮ ಮೂರನೇ ಅವಧಿಯ ಆಡಳಿತದ ಮೊದಲ ವರ್ಷವನ್ನು ಸೋಮವಾರ ಪೂರ್ಣಗೊಳಿಸಿರುವುದಾಗಿ ಅವರು ಹೇಳಿದರು.

5

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಡಿಸಿಎಂಗೂ ಸೂಚನೆ • ಕಾಲ್ತುಳಿತ ಘಟನೆ ಗಂಭೀರವಾಗಿ ಪರಿಗಣಿಸಿದ ಕಾಂಗ್ರೆಸ್

ಸಿ.ಎಂ.ಗೆ ರಾಹುಲ್ ಬುಲಾವ್

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತು-ಳಿತದಲ್ಲಿ 11 ಜನರು ಸಾವಿಗೀಡಾದ ಘಟನೆಯನ್ನು ಕಾಂಗ್ರೆಸ್ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ. ಪಕ್ಷದ ವರಿಷ್ಠರ ಕರೆ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ (ಜೂನ್ 10) ದೆಹಲಿಗೆ ದೌಡಾಯಿಸಲಿದ್ದಾರೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ರಾಜ್ಯದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಉಭಯ ನಾಯಕರ ಜೊತೆ ಬೆಳಿಗ್ಗೆ 11 ಗಂಟೆಗೆ ಚರ್ಚೆ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ನವದೆಹಲಿ ಮುನಿಸಿಪಲ್ ಕಾರ್ಪೊರೇಷನ್‌ನ ಘನತ್ಯಾಜ್ಯ ವಿಲೇವಾರಿ ಘಟಕ ವೀಕ್ಷಿಸಲು ಭಾನುವಾರ ರಾತ್ರಿ ದೆಹಲಿಗೆ ತೆರಳಿದ್ದ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಸಂಜೆ ನಗರಕ್ಕೆ ವಾಪಸಾಗಿದ್ದಾರೆ. ವರಿಷ್ಠರಿಂದ ಆಹ್ವಾನ ಬಂದ ಕಾರಣ ಮಂಗಳವಾರ ಬೆಳಿಗ್ಗೆ ಮತ್ತೆ ಅವರು ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.

ಈ ಮಧ್ಯೆ, ಗೃಹ ಸಚಿವ ಜಿ. ಪರಮೇಶ್ವರ, ಕಾನೂನು ಸಚಿವ ಎಚ್‌.ಕೆ. ಪಾಟೀಲ, ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಗುಪ್ತಚರ ವಿಭಾಗದ ಎಡಿಜಿಪಿ ಎಸ್. ರವಿ ಜೊತೆ ಮುಖ್ಯಮಂತ್ರಿ ಅವರು, ಸೋಮವಾರ ಸಂಜೆ ಸುಮಾರು ಎರಡೂವರೆ ಗಂಟೆ ಸಮಾಲೋಚನೆ ನಡೆಸಿದರು.

ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಮಂಗಳವಾರ ವಿಚಾರಣೆಗೆ ಬರಲಿದೆ. ಹಿಂದಿನ ವಿಚಾರಣೆಯ ವೇಳೆ ನ್ಯಾಯಪೀಠವು ಹಲವರ ಪಿಐಎಲ್ ಮನವಿಗಳನ್ನು ಆಲಿಸಿತ್ತು. ಅಲ್ಲದೆ, ಘಟನೆಗೆ ಸಂಬಂಧಿಸಿದ ಸಂಪೂರ್ಣ ವಸ್ತುಸ್ಥಿತಿ ವರದಿಯನ್ನು ಸಲ್ಲಿಸುವಂತೆ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿಗೆ ನಿರ್ದೇಶಿಸಿತ್ತು.

ಪೊಲೀಸ್ ವೈಫಲ್ಯ ಒಪ್ಪಿಕೊಳ್ಳಲು ತೀರ್ಮಾನ: 'ಹೈಕೋರ್ಟ್‌ಗೆ ಸಲ್ಲಿಸಲು ಸಿದ್ಧಪಡಿಸಿದ್ದ ವಸ್ತುಸ್ಥಿತಿ ವರದಿಯನ್ನು ಪೊಲೀಸ್ ಅಧಿಕಾರಿಗಳು ಸಭೆಯ ಮುಂದಿಟ್ಟರು. ಪೊಲೀಸ್ ವೈಫಲ್ಯವನ್ನು ಒಪ್ಪಿಕೊಂಡು, ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸುವುದಾಗಿ ಹೈಕೋರ್ಟ್‌ಗೆ ಈ ವರದಿ ಮೂಲಕ ಮನವರಿಕೆ ಮಾಡಲು ಸರ್ಕಾರ ನಿರ್ಧರಿಸಿದೆ' ಎಂದು ಸರ್ಕಾರದ ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ವಿಚಾರಣೆ ಇಂದು

ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ, ಘಟನೆ ನಡೆದ ಮರುದಿನವೇ ಸ್ವಯಂಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ದಾಖಲಿಸಿಕೊಂಡಿದ್ದ ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿತ್ತು. ಈ ಪ್ರಕರಣದ ವಿಚಾರಣೆ ಮಂಗಳವಾರ ನಡೆಯಲಿದೆ.

ರಾಜ್ಯಪಾಲರನ್ನೇ ಕೇಳಿ– ಡಿಕೆಶಿ



ಶಿವಕುಮಾರ್

'ಆರ್‌ಸಿಬಿ ತಂಡಕ್ಕೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ನಡೆದ ಸನ್ಮಾನ ಸಮಾರಂಭದಲ್ಲಿ ಭಾಗವಹಿಸುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಆಹ್ವಾನ ಕೊಟ್ಟಿದ್ದು ಯಾರು ಎಂಬುದನ್ನು ರಾಜ್ಯಪಾಲರನ್ನೇ ಕೇಳಿ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯ ಜೊತೆ ರಾಜ್ಯಪಾಲರೂ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

'ರಾಜ್ಯಪಾಲರಿಗೆ ಆಹ್ವಾನ ಕೊಟ್ಟಿದ್ದು ಯಾರು' ಎಂದು ದೆಹಲಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಈ ರೀತಿ ಪ್ರತಿಕ್ರಿಯಿಸಿದ ಶಿವಕುಮಾರ್, 'ಕಾಲ್ತುಳಿತ ಘಟನೆಯ ಬಗ್ಗೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ಅವರ ಆಯೋಗ ತನಿಖೆ ಮಾಡುತ್ತಿದೆ. ತನಿಖೆ ಮೇಲೆ ಪ್ರಭಾವ ಬೀರಬಾರದು. ಹೀಗಾಗಿ, ಈ ವಿಚಾರವಾಗಿ ನಾನು ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

'ಕಾಲ್ತುಳಿತ ಘಟನೆ–ಬಂಧನ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಸಿಬಿ ವಿಜಯೋತ್ಸವದ ವೇಳೆ ಉಂಟಾದ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ರಾಯಲ್ ಚಾಲೆಂಜರ್ಸ್ ಸ್ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್, ಡಿಎನ್‌ಎ ಎಂಟರ್‌ಟೈನ್ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಪದಾಧಿ-ಕಾರಿಗಳನ್ನು ಬಂಧಿಸಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.



ಈ ಕುರಿತಂತೆ ಕಂಪನಿಯ ಮುಖ್ಯಸ್ಥರು ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರುಗಳಾದ ಸಂದೇಶ್ ಜೆ.ಚೌಟ, ಸಿ.ವಿ. ನಾಗೇಶ್, ಸಿ.ಕೆ.ನಂದಕುಮಾರ್ ಮತ್ತು ಸಂಪತ್ ಕುಮಾರ್ ಅವರ ಸುದೀರ್ಘವಾದ ಆಲಿಸಿದ ನ್ಯಾಯಪೀಠ, ಅರ್ಜಿದಾರರ ವಿರುದ್ಧ ಬಲವಂತದ ಕ್ರಮಕ್ಕೆ ಮುಂದಾಗದಂತೆ ರಾಜ್ಯ ಸರ್ಕಾರಕ್ಕೆ ಮೌಖಿಕವಾಗಿ ನಿರ್ದೇಶಿಸಿತು.

ಒಂದು ಹಂತದಲ್ಲಿ ಅರ್ಜಿದಾರರ ವಾದವನ್ನು ಬಲವಾಗಿ ಅಲ್ಲಗಳೆದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, 'ಅರ್ಜಿದಾರರಿಗೆ ಮಧ್ಯಂತರ ರಕ್ಷಣೆ ನೀಡುವುದು ಸುತರಾಂ ಸಲ್ಲದು' ಎಂದು ಬಲವಾಗಿ ವಿರೋಧಿಸಿದರು.

ಅಂತಿಮವಾಗಿ ನ್ಯಾಯಪೀಠ, 'ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಬೇಡ' ಎಂದು ಅಡ್ವೊಕೇಟ್ ಜನರಲ್ ಮತ್ತು ರಾಜ್ಯ ಪ್ರಾಸಿಕ್ಯೂಷನ್‌ನ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರಿಗೆ ಮೌಖಿಕವಾಗಿ ನಿರ್ದೇಶಿಸಿತು.

5ನೇ ಪುಟ ನೋಡಿ

ಇ–ಖಾತಾ ಇಲ್ಲದಿದ್ದರೆ ಕಟ್ಟಡ ನಕ್ಷೆ ಇಲ್ಲ

ನಿರ್ಮಾಣವಾದ ಕಟ್ಟಡಕ್ಕೂ ಜುಲೈ 1ರಿಂದ ಒ.ಸಿ ಸಿಗುವುದಿಲ್ಲ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ನಿವೇಶನಗಳಿಗೆ ಇ-ಖಾತಾ ಇಲ್ಲದಿದ್ದರೆ ಜುಲೈ 1ರಿಂದ ಕಟ್ಟಡ ನಕ್ಷೆಗೆ ಮಂಜೂರಾತಿ, ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ (ಸಿ.ಸಿ) ಸಿಗುವುದಿಲ್ಲ.

ನಿವೇಶನಗಳ ದಾಖಲೆಗಳನ್ನು ಮರು ಪರಿಶೀಲಿಸಿಕೊಳ್ಳುವ ಜೊತೆಗೆ ಡಿಜಿಟಲೀಕರಣದ ಇ-ಖಾತಾ ವ್ಯವಸ್ಥೆಯನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ 2024ರ ಸೆಪ್ಟೆಂಬರ್‌ನಲ್ಲಿ ಜಾರಿ ಮಾಡಲಾಗಿತ್ತು. 25 ಲಕ್ಷ ನಿವೇಶನಗಳಿಗೆ ಕರಡು ಇ-ಖಾತಾ ರಚಿಸಲಾಗಿದ್ದರೂ, ಈವರೆಗೆ ಸುಮಾರು 5 ಲಕ್ಷ ಅಂತಿಮ ಇ-ಖಾತಾಗಳನ್ನು ಮಾತ್ರ ನೀಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯ ಎಲ್ಲ ನಿವೇಶನ, ಕಟ್ಟಡಗಳ ಮಾಲೀಕರು ಇ-ಖಾತಾವನ್ನು ಪಡೆದು ಕೊಳ್ಳಬೇಕು. ಆದರೆ, ಇ-ಖಾತಾ ಪಡೆಯಲು ಯಾವುದೇ ಗಡುವು ನೀಡಿಲ್ಲ. ಲಕ್ಷಾಂತರ ಮಾಲೀಕರು ಇನ್ನೂ ಕರಡು ಇ-ಖಾತಾವನ್ನೇ ಪಡೆದು ಕೊಂಡಿಲ್ಲ. ಲಕ್ಷಾಂತರ ಮಾಲೀಕರು ಅಂತಿಮ ಇ-ಖಾತಾ ಪಡೆಯಲು ದಾಖಲೆ ಸಲ್ಲಿಸಿಲ್ಲ.

ಮೊದಲ ಹಂತವಾಗಿ, ಕಟ್ಟಡ ನಕ್ಷೆ, ಸಿ.ಸಿ ಪಡೆಯಲು ಇ-ಖಾತಾವನ್ನು ಕಡ್ಡಾಯಗೊಳಿಸಲಾಗುತ್ತಿದೆ. ಇದಲ್ಲದೆ, ಈಗಾಗಲೇ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳು ಸ್ವಾಧೀನಾನುಭವ ಪತ್ರ (ಒ.ಸಿ) ಪಡೆದು ಕೊಳ್ಳಬೇಕಾದರೂ ಇ-ಖಾತಾ ಸಲ್ಲಿಸುವುದು ಕಡ್ಡಾಯವಾಗಲಿದೆ.

ಸುಪ್ರೀಂ ಕೋರ್ಟ್ ಆದೇಶದಂತೆ ಅನಧಿಕೃತ ಕಟ್ಟಡ, ನಕ್ಷೆ ಉಲ್ಲಂಘಿಸಿ ನಿರ್ಮಾಣವಾಗುತ್ತಿರುವ ಕಟ್ಟಡಗಳಿಗೆ ಸಂಬಂಧಿಸಿ ಕೈಗೊಳ್ಳಬೇಕಾದ ಕ್ರಮಗಳನ್ನು ಬಿಬಿಎಂಪಿ ಜನವರಿಯಿಂದ ಜಾರಿ ಮಾಡಿದ್ದು, ಒ.ಸಿ, ಸಿ.ಸಿ ಇಲ್ಲದ ಕಟ್ಟಡಗಳಿಗೆ ವಿದ್ಯುತ್ ಮತ್ತು ನೀರು, ಒಳಚರಂಡಿ ಸಂಪರ್ಕ ನೀಡುವಂತಿಲ್ಲ.

25 ಲಕ್ಷ ಅಪ್‌ಲೋಡ್ ಮಾಡಿರುವ ಕರಡು ಇ-ಖಾತಾಗಳು

4,94,882 ಅಂತಿಮ ಇ-ಖಾತಾ ಪಡೆಯಲು ಸಲ್ಲಿಸಿರುವ ಅರ್ಜಿಗಳು

4,84,975 ಅಂತಿಮ ಇ-ಖಾತಾ ವಿತರಣೆ

4ನೇ ಪುಟ ನೋಡಿ

ಬಮೂಲ್‌ನಿಂದ ದೇಶದಲ್ಲೇ ಮೊತ್ತ ಮೊದಲ ಪ್ರಯೋಗ

ಕರಗಬಲ್ಲ ಪೊಟ್ಟಣದಲ್ಲಿ 'ನಂದಿನಿ'

ಪ್ರಜಾವಾಣಿ ವಾರ್ತೆ


ಬೆಂಗಳೂರು/ರಾಮನಗರ: ಬೆಂಗಳೂರು ಹಾಲು ಒಕ್ಕೂಟವು (ಬಮೂಲ್) ಮಣ್ಣಿನಲ್ಲಿ ಕರಗಬಲ್ಲ ಪ್ಲಾಸ್ಟಿಕ್‌ನಲ್ಲಿ ಹಾಲಿನ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸುವ ಮೂಲಕ ಪರಿಸರ ಸ್ನೇಹಿ ಹೆಜ್ಜೆ ಇರಿಸಿದೆ.

ಸದ್ಯ ಬಳಕೆಯಾಗುತ್ತಿರುವ ಪಾಲಿಥಿನ್ ಪೊಟ್ಟಣಗಳ ಬದಲಿಗೆ ಜೈವಿಕವಾಗಿ ವಿಘಟನೆಯಾಗುವ (ಬಯೋ ಡಿಗ್ರೇಡೆಬಲ್) ಪ್ಲಾಸ್ಟಿಕ್ ಪೊಟ್ಟಣದಲ್ಲಿ ನಂದಿನಿ ಹಾಲಿನ ಪೂರೈಕೆಯನ್ನು ಬಮೂಲ್ ಆರಂಭಿಸಿದೆ.

ಕನಕಪುರ ತಾಲ್ಲೂಕಿನ ಶಿವನಹಳ್ಳಿಯಲ್ಲಿರುವ ಬಮೂಲ್‌ನ ಮೆಗಾ ಡೇರಿ ಘಟಕವು ಇಂತಹದ್ದೊಂದು ಪ್ರಯೋಗಕ್ಕೆ ಸಾಕ್ಷಿಯಾಗಿದ್ದು, ಇದು ದೇಶದಲ್ಲೇ ಮೊದಲು ಎನಿಸಿದೆ. ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಮಣ್ಣಿನಲ್ಲಿ ಕರಗಲು ಕನಿಷ್ಠ 500 ವರ್ಷ ಬೇಕು. ಆದರೆ, ಬಮೂಲ್ ಬಳಸಲು ಮುಂದಾಗಿರುವ ಬಯೋಡಿಗ್ರೇಡೆಬಲ್ ಪ್ಲಾಸ್ಟಿಕ್ ಕೇವಲ 6 ತಿಂಗಳಲ್ಲಿ ಕರಗಲಿದೆ. ಮಾತ್ರವಲ್ಲ, ಜೈವಿಕ ಗೊಬ್ಬರವಾಗಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ ಎಂದು ಬಮೂಲ್‌ನ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

10ನೇ ಪುಟ ನೋಡಿ

ದೇಗುಲಗಳಲ್ಲಿ ಪ್ಲಾಸ್ಟಿಕ್ ನಿಷೇಧ



ರಾಮಲಿಂಗಾ ರೆಡ್ಡಿ

ಬೆಂಗಳೂರು: ರಾಜ್ಯದ ದೇವಸ್ಥಾನಗಳಲ್ಲಿ ಆಗಸ್ಟ್ 15ರಿಂದ ನೀರಿನ ಬಾಟಲ್ ಸೇರಿ ಎಲ್ಲ ರೀತಿಯ ಪ್ಲಾಸ್ಟಿಕ್‌ಗಳ ಬಳಕೆ ನಿಷೇಧಿಸಲಾಗು-ವುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಹೇಳಿದರು.

ಸೋಮವಾರ ಮುಜರಾಯಿ ಇಲಾಖೆ ಅಧಿಕಾರಿಗಳ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ನಿಷೇಧ ಜಾರಿಗೆ ಎರಡು ತಿಂಗಳು ಸಮಯ ನೀಡಿದ್ದು, ದೇವಸ್ಥಾನಗಳಲ್ಲಿ ಈಗಾಗಲೇ ಪ್ಲಾಸ್ಟಿಕ್ ವಸ್ತುಗಳನ್ನು ಖರೀದಿಸಿದ್ದರೆ, ಅವುಗಳನ್ನು ಬಳಕೆ ಮಾಡಬಹುದು. ಆದರೆ, ಆ.15 ರ ಬಳಿಕ ಪ್ಲಾಸ್ಟಿಕ್ ಬಳಕೆಗೆ ಅವಕಾಶ ಇರುವುದಿಲ್ಲ ಎಂದು ಹೇಳಿದರು.

ರಾಜ್ಯದ 8 ಜಿಲ್ಲೆಗಳಲ್ಲಿ ಧಾರ್ಮಿಕ ಪರಿಷತ್ ರಚಿಸಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಆದಷ್ಟು ಬೇಗನೆ ಧಾರ್ಮಿಕ ಪರಿಷತ್ ರಚಿಸಲಾಗುವುದು ಎಂದು ತಿಳಿಸಿದರು.

10ನೇ ಪುಟ ನೋಡಿ



ಮಂಗಳವಾರದ ಉಷ್ಣಾಂಶ
30° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬಿಸಿಲು ಹಾಗೂ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ.

ಮುನ್ಸೂಚನೆ: ಬುಧವಾರ 32° 20° | ಗುರುವಾರ 32° 20° | ಶುಕ್ರವಾರ 32° 20°

ಪಬ್ ಎದುರು ಗಲಾಟೆ: ಬಂಧನ

ಪ್ರಜಾವಾಣಿ ವಾರ್ತೆ


ಜಿಪ್ಸನ್ ಜಾರ್ಜ್


ರಿಫಾಯ್


ಮೆರಿಕ್

ಬೆಂಗಳೂರು: ಪಬ್ ಎದುರು ಯುವತಿಯ ವಿಚಾರಕ್ಕೆ ಎರಡು ಗುಂಪುಗಳ ಮಧ್ಯೆ ನಡೆದಿದ್ದ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಕೋರಮಂಗಲ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗಲಾಟೆಯಲ್ಲಿ ಒಬ್ಬ ಯುವಕ ಗಂಭೀರವಾಗಿ ಗಾಯಗೊಂಡಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ನಡೆಸಿ ಮೂವರನ್ನು ಬಂಧಿಸಿದ್ದಾರೆ. ಉಳಿದವರು ಪರಾರಿ ಆಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೇರಳದ ಜಿಪ್ಸನ್ ಜಾರ್ಜ್(29), ಮೆರಿಕ್(29) ಮತ್ತು ರಿಫಾಯ್(22) ಬಂಧಿತರು.

ಘಟನೆಯಲ್ಲಿ ಯದು ಎಂಬಾತ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಿಡುಗಡೆಯಾಗಿದ್ದಾರೆ.

ಏನಿದು ಘಟನೆ?: ಜೂನ್ 7ರಂದು ಮಧ್ಯರಾತ್ರಿ 1ರ ಸುಮಾರಿಗೆ ಕೋರಮಂಗಲದಲ್ಲಿ ಎರಡು ಗುಂಪುಗಳ ಮಧ್ಯೆ ಗಲಾಟೆ ನಡೆದಿತ್ತು. ಒಂದು ಗುಂಪಿನ ಸದಸ್ಯರು, ಯುವತಿಯನ್ನು ಮಾತನಾಡಿಸಲು ಯತ್ನಿಸಿದ್ದರು. ಆಕೆಯ ಸ್ನೇಹಿತರು ಎದುರಾಳಿ ಗುಂಪಿನೊಂದಿಗೆ ವಾಗ್ವಾದ ನಡೆಸಿದ್ದರು. ಅದು ವಿಕೋಪಕ್ಕೆ ತಿರುಗಿ ಯದು ಎಂಬುವವರ ಮೇಲೆ ಹಲ್ಲೆ ನಡೆಸಲಾಗಿತ್ತು ಎಂದು ಪೊಲೀಸರು ಹೇಳಿದರು.

'ಯುವತಿ ವಿಚಾರಕ್ಕೆ ಕೇರಳದ ಯುವಕರ ಗುಂಪು ಪಬ್‌ವೊಂದರ ಎದುರು ಗಲಾಟೆ ಮಾಡಿಕೊಂಡಿದ್ದರು. ಈ ವೇಳೆ ಸ್ಥಳದಲ್ಲಿದ್ದ ಕಲ್ಲುಗಳನ್ನು ಎಸೆದು ಹಲ್ಲೆ ಮಾಡಿಕೊಂಡಿದ್ದರು. ಹಲ್ಲೆ ನಡೆಸುತ್ತಿರುವ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಆ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಬಾಲಕಿ ಶವ ಪತ್ತೆ ಪ್ರಕರಣ: 7 ಮಂದಿ ಸೆರೆ

ಆನೇಕಲ್: ತಾಲ್ಲೂಕಿನ ಹಳೇ ಚಂದಾಪುರದಲ್ಲಿ ಮೇ 21ರಂದು ಸೂಟ್‌ಕೇಸ್‌ನಲ್ಲಿ ಬಾಲಕಿ ಶವ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಹಾರದ ಏಳು ಮಂದಿಯನ್ನು ಚಂದಾಪುರ ಸೂರ್ಯಸಿಟಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಬಿಹಾರದ ಆಶಿಕ್ ಕುಮಾರ್ (42), ಮುಖೇಶ್ ರಾಜವಂಶಿ (35), ಈತನ ಪತ್ನಿ ಇಂದುಮತಿ (32), ರಾಜಕುಮಾರ್ (18), ಪಿಂಟು (19), ಕುಮಾರ್ (18) ಮತ್ತು ಒಬ್ಬ ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕ ಬಂಧಿತರು.

ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಕೆಜಿಎಫ್: ಬೆಮಲ್ ನಗರದ ಬಳಿ ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್ ಕಾರಿಡಾರ್ ಟೋಲ್ ಬಳಿ ಸೋಮವಾರ ಸಂಭವಿಸಿದ ಕಾರು ಅಪಘಾತದಲ್ಲಿ ಮೂವರು ಮೃತಪಟ್ಟಿದ್ದು, ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಕಾರು ಚಾಲನೆ ಮಾಡುತ್ತಿದ್ದ ಬೆಮಲ್ ಎಚ್‌ಪಿ ನಗರ ನಿವಾಸಿ ಜಾನ್ ಬೇಕಲ್ (30), ಕೃಷ್ಣಾವರಂ ನಿವಾಸಿ ನಾಗರಾಜ್ (50) ಮತ್ತು ಸೇನೆಯ ಆರ್ಟಿಲರಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಆಕಾಶ್ (34) ಅಸುನೀಗಿದ್ದಾರೆ.

ಅಂತರ ಕಾಪಾಡಿಕೊಳ್ಳಲು ಯತ್ನಿಸಿದ ಗೃಹಿಣಿ: ಕುಪಿತಗೊಂಡ ಟೆಕಿ; ಚಾಕುವಿನಿಂದ ಇರಿದು ಹತ್ಯೆ

ಜಾತ್ರೆಯಲ್ಲಿ ಅರಳಿದ ಪ್ರೇಮ: ಕೊಲೆಯಲ್ಲಿ ಅಂತ್ಯ

ಪ್ರಜಾವಾಣಿ ವಾರ್ತೆ


ಯಶಸ್


ಹರಿಣಿ

ಅಪರಾಧ ಸುದ್ದಿ

ಬೆಂಗಳೂರು: ತನ್ನಿಂದ ಅಂತರ ಕಾಪಾಡಿಕೊಳ್ಳಲು ಯತ್ನಿಸಿದ ಗೃಹಿಣಿಯನ್ನು ಯುವಕನೊಬ್ಬ ಹೋಟೆಲ್‌ಗೆ ಕರೆದೊಯ್ದು 17 ಬಾರಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದು, ಆರೋಪಿಯನ್ನು ದಕ್ಷಿಣ ವಿಭಾಗದ ಸುಬ್ರಹ್ಮಣ್ಯಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೆಂಗೇರಿಯ ಹರಿಣಿ(33) ಕೊಲೆಯಾದ ಮಹಿಳೆ. ಕೃತ್ಯ ಎಸಗಿದ ಆರೋಪದಡಿ ಟೆಕಿ ಯಶಸ್(25) ಎಂಬಾತನನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಜೂನ್ 7ರಂದು ರಾತ್ರಿ ಠಾಣಾ ವ್ಯಾಪ್ತಿಯ ಪೂರ್ಣಪ್ರಜ್ಞಾ ಲೇಔಟ್‌ನ ಖಾಸಗಿ ಹೋಟೆಲ್‌ವೊಂದರಲ್ಲಿ ಆರೋಪಿ ಕೃತ್ಯ ಎಸಗಿದ್ದಾನೆ. ಬಳಿಕ, ತಾನೂ ಆತ್ಮಹತ್ಯೆಗೆ ಯತ್ನಿಸಿದಂತೆ ನಾಟಕ ವಾಡಿ ಆಸ್ಪತ್ರೆಗೆ ದಾಖಲಾಗಿದ್ದ. ವೈದ್ಯರು ನೀಡಿದ ಮಾಹಿತಿ ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಬಯಲಾಗಿದೆ ಎಂದು ಮೂಲಗಳು ಹೇಳಿವೆ.

'ಹರಿಣಿ ಅವರು ದಾಸೇಗೌಡ ಎಂಬುವವರನ್ನು 2012ರಲ್ಲಿ ಮದುವೆ ಆಗಿದ್ದರು. ದಂಪತಿ ಕೆಂಗೇರಿಯಲ್ಲಿ ವಾಸವಿದ್ದರು. ದಂಪತಿಗೆ 13 ಹಾಗೂ 10 ವರ್ಷದ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಹರಿಣಿ ಅವರು ಜಾತ್ರೆಗೆ ತೆರಳಿದ್ದರು. ಅಲ್ಲಿ ತಲಘಟ್ಟಪುರದ ನಿವಾಸಿ ಯಶಸ್ ಪರಿಚಯವಾಗಿದ್ದ. ಇಬ್ಬರೂ ಮೊಬೈಲ್ ಸಂಖ್ಯೆಯನ್ನು ಪಡೆದುಕೊಂಡು ನಿತ್ಯ ಮಾತುಕತೆ ನಡೆಸುತ್ತಿದ್ದರು. ವಿವಾಹಿತ ಮಹಿಳೆ ಹರಿಣಿ ಹಾಗೂ ಟೆಕಿ ಯಶಸ್ ಮಧ್ಯೆ ಸ್ನೇಹ ಬೆಳೆದಿತ್ತು. ಇಬ್ಬರೂ ಆಗಾಗ್ಗೆ ಭೇಟಿ ಮಾಡುತ್ತಿದ್ದರು. ವಾಟ್ಸ್ ಆ್ಯಪ್‌ನಲ್ಲಿ ಚಾಟಿಂಗ್ ನಡೆಸುತ್ತಿದ್ದರು. ಕೆಲವು ದಿನಗಳ ಬಳಿಕ ಪತ್ನಿಯ ನಡೆ ಪತಿಗೆ ಅನುಮಾನ ತರಿಸಿತ್ತು' ಎಂದು ಮೂಲಗಳು ತಿಳಿಸಿವೆ.

ಫೋನ್ ಕಸಿದುಕೊಂಡು ಬುದ್ಧಿಮಾತು ಹೇಳಿದ್ದ ಪತಿ: 'ದಾಸೇಗೌಡ ಅವರು ಪತ್ನಿಯ ಫೋನ್ ಕಸಿದುಕೊಂಡು ಮನೆಯಲ್ಲೇ ಇರುವಂತೆ ಬುದ್ಧಿಮಾತು ಹೇಳಿದ್ದರು. ಅದರ ಮಾಹಿತಿ ತಿಳಿದಿದ್ದ ಆರೋಪಿ ಯಶಸ್, ಹರಿಣಿ ಭೇಟಿ ಮಾಡಲು ಪದೇ ಪದೇ ಪ್ರಯತ್ನಿಸುತ್ತಿದ್ದ. ಕೆಲವು ದಿನಗಳ ನಂತರ ಮನೆಯಿಂದ ಹೊರ ಬಂದಿದ್ದ ಹರಿಣಿ, ಮತ್ತೆ ತನ್ನ ಗೆಳೆಯನನ್ನು ಸಂಪರ್ಕಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಾಕು ಖರೀದಿಸಿದ್ದ ಆರೋಪಿ: 'ಹರಿಣಿ ಮತ್ತೆ ಸಂಪರ್ಕಕ್ಕೆ ಸಿಗುವುದಿಲ್ಲ ಎಂಬ ಭಾವಿಸಿ ಆಕೆಯನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ. ಚಾಕು ಸಹ ಖರೀದಿಸಿದ್ದ. ಜೂನ್ 7ರಂದು ಆಕೆಯನ್ನು ಸಂಪರ್ಕಿಸಿ ತಮ್ಮ ಜೊತೆಗೆ ಮಾತನಾಡಬೇಕಿದ್ದು, ಪೂರ್ಣಪ್ರಜ್ಞಾ ಲೇಔಟ್‌ಗೆ ಬರುವಂತೆ ತಿಳಿಸಿದ್ದ. ಆರೋಪಿ ಮಾತು ನಂಬಿದ್ದ ಹರಿಣಿ, ಅಂದು ರಾತ್ರಿ ಹೋಟೆಲ್ ಬಳಿಗೆ ಬಂದಿದ್ದರು' ಎಂದು ಪೊಲೀಸರು ಹೇಳಿದರು.

'ಓಯೋ ರೂಂ ಪಡೆದು ಅಲ್ಲಿಗೆ ಮಹಿಳೆಯನ್ನು ಆರೋಪಿ ಕರೆದೊಯ್ದಿದ್ದ. ಅಲ್ಲಿ ದೇಹದ ವಿವಿಧ ಭಾಗಕ್ಕೆ ಇರಿದು ಕೊಲೆ ಮಾಡಿದ್ದ. ಅದೇ ಚಾಕುವಿನಿಂದ ಗಾಯ ಮಾಡಿಕೊಂಡು ಆತ್ಮಹತ್ಯೆಯ ನಾಟಕವಾಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೃತ್ಯ ನಡೆದ ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಹಾಗೂ ಸುಬ್ರಮಣ್ಯಪುರ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

'ಆರೋಪಿಯ ವಿಚಾರಣೆ ನಡೆಸಿದಾಗ ತನ್ನಿಂದ ಮಹಿಳೆ ಅಂತರ ಕಾಪಾಡಿಕೊಳ್ಳಲು ಬಯಸಿದ್ದರಿಂದ ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಸುಬ್ರಮಣ್ಯಪುರ ಪೊಲೀಸರು ಆರೋಪಿ ಯಶಸ್‌ನನ್ನು ವಿಚಾರಣೆ ಮುಂದುವರೆಸಿದ್ದಾರೆ' ಎಂದು ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ತಿಳಿಸಿದರು.

ಮೇಲ್ಸೇತುವೆಯಿಂದ ಜಿಗಿದು ಯುವಕ ಆತ್ಮಹತ್ಯೆ

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗದ ಮೇಲ್ಸೇತುವೆಯಿಂದ ಜಿಗಿದು ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹೆಬ್ಬಾಳದ ಶಿವಶಂಕರ ಲೇಔಟ್ ನಿವಾಸಿ ಮುನಿರಾಜು (29) ಆತ್ಮಹತ್ಯೆ ಮಾಡಿಕೊಂಡವರು. ಭಾನುವಾರ ತಡರಾತ್ರಿ ಈ ಘಟನೆ ನಡೆದಿದೆ.

'ಇಂದಿರಾನಗರದ ಖಾಸಗಿ ಕಂಪನಿಯಲ್ಲಿ ಅಕೌಂಟೆಂಟ್ ಆಗಿದ್ದ ಮುನಿರಾಜು ಅವರು, ಕೆಲವು ತಿಂಗಳಿಂದ ಯುವತಿಯನ್ನು ಪ್ರೀತಿಸುತ್ತಿದ್ದರು. ಇತ್ತೀಚೆಗೆ ಇಬ್ಬರ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿ ದೂರವಾಗಿದ್ದರು. ಈ ನಡುವೆ ಯುವತಿ ಬೇರೊಬ್ಬ ಯುವಕನನ್ನು ಪ್ರೀತಿಸಲು ಆರಂಭಿಸಿದ್ದರು. ಯುವಕನ ಜೊತೆಗಿರುವ ಫೋಟೊವನ್ನು ವಾಟ್ಸ್‌ಆ್ಯಪ್‌ನ ಸ್ಟೇಟಸ್‌ನಲ್ಲಿ ಯುವತಿ ಹಾಕಿಕೊಂಡಿದ್ದರು. ಅದನ್ನು ಗಮನಿಸಿದ್ದ ಮುನಿರಾಜು ಅವರು ಬೇಸರ ಮಾಡಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಮುನಿರಾಜು ಅವರು ಭಾನುವಾರ ರಾತ್ರಿ 11.15ರ ಸುಮಾರಿಗೆ ಮಾಜಿ ಪ್ರೇಯಸಿಗೆ ಕೊನೆಯ ಬಾರಿಗೆ ಕರೆ ಮಾಡಿ ಮಾತನಾಡಿದ್ದರು. ನನ್ನಿಂದ ದೂರವಾಗ ಬೇಡ ಎಂದು ಮನವಿ ಮಾಡಿದ್ದರು. ಆಕೆ ಕರೆ ಕಡಿತ ಮಾಡಿದ್ದರು. ನಂತರ, ಮುನಿರಾಜು ಅವರು ಕೆಐಎಎಲ್ ರಸ್ತೆಗೆ ಬಂದು ಮೇಲ್ಸೇತುವೆಯಲ್ಲಿ ಬೈಕ್ ನಿಲ್ಲಿಸಿ, ಕೆಳಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೇಲ್ಸೇತುವೆ ಕೆಳಗಿನ ಮಾಲ್ ಆಫ್ ಏಷ್ಯಾದ ಎದುರು ಮೃತದೇಹ ಪತ್ತೆಯಾಗಿತ್ತು' ಎಂದು ಪೊಲೀಸರು ಹೇಳಿದರು.

'ಯುವಕ ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇಮ ವೈಫಲ್ಯವೇ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಮುನಿರಾಜು ಅವರ ತಂದೆ ದೂರು ನೀಡಿದ್ದಾರೆ. ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಕೊಡಿಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗರಿಕ ಹಕ್ಕು ರಕ್ಷಣಾ ದಿನದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ.ಮಹದೇವಪ್ಪ ಅಭಿಮತ

'ಒಂದು ದೇಶ, ಒಂದು ಚುನಾವಣೆ: ಚರ್ಚೆ ಅಗತ್ಯ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಹುತ್ವದ ದೇಶದಲ್ಲಿ ಅಸ್ಪೃಶ್ಯತೆ, ಅಸಮಾನತೆ, ಮೂಢನಂಬಿಕೆ ಜೀವಂತ
- ದಲಿತರ ಪರ ಯೋಜನೆ ರೂಪಿಸಲು ವೈಜ್ಞಾನಿಕ ದತ್ತಾಂಶ ಅಗತ್ಯ

ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೊಳಿಸಲು ಹೊರಟಿರುವ 'ಒಂದು ದೇಶ, ಒಂದು ಚುನಾವಣೆ' ಎಂಬ ಪರಿಕಲ್ಪನೆ ಎಲ್ಲಿಂದ ಬಂತು? ಈ ಬಗ್ಗೆ ಸಾರ್ವಜನಿಕ ಚರ್ಚೆ ಅಗತ್ಯ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ನಗರದಲ್ಲಿ ಸೋಮವಾರ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಆಯೋಜಿಸಿದ್ದ ಪ್ರೊ. ಬಿ.ಕೃಷ್ಣಪ್ಪ ಅವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ನಾಗರಿಕ ಹಕ್ಕು ರಕ್ಷಣಾ ದಿನದಲ್ಲಿ ಅವರು ಮಾತನಾಡಿದರು.

ವಿವಿಧ ಜಾತಿ, ಮತ, ಪಂಥಗಳನ್ನು ಹೊಂದಿರುವ ಬಹುತ್ವದ ದೇಶ ಭಾರತದಲ್ಲಿ ಅಸ್ಪೃಶ್ಯತೆ, ಅಸಮಾನತೆ, ಮೂಢನಂಬಿಕೆಗಳು ಇನ್ನೂ ಜೀವಂತವಾಗಿವೆ. ಹೀಗಿರುವಾಗ 'ಒಂದು ದೇಶ ಒಂದು ಚುನಾವಣೆ' ಜಾರಿ ಕುರಿತು ಚಿಂತನೆ, ಚರ್ಚೆ ನಡೆಯಬೇಕು ಎಂದು ತಿಳಿಸಿದರು.

ರಾಜ್ಯ ಸರ್ಕಾರ ಒಳಮೀಸಲಾತಿ ಗಣತಿ ಆರಂಭಿಸಿದ್ದು, ದಲಿತರ ಪರ ಯೋಜನೆಗಳನ್ನು ರೂಪಿಸಲು ವೈಜ್ಞಾನಿಕ ದತ್ತಾಂಶಗಳು ಬೇಕಾಗುತ್ತವೆ. ಎಡ, ಬಲ ಬದಿಗಿಟ್ಟು ಎಲ್ಲರೂ ಏಕತೆ ಸಾಧಿಸಬೇಕು ಎಂದರು.

'ಆಪರೇಷನ್ ಸಿಂಧೂರ'ದಲ್ಲಿ ಮೇಲುಗೈ ಸಾಧಿಸಿದ್ದು ಪ್ರಧಾನಿ ನರೇಂದ್ರ ಮೋದಿ ಅವರಿಂದ ಎಂದು ಎಲ್ಲರೂ ತಿಳಿದುಕೊಂಡಿದ್ದಾರೆ. ಆದರೆ, ವಾಸ್ತವಾಂಶದಲ್ಲಿ ಸಂವಿಧಾನದಿಂದಲೇ ಮೇಲುಗೈ ಸಾಧಿಸಿದ್ದು ಎಂಬುದು ತಿಳಿದಿರಲಿ ಎಂದು ಅಭಿಪ್ರಾಯಪಟ್ಟರು.


ನಗರದಲ್ಲಿ ಸೋಮವಾರ ಆಯೋಜಿಸಿದ್ದ ನಾಗರಿಕರ ಹಕ್ಕು ರಕ್ಷಣಾ ದಿನ ಕಾರ್ಯಕ್ರಮದಲ್ಲಿ ಸಚಿವ ಡಾ.ಎಚ್. ಸಿ. ಮಹದೇವಪ್ಪ ಮತ್ತು ಇಂದಿರಾ ಕೃಷ್ಣಪ್ಪ ಚರ್ಚೆ ನಡೆಸಿದರು. ವೆಂಕಟೇಶಯ್ಯ, ಮಾವಳ್ಳಿ ಶಂಕರ್, ಪ್ರೊ. ನಟರಾಜ ಹುಳಿಯಾರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಪ್ರೊ.ಬಿ. ಕೃಷ್ಣಪ್ಪ ಅವರು ಹೋರಾಟದ ಶಕ್ತಿ ಆಗಿದ್ದರು. ಅವರ ವಿಚಾರಧಾರೆಗಳನ್ನು ಮೂಲೆ ಮೂಲೆಗೂ ಕೊಂಡೊಯ್ಯುವ ಕೆಲಸ ಮಾಡಬೇಕು ಎಂದರು.

ಚಿಂತಕ ನಟರಾಜ ಹುಳಿಯಾರ್ ಮಾತನಾಡಿ, ಒಳಮೀಸಲಾತಿಯ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಹೊಸ ತಲೆಮಾರು ಒಗ್ಗೂಡಿಸಲು ಕಾರ್ಯಯೋಜನೆ ರೂಪಿಸಬೇಕು ಎಂದು ಸಲಹೆ ನೀಡಿದರು.

ಬಿ. ಕೃಷ್ಣಪ್ಪ ಅವರ ಪತ್ನಿ ಇಂದಿರಾ ಕೃಷ್ಣಪ್ಪ ಮಾತನಾಡಿ, 'ಸಮಾಜದಲ್ಲಿರುವ ಕೋಮುದಳ್ಳುರಿ ತಡೆಯಬೇಕು, ಸಮಾನತೆಗಾಗಿ ಸಂಘಟಿತರಾಗಬೇಕು, ಎಲ್ಲ ವರ್ಗದವರನ್ನು ಸೇರಿಸಿಕೊಂಡು ಹೋರಾಟಗಳನ್ನು ರೂಪಿಸಬೇಕು' ಎಂದು ಮನವಿ ಮಾಡಿದರು.

ಇದೇ ವೇಳೆ ಇಂದಿರಾ ಕೃಷ್ಣಪ್ಪ ಅವರ 'ದಾರ್ಶನಿಕ ನಮ್ಮ ಮಾರ್ಗದರ್ಶಕ' ಹಾಗೂ ಆತ್ಮಾನಂದ ಅವರ 'ನನ್ನೊಳಗಿನ ಅಪ್ಪ' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಡಿಎಸ್‌ಎಸ್ ಅಂಬೇಡ್ಕರ್ ವಾದ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಹಿರಿಯ ಅಧಿಕಾರಿ ವೆಂಕಟೇಶಯ್ಯ, ಸಾಹಿತಿಗಳಾದ ಸುಬ್ಬು ಹೊಲೆಯರ್, ವಸುಂಧರಾ ಭೂಪತಿ, ಹುಲಿಕುಂಟೆ ಮೂರ್ತಿ, ಅರಿವು ಶಿವಪ್ಪ ಇದ್ದರು.

ಅಪಘಾತ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಯೊ ಹಾಲ್ ಬಳಿ ಇನೋವಾ ಕಾರು ಹಾಗೂ ಲಾರಿ ಮಧ್ಯೆ ಸೋಮವಾರ ಸಂಜೆ ಅಪಘಾತ ಸಂಭವಿಸಿದ್ದು, ಹಳೇ ಗುಡ್ಡದಹಳ್ಳಿ ನಿವಾಸಿ ಅಂಜಲಿ (36) ಮೃತಪಟ್ಟಿದ್ದಾರೆ.

ಕೆ.ಆರ್. ಮಾರುಕಟ್ಟೆಯಲ್ಲಿ ಅಂಜಲಿ ಕೆಲಸ ಮಾಡುತ್ತಿದ್ದರು. ಅಪಘಾತದಲ್ಲಿ ವಿಜಯ್ ಗಾಯ ಗೊಂಡಿದ್ದಾರೆ. ಮೇಯೊ ಹಾಲ್ ಬಳಿ ಜಂಕ್ಷನ್‌ನಲ್ಲಿ ಇನೋವಾ, ದ್ವಿಚಕ್ರ ವಾಹನ ನಿಂತಿದ್ದವು. ಅನಿಲ್ ಕುಂಬ್ಳೆ ವೃತ್ತದ ಕಡೆಯಿಂದ ವೇಗವಾಗಿ ಬಂದ ಲಾರಿ ಇನೋವಾ, ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ದ್ವಿಚಕ್ರ ವಾಹನದಲ್ಲಿದ್ದ ಇಬ್ಬರು ಕೆಳಕ್ಕೆ ಬಿದ್ದರು. ಅಂಜಲಿ ಮೇಲೆ ಲಾರಿ ಹರಿದು ಅಸುನೀಗಿದರು ಎಂದು ಪೊಲೀಸರು ತಿಳಿಸಿದ್ದಾರೆ.

ವಾನಳ್ಳಿ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಜಾತಿ ನಿಂದನೆ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ನಿರಂಜನ ವಾನಳ್ಳಿ ವಿರುದ್ಧ ಕೋಲಾರದ ಗಲ್‌ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ನಿರಂಜನ ವಾನಳ್ಳಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಆರ್.ಕೃಷ್ಣಮೂರ್ತಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಸಮ್ಮಿತ್ ಮಂಡಿಸಿದ ವಾದ ಮನ್ನಿಸಿದ ನ್ಯಾಯಪೀಠ, ಪ್ರಕರಣದ ಮುಂದಿನ ನ್ಯಾಯಿಕ ಪ್ರಕ್ರಿಯೆಗೆ ತಡೆ ನೀಡಿ ಆದೇಶಿಸಿತು.

'ವಿಶ್ವವಿದ್ಯಾಲಯದ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ನಾನು ನೀಡಿದ್ದ ದೂರುಗಳ ಹಿನ್ನೆಲೆಯಲ್ಲಿ, ಕುಲಪತಿ ನಿರಂಜನ ಅವರು ನನ್ನ ವಿರುದ್ಧ ದ್ವೇಷ ಸಾಧಿಸುತ್ತಿದ್ದಾರೆ' ಎಂದು ಆರೋಪಿಸಿ, ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕ ಆರ್. ಮಂಜುನಾಥ್ ನೀಡಿದ್ದ ದೂರಿನ ಅನ್ವಯ ಗಲ್‌ಪೇಟೆ ಪೊಲೀಸ್ ಠಾಣೆಯಲ್ಲಿ ನಿರಂಜನ ವಿರುದ್ಧ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಾಯ್ದೆ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಶ್ರೀರಾಮನ ಅವಹೇಳನ ಆರೋಪ: ಕೆ.ಎಸ್‌.ಭಗವಾನ್ ಖುಲಾಸೆ

ಬೆಂಗಳೂರು: 'ರಾಮ ಮಂದಿರ ಏಕೆ ಬೇಡ' ಎಂಬ ತಮ್ಮ ಪುಸ್ತಕದಲ್ಲಿ ಲೇಖಕ ಕೆ.ಎಸ್. ಭಗವಾನ್ 'ಶ್ರೀರಾಮನನ್ನು ಹೀಯಾಳಿಸಿದ್ದಾರೆ, ಅವಹೇಳನಕಾರಿ ಪದಗಳ ಬಳಕೆ ಮಾಡಿದ್ದಾರೆ. ಈ ಮೂಲಕ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ' ಎಂದು ಆರೋಪಿಸಿ ವಕೀಲೆ ಮೀರಾ ರಾಘವೇಂದ್ರ ಅವರು ಸಾಹಿತಿ ಕೆ.ಎಸ್.ಭಗವಾನ್ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣವನ್ನು ನ್ಯಾಯಾಲಯ ವಜಾಗೊಳಿಸಿದೆ.

ಈ ಸಂಬಂಧ ಮೀರಾ ರಾಘವೇಂದ್ರ ಅವರು, ದಾಖಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ 37ನೇ ಎಸಿಎಂಎಂ ಕೋರ್ಟ್‌ನ ನ್ಯಾಯಾಧೀಶ ಎಂ.ಸೈಯದ್ ಅರಾಫತ್ ಇಬ್ರಾಹಿಂ ಅವರು ಸೋಮವಾರ ಭಗವಾನ್ ಅವರನ್ನು ಖುಲಾಸೆಗೊಳಿಸಿ ಆದೇಶಿಸಿದ್ದಾರೆ. ಇಂತಹುದೇ ಮತ್ತೊಂದು ಪ್ರಕರಣದಲ್ಲಿ ನ್ಯಾಯಾಲಯ ಇತ್ತೀಚೆಗಷ್ಟೇ ಕೆ. ಎಸ್.ಭಗವಾನ್ ಅವರನ್ನು ಖುಲಾಸೆಗೊಳಿಸಿತ್ತು. ಎರಡೂ ಪ್ರಕರಣಗಳಲ್ಲಿ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು ಭಗವಾನ್ ಪರ ವಾದ ಮಂಡಿಸಿದ್ದರು.

ನಗರದಲ್ಲಿ ಇಂದು

'ಕಾವ್ಯ ಕಾಮಧೇನು ಎಚ್‌ಎಸ್‌ವಿ' ಗೌರವಾರ್ಪಣೆ: ಸಾಹಿತ್ಯ ಗೌರವ: ಕೆ.ಇ. ರಾಧಾಕೃಷ್ಣ, ಮಲ್ಲೇಪುರಂ ಜಿ. ವೆಂಕಟೇಶ್, ಬಿ.ಆರ್. ಲಕ್ಷ್ಮಣರಾವ್, ಧರ್ಮಗುರು ಚಾರ್ಲ್ಸ್ ಲಸ್ರಾದೊ, ಸುಂದರ್ ವೀಣಾ, ಟಿ.ಎನ್. ಸೀತಾರಾಮ್, ಶ್ರೀನಿವಾಸ್ ಜಿ. ಕಪ್ಪಣ್ಣ, ರಂಗ ಗೌರವ: ಬಿ. ಜಯಶ್ರೀ, ಗೀತ ಗೌರವ: ಎಂ.ಡಿ. ಪಲ್ಲವಿ, ಉಪಸ್ಥಿತಿ: ಹಂ.ಪ.ನಾ., ಐ.ಎಂ. ವಿಠ್ಠಲಮೂರ್ತಿ, ಸಮನ್ವಯ: ವತ್ಸಲ ಮೋಹನ್, ಆಯೋಜನೆ: ಕಪ್ಪಣ್ಣ ಅಂಗಳ, ಸಮಂಜಸ ಬೆಂಗಳೂರು, ಸ್ಥಳ: ಸಿ. ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10


ಭೀಮ ಜಯಂತಿ ಹಾಗೂ ಭೀಮ ಸಂಘಟನೆಗಳ ಮಹಾ ಒಕ್ಕೂಟದ ಪ್ರಥಮ ವಾರ್ಷಿಕೋತ್ಸವ: ಉದ್ಘಾಟನೆ: ಬಿ.ಝಡ್ ಜಮೀರ್ ಅಹಮದ್ ಖಾನ್, ಅಧ್ಯಕ್ಷತೆ: ಕೆ. ಮರಿಯಪ್ಪ, ಅತಿಥಿಗಳು: ಎಚ್.ಸಿ. ಮಹದೇವಪ್ಪ, ಬೈಲು ನರೇಶ್, ಜಾಣಗೆರೆ ವೆಂಕಟರಾಮಯ್ಯ, ಅಶ್ವಥ ನಾರಾಯಣ, ಸುಬ್ಬು ಹೊಲೆಯಾರ್, ಗಂಗರಾಮ್ ಚಂಡಾಳ, ಹುಲ್ಕೆರೆ ಮಹಾದೇವ್, ದಲಿತ ರಮೇಶ್, ರಮೇಶ್ ಸಂಕ್ರಾಂತಿ, ಆಯೋಜನೆ: ಭೀಮ ಸಂಘಟನೆಗಳ ಮಹಾ ಒಕ್ಕೂಟ, ಸ್ಥಳ: ಪುರಭವನ, ಬೆಳಿಗ್ಗೆ 11

ದೃಶ್ಯೋತ್ಸವ– ಚಿತ್ರಕಲಾ ಮಹಾವಿದ್ಯಾಲಯದ ವಾರ್ಷಿಕ ಕಲಾ ಪ್ರದರ್ಶನ: ಅತಿಥಿಗಳು: ರವಿ ಜಂಗಿರ್, ಆನಂದನ್ ಉನ್ನಿ, ಅಲೀಮುದ್ದೀನ್ ಸುನ್ನಾ, ಪ್ರಶಾಂತ್ ಸಿ., ಆಯೋಜನೆ: ಕರ್ನಾಟಕ ಚಿತ್ರಕಲಾ ಪರಿಷತ್ತು, ಚಿತ್ರಕಲಾ ಮಹಾವಿದ್ಯಾಲಯ, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ನಮನಚಂದ್ರು 'ಸೃಜನವಂತ' ಕೃತಿ ಬಿಡುಗಡೆ: ಸಾನ್ನಿಧ್ಯ: ಅನ್ನದಾನೇಶ್ವರನಾಥ ಸ್ವಾಮೀಜಿ, ಉದ್ಘಾಟನೆ: ಸಂತೋಷ ಹಾನಗಲ್, ಅಧ್ಯಕ್ಷತೆ: ಎಸ್. ಬಾಲಾಜಿ, ಕೃತಿ ಬಿಡುಗಡೆ: ಬಂಜಗೆರೆ ಜಯಪ್ರಕಾಶ್, ವಿ.ಟಿ. ಬಿಡುಗಡೆ: ವಿವೇಕ್ ದೊರೈ, ಡಿ. ವೆಂಕಟರಮಣಸ್ವಾಮಿ, ಉಪಸ್ಥಿತಿ: ಬಿ. ಅನ್ನದಾನಪ್ಪ, ನಮನಚಂದ್ರು, ಆಯೋಜನೆ: ಧಮ್ಮಭೂಮಿ ಚಾರಿಟಬಲ್ ಟ್ರಸ್ಟ್, ನಮನಚಂದ್ರು ಸ್ನೇಹ ಬಳಗ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಕಾರ್ಯತಾಂತ್ರಿಕ ಸಮಾವೇಶ: ಅತಿಥಿಗಳು: ಎಂ. ಬಿ.ಪಾಟೀಲ, ಜಿತಿನ್ ಗುಲಾಟಿ, ಕರ್ನಲ್ ಎಚ್.ಎಸ್. ಶಂಕರ್, ಹರಿ ಮರಾರ್, ಗೀತಾಂಜಲಿ ಕಿರ್ಲೋಸ್ಕರ್, ಆಯೋಜನೆ: ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ, ಸ್ಥಳ: ತಾಜ್ ವೆಸ್ಟ್ ಎಂಡ್ ಹೋಟೆಲ್, ರೇಸ್ ಕೋರ್ಸ್ ರಸ್ತೆ, ಸಂಜೆ 4.30

'ಹೆಜ್ಜೆಗೊಲಿದ ಬೆಳಕು' ಏಕವ್ಯಕ್ತಿ ನಾಟಕ: ಅಭಿನಯ: ಸಂಸ್ಕೃತಿ ಪ್ರಭಾಕರ್, ರಚನೆ: ಸುಧಾ ಆಡುಕಳ, ನಿರ್ದೇಶನ: ಗಣೇಶ ರಾವ್ ಎಲ್ಲೂರು, ನಿರ್ಮಾಣ: ಜಿ.ಪಿ. ಪ್ರಭಾಕರ ತುಮರಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30


ಸಂಸ್ಕೃತಿ ಪ್ರಭಾಕರ

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

‘ಒಸಿ’: ಬೆಸ್ಕಾಂನಲ್ಲಿ 88 ಸಾವಿರ ಅರ್ಜಿಗಳು ಬಾಕಿ • ಸಮಸ್ಯೆ ಬಗೆಹರಿಸಲು ಗ್ರಾಹಕರ ಒತ್ತಾಯ

ವಿದ್ಯುತ್ ಸಂಪರ್ಕ ಪಡೆಯಲು ಪರದಾಟ

• ಗಾಣಧಾಳು ಶ್ರೀಕಂಠ

ಮುಖ್ಯಾಂಶಗಳು

- ಕಂದಾಯ, ಬಿ ಖಾತಾ ನಿವೇಶನದಾರರಿಗೆ ಸಂಕಷ್ಟ
- ಮನೆ ನಿರ್ಮಾಣ, ವಿದ್ಯುತ್ ಗುತ್ತಿಗೆದಾರರ ಪರದಾಟ
- ಮನೆ ಕಟ್ಟಿದರೂ, ಗೃಹ ಪ್ರವೇಶ ಮಾಡದ ಸ್ಥಿತಿ

ಬೆಂಗಳೂರು: ಕಟ್ಟಡದ ಸ್ವಾಧೀನಾನುಭವ ಪತ್ರ (ಒಸಿ) ಕಡ್ಡಾಯ ಮಾಡಿರುವುದರಿಂದ ಹೊಸ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡುವ ಪ್ರಕ್ರಿಯೆ ಬಹುತೇಕ ಸ್ಥಗಿತಗೊಂಡಿದೆ. ಇದರಿಂದಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವ್ಯಾಪ್ತಿಯಲ್ಲಿ ಸುಮಾರು 88 ಸಾವಿರ ಗ್ರಾಹಕರು ತಮ್ಮ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲದೆ ಪರದಾಡುತ್ತಿದ್ದಾರೆ.

ಹೊಸ ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರವನ್ನು ಕಡ್ಡಾಯಗೊಳಿಸಿದ ಸುಮಾರು ಎರಡು ತಿಂಗಳ ನಂತರ ವಿದ್ಯುತ್ ಸಂಪರ್ಕ ಕಲ್ಪಿಸುವ, ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡುವ ಪ್ರಕ್ರಿಯೆಗಳು ಸ್ಥಗಿತಗೊಂಡಿದ್ದು, ಇದು ಕಟ್ಟಡ ನಿರ್ಮಾಣ ಕ್ಷೇತ್ರದ ಮೇಲೆ ಪರಿಣಾಮ ಬೀರಿದೆ.

ಸುಪ್ರೀಂ ಕೋರ್ಟ್ ಆದೇಶ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ(ಕೆಇಆರ್‌ಸಿ) ಸೂಚನೆ ಪ್ರಕಾರ 'ಒಸಿ' ನಿಯಮವನ್ನು ಅನುಷ್ಠಾನಗೊಳಿಸಲು ಏಪ್ರಿಲ್ 4ರಂದು ಬೆಸ್ಕಾಂ ಆದೇಶ ಮಾಡಿದೆ. ಈ ಆದೇಶ ಹೊರಬೀಳುವ ಮೊದಲು ಅರ್ಜಿ ಸಲ್ಲಿಸಿದವರಿಗೂ ಇದೇ ನಿಯಮ ಅನ್ವಯ ಮಾಡಿರುವುದರಿಂದ ಒಂದೆಡೆ ಗ್ರಾಹಕರು, ಮತ್ತೊಂದೆಡೆ ವಿದ್ಯುತ್ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಏಪ್ರಿಲ್‌ಗೆ ಮುನ್ನ ಮನೆ ನಿರ್ಮಾಣ ಮಾಡಿ, ಅರ್ಜಿ ಸಲ್ಲಿಸಿದವರಿಗೂ ವಿದ್ಯುತ್ ಸಂಪರ್ಕ ಸಿಗುತ್ತಿಲ್ಲ. ಕೆಲವು ಕಡೆ ಮೀಟರ್ ಹಾಕಿದ್ದರೆ, ಆರ್. ಆರ್ ನಂಬರ್ ಸಿಕ್ಕಿಲ್ಲ. ಕೆಲವರು ತಾತ್ಕಾಲಿಕ ವಿದ್ಯುತ್ ಸಂಪರ್ಕದಲ್ಲೇ ಮನೆ ಪ್ರವೇಶ ಮಾಡಿ, ದುಬಾರಿ ಶುಲ್ಕ ನೀಡುತ್ತಿದ್ದಾರೆ.

ಮನೆ ನಿರ್ಮಾಣದ ಒಪ್ಪಂದದ ಪ್ರಕಾರ, ವಿದ್ಯುತ್ ಸರಬರಾಜು ಮಂಜೂರಾದ ನಂತರವೇ, ಮಾಲೀಕರು ಗುತ್ತಿಗೆದಾರರಿಗೆ ಪೂರ್ಣ ಹಣ ನೀಡುತ್ತಾರೆ, ಗುತ್ತಿಗೆದಾರರು ಕೀ ಹಸ್ತಾಂತರ ಮಾಡುತ್ತಾರೆ. ಈಗ ಅರ್ಜಿಗಳು ಬಾಕಿ ಇರುವುದರಿಂದ, ಮನೆ ನಿರ್ಮಾಣದ ಕೆಲಸಗಳು ಪೂರ್ಣಗೊಂಡಿದ್ದರೂ, ಅನೇಕ ಮಾಲೀಕರು ಬಾಕಿ ಹಣವನ್ನು ತಡೆ ಹಿಡಿದಿದ್ದಾರೆ. ಈಗ ಮನೆ ಮಾಲೀಕರು ಮತ್ತು ಕಟ್ಟಡ ನಿರ್ಮಾಣ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ವಿದ್ಯುತ್ ಗುತ್ತಿಗೆದಾರರೊಬ್ಬರು ಪರಿಸ್ಥಿತಿ ವಿವರಿಸಿದರು.

‘ಕಂದಾಯ ನಿವೇಶನ ಮತ್ತು ನಗರದ ‘ಬಿ’ ಖಾತಾ ನಿವೇಶನದಲ್ಲಿ ಕಟ್ಟಡ ನಿರ್ಮಾಣಕ್ಕೆ, ಆರಂಭದ ಅನುಮತಿ ಪತ್ರ(ಸಿಸಿ), ನಕ್ಷೆ ಮಂಜೂರಾತಿ ಪತ್ರ ಮತ್ತು ಸ್ವಾಧೀನಾನುಭವ ಪತ್ರ(ಒಸಿ) ಸಿಗುವುದಿಲ್ಲ, ಹೀಗಾಗಿ, ಕಂದಾಯ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನೂ ಕೊಡುತ್ತಿಲ್ಲ, ಇದರಿಂದ ರಾಜ್ಯದಲ್ಲಿ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿದೆ’ ಎಂದು ಕರ್ನಾಟಕ ವಿದ್ಯುತ್ ಗುತ್ತಿಗೆದಾರರ ಸಂಘದ (ಕೆಎಸ್‌ಎಲ್‌ಇಸಿಎ) ಅಧ್ಯಕ್ಷ ಸಿ. ರಮೇಶ್ ಬೇಸರ ವ್ಯಕ್ತಪಡಿಸಿದರು.

‘ಸುಪ್ರೀಂ ಕೋರ್ಟ್ ಆದೇಶವನ್ನು ಗೌರವಿಸುತ್ತೇವೆ. ಆದರೆ, ಬೆಸ್ಕಾಂ ಆದೇಶ ಮಾಡಿರುವುದಕ್ಕೂ ಮುನ್ನ ಕಾರ್ಯಾದೇಶ ನೀಡಿರುವ ಮನೆಗಳಿಗಾದರೂ ವಿದ್ಯುತ್ ಸಂಪರ್ಕ ನೀಡಲಿ. ಇಲ್ಲವೇ, ಒಸಿ ಕೊಡುವುದಕ್ಕೆ ಸಮರ್ಪಕ ಮಾರ್ಗಸೂಚಿಗಳನ್ನು ಸರ್ಕಾರ ಹೊರಡಿಸಲಿ’ ಎಂಬುದು ಅವರ ಒತ್ತಾಯ.

‘ದೊಡ್ಡ ದೊಡ್ಡ ಕಟ್ಟಡಗಳು, ಅಪಾರ್ಟ್‌ಮೆಂಟ್‌ಗಳನ್ನು ಬಿಟ್ಟು, ಸಣ್ಣ ಸಣ್ಣ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸರ್ಕಾರ ತಕ್ಷಣ ವ್ಯವಸ್ಥೆ ಮಾಡಬೇಕು’ ಎಂದರು.

‘ವಿದ್ಯುತ್ ಸಂಪರ್ಕ ಸಿಕ್ಕಿಲ್ಲ, ಸಮಸ್ಯೆಯಾಗಿದೆ’

‘ನನ್ನದು ಬಿ ಖಾತಾ ನಿವೇಶನ. ಕಳೆದ ವರ್ಷ ಆಗಸ್ಟ್‌ನಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ತೆಗೆದುಕೊಂಡು ಮನೆ ನಿರ್ಮಾಣ ಆರಂಭಿಸಿದೆ. ಈ ವರ್ಷದ ಆರಂಭದಲ್ಲಿ ಮನೆ ಪೂರ್ಣಗೊಂಡಾಗ, ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿದ್ದೆವು. ಗೃಹಪ್ರವೇಶ ಮಾಡಬೇಕಿತ್ತು. ಆದರೆ, ಬೆಸ್ಕಾಂನಿಂದ ‘ಒಸಿ’ ಕಡ್ಡಾಯಗೊಳಿಸಿದ್ದರಿಂದ, ವಿದ್ಯುತ್ ಸಂಪರ್ಕ ಕೊಟ್ಟಿಲ್ಲ. ಬಿ ಖಾತಾದವರಿಗೆ ಬಿಬಿಎಂಪಿಯಿಂದ ಸಿಸಿ, ಒಸಿ ಯಾವುದೂ ಕೊಡುವುದಿಲ್ಲ. ಸದ್ಯಕ್ಕೆ ತಾತ್ಕಾಲಿಕ ವಿದ್ಯುತ್ ಸಂಪರ್ಕದೊಂದಿಗೆ ಮನೆ ಪ್ರವೇಶ ಮಾಡಿದ್ದೇವೆ. ವಿದ್ಯುತ್ ಶುಲ್ಕ ದುಬಾರಿಯಾಗುತ್ತಿದೆ’ ಎಂದು ಬೆಂಗಳೂರು ಉತ್ತರ ತಾಲ್ಲೂಕಿನ ಚಿಕ್ಕಬಿದಿರಕಲ್ಲು ವ್ಯಾಪ್ತಿಯ ನಿವಾಸಿಯೊಬ್ಬರು ತಾವು ಎದುರಿಸುತ್ತಿರುವ ಸಮಸ್ಯೆಯನ್ನು ವಿವರಿಸಿದರು.

‘ಸರ್ಕಾರದ ಗಮನದಲ್ಲಿದೆ’



ಸುಪ್ರೀಂ ಕೋರ್ಟ್ ಆದೇಶದಂತೆ ಸರ್ಕಾರ ವಿದ್ಯುತ್ ಸಂಪರ್ಕಕ್ಕೆ 'ಒಸಿ' ಕಡ್ಡಾಯಗೊಳಿಸಿದೆ. ಇದು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ವಿಷಯ. ಇದರಿಂದ ಸಮಸ್ಯೆಗಳಾಗುತ್ತಿರುವುದು ಸರ್ಕಾರದ ಗಮನದಲ್ಲಿದೆ. ಸಚಿವ ಸಂಪುಟ ಸಭೆಯಲ್ಲೂ ಈ ವಿಷಯ ಚರ್ಚಿಸಿ ಇದಕ್ಕೆ ಪರಿಹಾರ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅವರು, ಉಪ ಮುಖ್ಯಮಂತ್ರಿ, ನಗರಾಭಿವೃದ್ಧಿ ಸಚಿವರು, ಸ್ಥಳೀಯ ಸಂಸ್ಥೆಗಳೊಂದಿಗೆ ಚರ್ಚಿಸಲಿದ್ದಾರೆ. ಕಾನೂನಿಗೆ ತಿದ್ದುಪಡಿ ತರುವ ಕುರಿತು ಕಾನೂನು ಇಲಾಖೆಯೊಂದಿಗೆ ಚರ್ಚಿಸಲಿದ್ದಾರೆ. ಇವೆಲ್ಲ ಪೂರ್ಣಗೊಂಡು ರಾಜ್ಯ ಸರ್ಕಾರದಿಂದ ನಿರ್ದೇಶನ ಬಂದರೆ, ವಿದ್ಯುತ್ ಸಂಪರ್ಕ ಕಲ್ಪಿಸುತ್ತೇವೆ

ಕೆ.ಜೆ.ಜಾರ್ಜ್, ಇಂಧನ ಸಚಿವ

ಗುಣಮಟ್ಟದ ಶಿಕ್ಷಣ ಅಗತ್ಯ: ವಿನಯಕುಮಾರ್ ಅಭಿಪ್ರಾಯ

ಸಾಧಕರಿಗೆ ‘ಕನಕ ಚೇತನ’ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕನಕ ಆಫೀಸರ್ಸ್ ಅಕಾಡೆಮಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ‘ಕನಕ ಚೇತನ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಕನಕ ಭವನದಲ್ಲಿ ಸೋಮವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಲೋಕಸೇವಾ ಆಯೋಗ ನಡೆಸಿದ ಪರೀಕ್ಷೆಯಲ್ಲಿ ರಂಗಮಂಜು (24ನೇ ರ್‍ಯಾಂಕ್), ಆನಂದಕುಮಾರ್ (41ನೇ ರ್‍ಯಾಂಕ್), ಭಾನುಪ್ರಕಾಶ್ (523ನೇ ರ್‍ಯಾಂಕ್), ಪಾಂಡುರಂಗ ಎಸ್.ಕಂಬಳಿ (529ನೇ ರ್‍ಯಾಂಕ್), ಬೀರಪ್ಪ ಡೋಣೆ (551ನೇ ರ್‍ಯಾಂಕ್), ಸಂಜಯ್ ಕೌಜಲಗಿ (691ನೇ ರ್‍ಯಾಂಕ್), ಹನುಮಂತಪ್ಪ ನಂದಿ (910ನೇ ರ್‍ಯಾಂಕ್) ಹಾಗೂ ಮುಖ್ಯಮಂತ್ರಿಪದಕ ಪುರಸ್ಕೃತ ಅಧಿಕಾರಿಗಳನ್ನು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಶಾಲು ಹೊದಿಸಿ, ನೆನಪಿನ ಕಾಣಿಕೆ ನೀಡಿ ಗೌರವಿಸಿದರು.



ನಗರದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಯುಪಿಎಸ್‌ಸಿ ಸಾಧಕರಾದ ಪಾಂಡುರಂಗ, ರಂಗಮಂಜು, ಸಂಜಯ್, ಆನಂದ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಎಚ್‌. ಎಂ. ರೇವಣ್ಣ, ನಾಗಲಕ್ಷ್ಮಿ ಚೌದರಿ, ಜಿ.ಬಿ. ವಿನಯಕುಮಾರ್ ಹಾಗೂ ಇತರರು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಆಡಳಿತ, ಶಿಕ್ಷಣ, ವೈದ್ಯಕೀಯ, ಸಹಕಾರ, ಉದ್ಯಮ, ಮಾಧ್ಯಮ, ಮಹಿಳಾ, ಯುವ ಹಾಗೂ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ 50 ಮಂದಿಗೆ ‘ಕನಕ ಚೇತನ’ ಪ್ರಶಸ್ತಿಯನ್ನು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್‌.ಎಂ.ರೇವಣ್ಣ ಅವರು ಪ್ರದಾನ ಮಾಡಿದರು.

ಇನ್‌ಸೈಟ್ಸ್ ಐಎಎಸ್ ತರಬೇತಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಜಿ.ಬಿ. ವಿನಯಕುಮಾರ್, ‘ನಮ್ಮ ಬೆಳವಣಿಗೆ ಕಂಡು ಬೇರೆಯವರು ಅಸೂಯೆ ಪಡುವುದು ಸಹಜ. ಯಾವಾಗಲೂ ಮತ್ತೊಬ್ಬರನ್ನು ಅನುಕರಿಸುತ್ತೇವೆ. ಜೀವನದಲ್ಲಿ ಸಾಧನೆ ಮಾಡಬೇಕು. ಲೋಕಸೇವಾ ಆಯೋಗ ನಡೆಸಿದ ಪರೀಕ್ಷೆಯಲ್ಲಿ ಈ ಬಾರಿ ಸಮುದಾಯದ 5–6 ಮಂದಿ ರ್‍ಯಾಂಕ್ ಪಡೆದಿದ್ದಾರೆ. ಈ ಸಂಖ್ಯೆ ಮತ್ತಷ್ಟು ಹೆಚ್ಚಬೇಕು’ ಎಂದು ಹೇಳಿದರು.

ಇದೇ ವೇಳೆ ಕನಕ ಸಿರಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ನೋಂದಣಿ ಮತ್ತು ಮುದ್ರಾಂಕ ಇಲಾಖೆ ಕೇಂದ್ರ ಸ್ಥಾನಿಕ ಅಧಿಕಾರಿ ಲೋಕೇಶ್, ಕಾಳಿದಾಸ ಬ್ಯಾಂಕ್‌ನ ಕೃಷ್ಣಪ್ರಸಾದ್, ಉದ್ಯಮಿ ಅಣ್ಣಪ್ಪ ಸಾಹುಕಾರ್, ಡಿಐಜಿ ಬಸವರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಸಿದ್ದರಾಮಣ್ಣ ಇದ್ದರು.

ಕಡಬಗೆರೆ ಮುನಿರಾಜು ಮತ್ತು ತಂಡದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

‘ಚಿತ್ರಶಾಲೆ ಉದ್ಘಾಟನೆಗೆ ಆಹ್ವಾನವಿಲ್ಲ’

ಬೆಂಗಳೂರು: ನವೀಕೃತ ವೆಂಕಟಪ್ಪ ಚಿತ್ರಶಾಲೆಯ ಉದ್ಘಾಟನೆ ಕಾರ್ಯಕ್ರಮಕ್ಕೆ ಕಲಾವಿದರಿಗೇ ಆಹ್ವಾನ ನೀಡದೇ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಅಚ್ಚರಿ ಮೂಡಿಸಿದೆ.

ಚಿತ್ರಶಾಲೆ ಕಟ್ಟಡ ಮಧ್ಯವರ್ತಿಗಳ ಪಾಲಾಗುವುದನ್ನು ಕಲಾವಿದರೆಲ್ಲ ಪ್ರತಿಭಟನೆ ನಡೆಸಿ ತಡೆದಿದ್ದರು ಎಂದು ಕಲಾವಿದರು ತಿಳಿಸಿದ್ದಾರೆ. ‘ವೆಂಕಟಪ್ಪ ಚಿತ್ರಶಾಲೆ ಎಂದರೆ ಅದು ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದ್ದಾಗಿದೆ. ಉದ್ಘಾಟನೆಯ ಸಂದರ್ಭದಲ್ಲಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಶಿಷ್ಟಾಚಾರ ಪಾಲನೆ ಮಾಡಲಿ. ಎಲ್ಲ ಕಲಾವಿದರು ಭಾಗವಹಿಸಬೇಕು ಎಂದು ಒಂದು ವಾಕ್ಯ ಆಹ್ವಾನ ಪತ್ರಿಕೆಯಲ್ಲಿ ಇದ್ದಿದ್ದರೂ ಸಾಕಿತ್ತು. ಕಲಾವಿದರನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗಿದೆ’ ಎಂದು ಕಲಾವಿದ. ಪ.ಸ.ಕುಮಾರ್ ಅಸಮಾಧಾನ ವ್ಯಕ್ತಪಡಿದ್ದಾರೆ.



ಜನರು ಮಳೆಯಲ್ಲಿ ಕೊಡೆ ಹಿಡಿದು ಹೆಜ್ಜೆ ಹಾಕಿದರು ಚಿತ್ರ: ಪ್ರಶಾಂತ್ ಎಚ್‌.ಜಿ.

‘ಗುತ್ತಿಗೆಯಲ್ಲಿ ಮೀಸಲು: ಹೋರಾಟಕ್ಕೆ ಜಯ’

ಬೆಂಗಳೂರು: ‘ಸರ್ಕಾರದ ಕಾಮಗಾರಿಗಳ ಗುತ್ತಿಗೆಗಳಲ್ಲಿ ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1 ಮತ್ತು 2ಎ) ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೀಸಲಾತಿ ನೀಡಿರುವುದು ನಮ್ಮ ಸಂಘಕ್ಕೆ ಸಿಕ್ಕಿರುವ ಜಯ’ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಎಲ್. ಸುರೇಶ್ ತಿಳಿಸಿದರು.

‘ನಮ್ಮ ಸಂಘ ನಿರಂತರ ಹೋರಾಟ ಮಾಡಿದೆ. ಭವಿಷ್ಯದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಂಘಟನೆ ಮಾಡಿ ಹಿಂದುಳಿದ ವರ್ಗದ ಗುತ್ತಿಗೆದಾರರ ಏಳಿಗೆಗೆ ಶ್ರಮಿಸಲಾಗುವುದು’ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.


ಸಂಘದ ಗೌರವ ಅಧ್ಯಕ್ಷ ಎಂ.ಜಿ. ಕೇಶವಮೂರ್ತಿ, ಪ್ರಧಾನ ಕಾರ್ಯದರ್ಶಿ ಬಸವರಾಜು, ಉಪಾಧ್ಯಕ್ಷ ಎಚ್‌.ಟಿ. ರಾಘವೇಂದ್ರ, ಖಜಾಂಚಿ ಶಿವಣ್ಣ ಎಂ.ಬಿ, ಸಹ ಕಾರ್ಯದರ್ಶಿ ಮರಿಸೀರಯ್ಯ ಎಂ. ಉಪಸ್ಥಿತರಿದ್ದರು.

ನಗರದ ಕೆಲವೆಡೆ ಉತ್ತಮ ಮಳೆ

ಬೆಂಗಳೂರು: ನಗರದಲ್ಲಿ ಸೋಮವಾರ ಬೆಳಿಗ್ಗೆ ಹಾಗೂ ಮಧ್ಯಾಹ್ನ ಕೆಲವೆಡೆ ಉತ್ತಮ ಮಳೆಯಾಯಿತು.

ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ 2.2 ಸೆಂ.ಮೀ, ಮಾರತ್‌ಹಳ್ಳಿಯಲ್ಲಿ 2 ಸೆಂ.ಮೀ, ಬಾಣಸವಾಡಿಯಲ್ಲಿ 1.9 ಸೆಂ.ಮೀ, ಬೆಳ್ಳಂದೂರಿನಲ್ಲಿ 1.6 ಸೆಂ.ಮೀ, ಜಕ್ಕೂರಿನಲ್ಲಿ 1.3 ಸೆಂ.ಮೀ, ಎಚ್‌ಎಸ್‌ಆರ್ ಲೇಔಟ್‌ನಲ್ಲಿ 1.1 ಸೆಂ.ಮೀ, ವಿದ್ಯಾರಣ್ಯ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಒಂದು ಸೆಂ.ಮೀಟರ್ ಮಳೆಯಾಯಿತು.

ಟಿನ್ ಫ್ಯಾಕ್ಟರಿಯಿಂದ ಕೆ.ಆರ್. ಪುರ, ವಡ್ಡರಪಾಳ್ಯದಿಂದ ಗೆದ್ದಲಹಳ್ಳಿ, ವೀರಣ್ಣ ಪಾಳ್ಯದಿಂದ ಹೆಬ್ಬಾಳ, ವಿಪ್ರೊದಿಂದ ಇಬ್ಲೂರು, ಕೈಕೊಂಡನಹಳ್ಳಿಯಿಂದ ಬೆಳ್ಳಂದೂರು, ಸರ್ಜಾಪುರ ರಸ್ತೆಯಿಂದ ವಿಪ್ರೊ ಜಂಕ್ಷನ್, ವಿಂಡ್ಸರ್ ಮ್ಯಾನರ್‌ನಿಂದ ಸ್ಯಾಂಕಿ ಕೆರೆ, ಕಸ್ತೂರಿ ನಗರದಿಂದ ಹೆಬ್ಬಾಳ ಕಡೆ ಸಾಗುವ ರಸ್ತೆಗಳಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು.





ಎರಡೂ ಕಡೆಗಳಲ್ಲಿ ಬಹು ಅಂತಸ್ತಿನ ಕಟ್ಟಡ • ಪ್ರವೇಶ–ನಿರ್ಗಮನಕ್ಕೆ ಪ್ರತ್ಯೇಕ ರಸ್ತೆ • ಹಸಿರು ಕಟ್ಟಡ ಮಾನದಂಡಗಳ ಪಾಲನೆ

ಹೊಸರೂಪ ಪಡೆಯುತ್ತಿದೆ ಯಶವಂತಪುರ ರೈಲ್ವೆ ನಿಲ್ದಾಣ

• ಬಾಲಕಷ್ಣ ಪಿ.ಎಚ್.

ಬೆಂಗಳೂರು: ನಗರದ ಎರಡನೇ ಪ್ರಮುಖ ರೈಲು ನಿಲ್ದಾಣವಾಗಿರುವ ಯಶವಂತಪುರ ನಿಲ್ದಾಣವು ಹೊಸರೂಪ ಪಡೆಯುತ್ತಿದ್ದು ನವೀಕರಣ ಮತ್ತು ಉನ್ನತೀಕರಣ ಕಾಮಗಾರಿ ಪೂರ್ಣಗೊಂಡ ಬಳಿಕ ಮುಂದಿನ ವರ್ಷ ಲೋಕಾರ್ಪಣೆಗೊಳ್ಳಲಿದೆ.

ನಿಲ್ದಾಣದ ಎರಡೂ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು ಶೇ 56ರಷ್ಟು ಪೂರ್ಣಗೊಂಡಿವೆ. ಉಳಿದ ಕಾಮಗಾರಿಗಳು ಈ ವರ್ಷದ ಅಂತ್ಯಕ್ಕೆ ಪೂರ್ಣಗೊಳಿಸುವ ಗುರಿಯನ್ನು ನೈರುತ್ಯ ರೈಲ್ವೆ ಇಟ್ಟುಕೊಂಡಿದೆ. ಇದರ ಯೋಜನಾ ವೆಚ್ಚ ₹378 ಕೋಟಿ.

ನಿಲ್ದಾಣದ ಪೂರ್ವಭಾಗದಲ್ಲಿ(ಯಶವಂತಪುರ ಮಾರುಕಟ್ಟೆ ಕಡೆಯಿಂದ) ಬಹುಮಹಡಿ ಕಾರು ಪಾರ್ಕಿಂಗ್, ದ್ವಿಚಕ್ರ ವಾಹನ ನಿಲುಗಡೆ, ರೈಲ್ವೆ ಕಚೇರಿಗಳು, ವಾಣಿಜ್ಯ ಸ್ಥಳ, ಟಿಕೆಟ್ ಕೌಂಟರ್‌ಗಳು, ವಿಐಪಿ ಲಾಂಜ್, ನಿರೀಕ್ಷಣಾ ಕೊಠಡಿಗಳು ಇತ್ಯಾದಿಗಳನ್ನು ಹೊಂದಿರುವ ನೆಲಮಹಡಿ ಮತ್ತು ಐದು ಮಹಡಿಯ ಕಟ್ಟಡ, ಎತ್ತರದ ರಸ್ತೆ-ಕಮ್-ಆಗಮನ, ನಿರ್ಗಮನ ಪ್ಲಾಜಾಗಳು ನಿರ್ಮಾಣಗೊಳ್ಳುತ್ತಿವೆ.

ಪಶ್ಚಿಮ ಭಾಗದಲ್ಲಿ (ಬೆಂಗಳೂರು–ತುಮಕೂರು ರಸ್ತೆಯ ಕಡೆಯಿಂದ), ಎತ್ತರದ ರಸ್ತೆ, ನಿರ್ಗಮನ ಪ್ಲಾಜಾ, ಪಾರ್ಕಿಂಗ್ ಪ್ರದೇಶ, ಪಾರ್ಕಿಂಗ್ ಸೌಲಭ್ಯ, ಪ್ರವೇಶ ಮತ್ತು ನಿರ್ಗಮನಕ್ಕಾಗಿ ಪ್ರತ್ಯೇಕ ಮಾರ್ಗದ ರಸ್ತೆ, ಟಿಕೆಟ್ ಕೌಂಟರ್‌ಗಳು, ವಾಣಿಜ್ಯ ಸ್ಥಳ, ಡಾರ್ಮಿಟರಿಗಳು, ವಿಶ್ರಾಂತಿ ಕೊಠಡಿಗಳು, ನಿರೀಕ್ಷಣಾ ಕೊಠಡಿಗಳು , ಮುಂಗಡ ಟಿಕೆಟ್ ಕಾಯ್ದಿರಿಸುವ ಕೌಂಟರ್‌ಗಳನ್ನು ಹೊಂದಿರುವ ನಾಲ್ಕು ಅಂತಸ್ತಿನ ನಿಲ್ದಾಣದ ಕಟ್ಟಡದ ಕಾಮಗಾರಿ ನಡೆಯುತ್ತಿದೆ.

ಈ ನಿಲ್ದಾಣವು ಬೃಹತ್ ಗಾತ್ರದ ಏರ್ ಕಾನ್ಕೋರ್ಸ್ (14,800 ಚದರ ಮೀಟರ್) ಹೊಂದಿದೆ. ಆಹಾರ ಮಳಿಗೆಗಳು, ವಾಣಿಜ್ಯ ಮಳಿಗೆಯ ಸ್ಥಳ, ವ್ಯಾಪಾರ ಕೇಂದ್ರಗಳು ಸೇರಿದಂತೆ ವಿವಿಧ ಸೌಲಭ್ಯಗಳು ಇರಲಿವೆ. ವಿಮಾನ ನಿಲ್ದಾಣಗಳಲ್ಲಿರುವ ಲಾಂಜ್‌ಗೆ ಸರಿ ಸಮನಾಗಿರುವಂತಹ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.


ಮಳೆನೀರು ಸಂಗ್ರಹ, ಒಳಚರಂಡಿ ನೀರು ಸಂಸ್ಕರಣಾ ಘಟಕಗಳೊಂದಿಗೆ ಹಸಿರು ಕಟ್ಟಡ ಮಾನದಂಡಗಳ ಪ್ರಕಾರ ಈ ನಿಲ್ದಾಣ ನಿರ್ಮಿಸಲಾಗುತ್ತಿದೆ. ಇಂಧನ ದಕ್ಷತೆಯ ದೃಷ್ಟಿಯಿಂದ ಎಲ್‌ಇಡಿ ದೀಪಗಳನ್ನು ಅಳವಡಿಸಲಾಗುತ್ತಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ಲಾಟ್‌ಫಾರ್ಮ್–1ರ ಕಡೆಯಿಂದ (ಪೂರ್ವಭಾಗ) ನಡೆಯುತ್ತಿರುವ ಕಾಮಗಾರಿ ಬಹುತೇಕ ಅಂತಿಮ ಹಂತಕ್ಕೆ ಬಂದಿದೆ. ಪ್ರಯಾಣಿಕರ ದಟ್ಟಣೆ ತಡೆಗೆ ನಿಲ್ದಾಣದ ಆಗಮನ–ನಿರ್ಗಮನ ದ್ವಾರಗಳನ್ನು ಪ್ರತ್ಯೇಕವಾಗಿ ನಿರ್ಮಾಣ ಮಾಡಿರುವುದರಿಂದ ವಾಹನ ಸಂಚಾರಕ್ಕೆ ಅನುಕೂಲವಾಗಲಿದೆ. ನಮ್ಮ ಮೆಟ್ರೊದ ಯಶವಂತಪುರ ನಿಲ್ದಾಣ ಕಡೆಯಿಂದ (ಪಶ್ಚಿಮ ಭಾಗ) ಕಾಮಗಾರಿಗಳು ನಡೆಯುತ್ತಿದ್ದು, ಇನ್ನು ಆರು ತಿಂಗಳಲ್ಲಿ ಅಂತಿಮ ಹಂತಕ್ಕೆ ತಲುಪಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಪ್ರವೇಶ, ನಿರ್ಗಮನ ಪ್ರದೇಶ ಮತ್ತು ಎಲ್ಲ ಪ್ಲಾಟ್‌ಫಾರ್ಮ್‌ಗಳಿಗೆ ಲಿಫ್ಟ್‌ಗಳು ಮತ್ತು ಎಸ್ಕಲೇಟರ್‌ಗಳು ಇರಲಿವೆ. ಪ್ರಯಾಣಿಕರ ಸೌಕರ್ಯ, ಅನುಕೂಲ, ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಆರಾಮವಾಗಿ ಕಾಯುವ ಪ್ರದೇಶ, ಮಲ್ಟಿ-ಲೆವೆಲ್ ಪಾರ್ಕಿಂಗ್, ಮಕ್ಕಳಿಗಾಗಿ ಆಟದ ವಲಯ, ಸ್ಥಳೀಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಸ್ಥಳಾವಕಾಶ ಇರಲಿದೆ.

2022ರ ಜೂನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಕಾಮಗಾರಿಗೆ ಚಾಲನೆ ನೀಡಿದ್ದರು. ದೆಹಲಿಯ ಗಿರ್ಧಾರಿ ಲಾಲ್ ಕನ್‌ಸ್ಟ್ರಕ್ಷನ್ಸ್ ಕಂಪನಿ ಕಾಮಗಾರಿ ಕೈಗೆತ್ತಿಕೊಂಡಿದೆ.

6 ಯಶವಂತಪುರ ರೈಲು ನಿಲ್ದಾಣದಲ್ಲಿರುವ ಪ್ಲಾಟ್‌ಫಾರ್ಮ್‌ಗಳು
26 ಯಶವಂತಪುರದಿಂದ ಸಂಚರಿಸುವ ಪ್ಯಾಸೆಂಜರ್ ರೈಲು
150 ಯಶವಂತಪುರ ಮೂಲಕ ಸಂಚರಿಸುವ ಎಕ್ಸ್‌ಪ್ರೆಸ್ ರೈಲು
60,000 ಪ್ರತಿದಿನ ಈ ನಿಲ್ದಾಣದಿಂದ ಸಂಚರಿಸುವ ಪ್ರಯಾಣಿಕರ ಸಂಖ್ಯೆ
2026 ನವೀಕೃತ ನಿಲ್ದಾಣ ಲೋಕಾರ್ಪಣೆಗೊಳ್ಳಲಿರುವ ವರ್ಷ




ಯಶವಂತಪುರ ರೈಲು ನಿಲ್ದಾಣದ ಪಶ್ಚಿಮ ಭಾಗದಲ್ಲಿ ನಡೆಯುತ್ತಿರುವ ಕಾಮಗಾರಿ



ಬೆಂಗಳೂರಿನ ಯಶವಂತಪುರ ರೈಲು ನಿಲ್ದಾಣದ ಪೂರ್ವಭಾಗದಲ್ಲಿ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದೆ

ಚಿತ್ರಗಳು: ರಂಜು ಪಿ.

ವಿಶ್ವದರ್ಜೆಯ ನಿಲ್ದಾಣ: ಸೋಮಣ್ಣ



ನಗರದ ಎಲ್ಲ ಪ್ರಮುಖ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಮೆಜೆಸ್ಟಿಕ್‌ನಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ನಂತರ ಪ್ರಮುಖ ನಿಲ್ದಾಣವಾಗಿರುವ ಯಶವಂತಪುರ ವಿಶ್ವದರ್ಜೆಯ ನಿಲ್ದಾಣವಾಗಲಿದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಕಾಮಗಾರಿಗಳನ್ನು ವೇಗವಾಗಿ ಮಾಡಬೇಕಿದ್ದರೆ ಯಶವಂತಪುರಕ್ಕೆ ಬರುವ ರೈಲುಗಳನ್ನು ಬೇರೆ ಮಾರ್ಗಕ್ಕೆ ತಿರುಗಿಸಬೇಕಿತ್ತು. ಆದರೆ, ಪ್ರಯಾಣಿಕರಿಗೆ ಅನನುಕೂಲ ಆಗಬಾರದು ಎಂಬ ಕಾರಣಕ್ಕೆ ಹೆಚ್ಚಿನ ರೈಲುಗಳನ್ನು ತಿರುಗಿಸದೇ ಕಾಮಗಾರಿ ನಡೆಸಲಾಗುತ್ತಿದೆ. ಮುಂದಿನ ವರ್ಷ ರೈಲ್ವೆ ನಿಲ್ದಾಣ ಲೋಕಾರ್ಪಣೆಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ನಿಲ್ದಾಣದ ಮಾಹಿತಿ

ಯಶವಂತಪುರ ನಿಲ್ದಾಣವು ಬೆಂಗಳೂರು-ಪುಣೆ ಮತ್ತು ಬೆಂಗಳೂರು-ಹೈದರಾಬಾದ್ ಮುಖ್ಯ ಮಾರ್ಗದಲ್ಲಿದೆ.

ದೆಹಲಿ, ಮುಂಬೈ, ಪುಣೆ, ಇಂದೋರ್, ಭುವನೇಶ್ವರ, ಭೋಪಾಲ್, ಗ್ವಾಲಿಯರ್, ಜಬಲ್ಪುರ, ಅಜ್ಮೇರ್, ಜೈಪುರ, ಅಯೋಧ್ಯೆ, ಗೋರಖ್‌ಪುರ, ಲಖನೌ, ಚಂಡೀಗಢ, ಹೌರಾ, ಚೆನ್ನೈ, ತಿರುವನಂತಪುರ, ಮಂಗಳೂರು, ಕಣ್ಣೂರು, ಕೋಯಿಕ್ಕೋಡ್, ತುಮಕೂರು, ಅಹಮದಾಬಾದ್, ಪುದುಚೇರಿ ಮುಂತಾದ ಪ್ರಮುಖ ನಗರಗಳಿಗೆ ಯಶವಂತಪುರದಿಂದ ರೈಲುಗಳು ಹೊರಡುತ್ತವೆ.

ಚಿತ್ರಾವಳಿ



ಜೆ.ಪಿ. ನಗರ 2ನೇ ಬ್ಲಾಕ್‌ನ ಪರಿವರ್ತನ ಕ್ಷೇಮಾಭಿವೃದ್ಧಿ ಸಂಘ ವಿಶ್ವ ಪರಿಸರ ದಿನದ ಅಂಗವಾಗಿ ಆಯೋಜಿಸಿದ್ದ 'ನಮ್ಮ ನಡೆ ಕಸಮುಕ್ತ ಬಡಾವಣೆಯ ಕಡೆ' ಎಂಬ ಘೋಷವಾಕ್ಯದಡಿ, ಸದಸ್ಯರು ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡಿದರು



ವಿಜಯಕುಮಾರ್ ಪತ್ತಾರ್ ನೇತೃತ್ವದ ವಿಶ್ವಕರ್ಮ ಮಹಾ ಒಕ್ಕೂಟದ ರಾಜ್ಯಮಟ್ಟದ ಕಾರ್ಯಾಲಯದ ಉದ್ಘಾಟನೆ ಸಮಾರಂಭದಲ್ಲಿ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ರಾಜ್ಯ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ಮಾಜಿ ಆಯುಕ್ತ ಕೆ.ಎಸ್. ರಾಜಣ್ಣ, ವರವಿ ಕ್ಷೇತ್ರದ ಅಧ್ಯಕ್ಷ ಮೋಹನ್ ನರಗುಂದ, ನಿವೃತ್ತ ಡಿವೈಎಸ್ಪಿ ಪ್ರಭಾಕರ್, ವಿಶ್ವ ಕರ್ಮ ಅಭಿವೃದ್ಧಿ ನಿಗಮದ ಜಿಲ್ಲಾ ನಿರ್ದೇಶಕ ಟಿ. ಸಿ. ಡಮರುಗೇಶ ಹಾಗೂ ಒಕ್ಕೂಟದ ಉಪಾಧ್ಯಕ್ಷ ಶಿವಾರಪಟ್ಟಣ ಮಹಾದೇವ್ ಉಪಸ್ಥಿತರಿದ್ದರು



ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಕರ್ನಾಟಕ ನಾಟಕ ಅಕಾಡೆಮಿ ಹಮ್ಮಿಕೊಂಡಿದ್ದ ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ನುಡಿ–ಗೀತ ನಮನ ಕಾರ್ಯಕ್ರಮದಲ್ಲಿ ಬಿ.ವಿ. ಪ್ರವೀಣ್, ಕಿಕ್ಕೇರಿ ಕೃಷ್ಣಮೂರ್ತಿ, ಮುದ್ದುಮೋಹನ್, ಸಿ. ಸೋಮಶೇಖರ್, ಟಿ.ಎಸ್. ನಾಗಾಭರಣ, ಕೆ.ಎಂ. ಗಾಯತ್ರಿ, ವೈ.ಕೆ. ಮುದ್ದುಕೃಷ್ಣ, ಕೆ.ವಿ. ನಾಗರಾಜಮೂರ್ತಿ ಆನೂರು ಅನಂತಕೃಷ್ಣಶರ್ಮ ಅವರು ವೆಂಕಟೇಶಮೂರ್ತಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ.

ಇ–ಖಾತಾ ಇಲ್ಲದಿದ್ದರೆ ಕಟ್ಟಡ ನಕ್ಷೆ ಇಲ್ಲ

ಒಂದನೇ ಪುಟದಿಂದ...

'ಮ್ಯಾನ್ಯುಯಲ್ ಖಾತಾ' ಹೊಂದಿರುವವರಿಗೆ ಕಟ್ಟಡ ನಕ್ಷೆ ನೀಡುವುದನ್ನು ಜುಲೈ 1ರಿಂದ ನಿಲ್ಲಿಸ ಲಾಗುತ್ತದೆ. ಒಂದೇ ದಿನದಲ್ಲಿ ತಾತ್ಕಾಲಿಕ ಕಟ್ಟಡ ನಕ್ಷೆ ಲಭ್ಯವಾಗುವ 'ನಂಬಿಕೆ ನಕ್ಷೆ' ಯೋಜನೆ ಮೂಲಕವೇ ಅರ್ಜಿ ಸಲ್ಲಿಸ ಬೇಕಾಗುತ್ತದೆ. ಆನ್‌ಲೈನ್‌ನಲ್ಲಿ ಕಟ್ಟಡ ನಕ್ಷೆಗೆ ಅರ್ಜಿ ಸಲ್ಲಿಸುವಾಗ ಇ-ಖಾತಾ ಕಡ್ಡಾಯವಾಗಿರುತ್ತದೆ. ಇದರಿಂದ, ಆಸ್ತಿಗೆ ಸಂಬಂಧಿಸಿದಂತೆ ಇತರೆ ದಾಖಲೆಗಳನ್ನು ಸಲ್ಲಿಸುವ ಅಗತ್ಯವಿಲ್ಲ. ಆಸ್ತಿ ತೆರಿಗೆ, ಕ್ರಯಪತ್ರ, ಆಸ್ತಿಯ ಸ್ಥಳ (ಅಕ್ಷಾಂಶ, ರೇಖಾಂಶ), ಮಾಲೀಕರ ಚಿತ್ರ, ಆಧಾರ್ ಎಲ್ಲವೂ ಇ-ಖಾತಾದಲ್ಲಿಯೇ ನಮೂದಾಗಿರುವುದರಿಂದ ಈ ಎಲ್ಲ ದಾಖಲೆಗಳು ಆನ್‌ಲೈನ್‌ನಲ್ಲಿಯೇ ಲಭ್ಯವಾಗುತ್ತದೆ. ನಕ್ಷೆಗೆ ಸಂಬಂಧಿಸಿದ ದಾಖಲೆಗಳನ್ನು ಮಾತ್ರ ಸಲ್ಲಿಸಬೇಕಾಗುತ್ತದೆ' ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು. 'ನಂಬಿಕೆ ನಕ್ಷೆ' ವ್ಯವಸ್ಥೆಯಡಿ ಒಂದು ದಿನದಲ್ಲಿ ಸೃಜನೆಗೊಳ್ಳುವ ತಾತ್ಕಾಲಿಕ ನಕ್ಷೆಯನ್ನು ಸಂಬಂಧಪಟ್ಟ ನಗರ ಸಹಾಯಕ ನಿರ್ದೇಶಕರು ಕಾಲಮಿತಿಯೊಳಗೆ ದೃಢೀಕರಿಸಬೇಕು. ಸಕಾರಣಗಳೊಂದಿಗೆ ನಿರಾಕರಿಸದಿದ್ದಲ್ಲಿ, ತಂತ್ರಾಂಶದಲ್ಲಿ ಸ್ವಯಂಚಾಲಿತವಾಗಿ ಕಟ್ಟಡ ನಕ್ಷೆ ಅನುಮೋದನೆಯಾಗುತ್ತದೆ. ಸ್ವಯಂ ಅನುಮೋದನೆಗೆ ಕಾರಣರಾದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ನಗರ ಯೋಜನೆ ಜಂಟಿ ನಿರ್ದೇಶಕರಿಗೆ ಮುಖ್ಯ ಆಯುಕ್ತರು ನಿರ್ದೇಶಿಸಿದ್ದಾರೆ.

'ಇ–ಖಾತಾ: ಪ್ರಕ್ರಿಯೆ ಸುಲಭ'

'ಬಿಬಿಎಂಪಿಯ ವೆಬ್‌ಸೈಟ್ BBMPeAasthi.karnataka.gov.in ಮೂಲಕ ಇ-ಖಾತಾವನ್ನು ಆಸ್ತಿ ಮಾಲೀಕರು ಸುಲಭವಾಗಿ ಪಡೆದುಕೊಳ್ಳಬಹುದು. ದಲ್ಲಾಳಿಗಳಿಗೆ ಹೆಚ್ಚುವರಿಯಾಗಿ ಹಣ ನೀಡಿ ಮೋಸ ಹೋಗುವ ಬದಲು, ಆನ್‌ಲೈನ್, ಬೆಂಗಳೂರು ಒನ್, ಜನಸೇವಕರಿಂದಲೂ ಇ-ಖಾತಾ ಪಡೆದುಕೊಳ್ಳಬಹುದು' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

'ಇ-ಖಾತಾ ಪಡೆಯಲು ಆಧಾರ್, ಕ್ರಯ ಪತ್ರ ಸಂಖ್ಯೆ, ಆಸ್ತಿ ತೆರಿಗೆ ಪಾವತಿಯ ಸಂಖ್ಯೆ, ಬೆಸ್ಕಾಂ ಖಾತಾ ಸಂಖ್ಯೆ, ಆಸ್ತಿ ಚಿತ್ರಗಳನ್ನು ಅರ್ಜಿಯಲ್ಲಿ ಸಲ್ಲಿಸಬೇಕು. ದಾಖಲೆಗಳನ್ನು ಸಲ್ಲಿಸಿದ ಒಂದೆರಡು ದಿನಗಳಲ್ಲೇ ಅಂತಿಮ ಇ-ಖಾತಾ ಲಭ್ಯವಾಗಲಿದೆ. ಪ್ರತಿ ದಿನ ಸುಮಾರು ಮೂರು ಸಾವಿರ ಅರ್ಜಿಗಳು ಬರುತ್ತಿದ್ದು, ನಿತ್ಯವೂ ಮೂರು ಸಾವಿರ ಇ-ಖಾತಾಗಳನ್ನು ನೀಡಲಾಗುತ್ತಿದೆ' ಎಂದರು.

https://janasevaka.karnataka.gov.in/ ವೆಬ್‌ಸೈಟ್ ಹಾಗೂ 080-49203888ಕ್ಕೆ ಮಾಲೀಕರು ಕರೆ ಮಾಡಿದರೆ, 'ಜನಸೇವಕರು' ಮನೆಯ ಬಾಗಿಲಲ್ಲೇ ಇ-ಖಾತಾಗೆ ಅರ್ಜಿ, ದಾಖಲೆಗಳನ್ನು ಅಪ್‌ಲೋಡ್ ಮಾಡುತ್ತಾರೆ. ಇ-ಖಾತಾ ಅರ್ಜಿಗೆ ₹45, ಪ್ರತಿ ಪುಟ ಸ್ಕ್ಯಾನ್, ಅಪ್‌ಲೋಡ್‌ಗೆ ₹5, ಮನೆ ಬಾಗಿಲಿಗೆ ಜನಸೇವಕನ ಸೇವೆಗೆ ₹115 ಶುಲ್ಕ ಪಾವತಿಸಬೇಕಾಗುತ್ತದೆ. ದಾಖಲೆಗಳ ಪುಟ ಹೆಚ್ಚಿದ್ದರೆ, ಪ್ರತಿ ಪುಟಕ್ಕೆ ₹5 ಹೆಚ್ಚಾಗುತ್ತದೆ.

ಯಾವ ವಲಯದಲ್ಲಿ ಎಷ್ಟು ಇ- ಖಾತಾ ವಿತರಣೆ

ಸಂಖ್ಯೆ	ವಲಯ
79,089	ಬೊಮ್ಮನಹಳ್ಳಿ
76,309	ಆರ್.ಆರ್. ನಗರ
75,167	ಮಹದೇವಪುರ
66,707	ದಕ್ಷಿಣ ವಲಯ
65,091	ಯಲಹಂಕ
49,361	ಪಶ್ಚಿಮ ವಲಯ
45,334	ಪೂರ್ವ ವಲಯ
27,917	ದಾಸರಹಳ್ಳಿ

ಹೊಸ ಖಾತೆ ಪಡೆಯಲು 24 ಸಾವಿರ ಅರ್ಜಿ



ಮುನೀಶ್ ಮೌದ್ಗಿಲ್

ಬಿಬಿಎಂಪಿಯಲ್ಲಿರುವ ಆಸ್ತಿಗಳಿಗೆ ಖಾತಾ ಹೊಂದಿರದ 24,082 ಮಾಲೀಕರು ಹೊಸ ಖಾತಾ ಪಡೆಯಲು ಅರ್ಜಿ ಸಲ್ಲಿಸಿದ್ದಾರೆ.

'ನಗರದಲ್ಲಿರುವ ಎಲ್ಲ ನಿವೇಶನಗಳಿಗೂ ಖಾತಾ ಸಿಗಬೇಕು, ತೆರಿಗೆ ವ್ಯಾಪ್ತಿಗೆ ಬರಬೇಕು' ಎಂಬ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸೂಚನೆ ಮೇರೆಗೆ, ಎಲ್ಲ ಆಸ್ತಿಗಳನ್ನೂ ತೆರಿಗೆ ವ್ಯಾಪ್ತಿಗೆ ತರಲು ಹೊಸ ಖಾತಾ ಪಡೆಯುವ ವ್ಯವಸ್ಥೆಯನ್ನು ಬಿಬಿಎಂಪಿ ಜನವರಿಯಿಂದ ಜಾರಿಗೆ ತಂದಿದೆ. ವೆಬ್‌ಸೈಟ್‌ನಲ್ಲಿ https://BBMP.karnataka.gov.in/NewKhata ಅರ್ಜಿಯನ್ನು ಸಲ್ಲಿಸಬಹುದಾಗಿದೆ.

'ನಗರದಲ್ಲಿ ಸುಮಾರು ಐದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿ ಮಾಲೀಕರು ಬಿಬಿಎಂಪಿಯ ಯಾವುದೇ ಖಾತಾ ಹೊಂದಿಲ್ಲ. ಸುಮಾರು 3,900 ಹೊಸ ಖಾತಾಗಳನ್ನು ವಿತರಿಸಲಾಗಿದೆ. 19,777 ಅರ್ಜಿಗಳು ಕಂದಾಯ ಅಧಿಕಾರಿಗಳ ಲಾಗಿನ್‌ನಲ್ಲಿ ಬಾಕಿ ಉಳಿದಿವೆ. ಕೇಸ್ ವರ್ಕರ್‌ಗಳ ಬಳಿ ಸುಮಾರು ಎರಡು ಸಾವಿರ ಅರ್ಜಿಗಳು ಬಾಕಿ ಇವೆ. ಹೊಸ ಖಾತಾ ನೀಡಲು ಸಾಕಷ್ಟು ದಾಖಲೆಗಳನ್ನು ಪರಿಶೀಲಿಸಬೇಕು. ಪ್ರಕ್ರಿಯೆ ಮುಗಿಸಲು 60 ದಿನಗಳ ಸಮಯವಿದ್ದರೂ ಶೀಘ್ರ ಮುಗಿಸುವಂತೆ ಕಂದಾಯ ಅಧಿಕಾರಿಗಳಿಗೆ (ಆರ್‌ಒ) ಸೂಚಿಸಲಾಗಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

'ಹಾಲಿ ನ್ಯಾಯಮೂರ್ತಿ ತನಿಖೆ ನಡೆಸಲಿ'

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವ ವೇಳೆ ನಡೆದ ಕಾಲ್ತುಳಿತ ಪ್ರಕಣದ ತನಿಖೆಯನ್ನು ಹಾಲಿ ನ್ಯಾಯಮೂರ್ತಿಯ ನೇತೃತ್ವದಲ್ಲಿ ನಡೆಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಆಗ್ರಹಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ತನ್ನ ವೈಫಲ್ಯ ಮರೆಮಾಚುವುದನ್ನು ನಿಲ್ಲಿಸಬೇಕು. ಐಪಿಎಲ್ ಸಾವಿರಾರು ಕೋಟಿಯ ಜೂಜಾಟವಾಗಿದ್ದು, ಕೇಂದ್ರ ಸರ್ಕಾರ ಇದರ ಮೇಲೆ ನಿಯಂತ್ರಣ ಹೇರಬೇಕು. ಆರ್‌ಸಿಬಿ ಫ್ರಾಂಚೈಸಿಯಿಂದ ಮೃತರ ಕುಟುಂಬಕ್ಕೆ ಇನ್ನೂ ಹೆಚ್ಚಿನ ಪರಿಹಾರವನ್ನು ಸರ್ಕಾರ ಕೊಡಿಸಬೇಕು ಎಂದು ಒತ್ತಾಯಿಸಿದರು.

ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಮಾತನಾಡಿ, ಕರ್ನಾಟಕದ ಕ್ರೀಡಾ ಇತಿಹಾಸದಲ್ಲೇ ಇಂತಹ ದುರಂತ ನಡೆದಿರಲಿಲ್ಲ. ಆರ್‌ಸಿಬಿ ಫ್ರಾಂಚೈಸಿ ಅಥವಾ ಆಟಗಾರರು ಸೌಜನ್ಯಕ್ಕಾದರೂ ಮೃತರ ಕುಟುಂಬಸ್ಥರನ್ನು ಭೇಟಿ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬ್ಯಾಟರಾಯನಪುರ: 9 ಸಾವಿರ ಇ-ಖಾತಾ ವಿತರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ವಿವಿಧ ವಾರ್ಡುಗಳಲ್ಲಿ ಕಳೆದ ನಾಲ್ಕು ತಿಂಗಳಿನಿಂದ ನಡೆಸಿದ ಇ-ಖಾತಾ ಅಭಿಯಾನದಲ್ಲಿ 9 ಸಾವಿರಕ್ಕೂ ಹೆಚ್ಚು ನಾಗರಿಕರಿಗೆ ಇ-ಖಾತಾ ವಿತರಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಕೆಬಿಜಿ ಸ್ವಯಂಸೇವಕರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ವತಿಯಿಂದ ಜಕ್ಕೂರಿನ ಅಂಬೇಡ್ಕರ್ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಇ-ಖಾತಾ ಮೇಳದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಆಸ್ತಿ ನೋಂದಣಿಯನ್ನು ಸರಳಗೊಳಿಸಲು ಹಾಗೂ ಅಕ್ರಮ ಮತ್ತು ಮೋಸದ ವ್ಯವಹಾರಗಳನ್ನು ತಡೆಗಟ್ಟುವ ಉದ್ದೇಶದಿಂದ ಇ-ಖಾತಾ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ನಾಗರಿಕರು ಅಗತ್ಯ ದಾಖಲೆಗಳೊಂದಿಗೆ ನೋಂದಾಯಿಸಿಕೊಂಡು ಆದಷ್ಟು ಬೇಗನೆ ಇ-ಖಾತಾ ಪಡೆಯಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ರವಿಕುಮಾರ್ ಮಾತನಾಡಿ, ನಗರ ಸ್ಥಳೀಯಸಂಸ್ಥೆಗಳ ವ್ಯಾಪ್ತಿಯ ಸ್ವತ್ತುಗಳಿಗೆ ಖಾತಾ ನೀಡುವ ಸಂಬಂಧ ಕಾಯಿದೆ ಮತ್ತು ನಿಯಮಗಳನ್ನು ಸರಳೀಕೃತಗೊಳಿಸಲಾಗಿದೆ' ಎಂದರು.

ಮಧ್ಯವರ್ತಿಗಳ ಹಾವಳಿಯಿಲ್ಲದೆ ಕಂದಾಯ ಇಲಾಖೆಯ ಕೆಲಸಗಳು ಸುಲಭವಾಗಿ ಸಾರ್ವಜನಿಕರಿಗೆ ತಲುಪಿಸುವ ಉದ್ದೇಶದಿಂದ ಇ-ಖಾತಾ ಅಭಿಯಾನ ಏರ್ಪಡಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯ ನಿವೇಶನ, ವಾಸದಮನೆ, ಆಸ್ತಿ ಹೊಂದಿರುವವರು ಯಾವುದೇ ಖರ್ಚಿಲ್ಲದೆ ಶೀಘ್ರವಾಗಿ ಇ-ಖಾತಾ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಹಡಗಿಗೆ ಬೆಂಕಿ: ಸಾಗರದಲ್ಲಿ ಅವಘಡ



ಕಣ್ಣೂರು (ಪಿಟಿಐ): ಕೇರಳದ ಕರಾವಳಿಯಲ್ಲಿ ಸಿಂಗಪುರದ ಹಡಗಿಗೆ ಬೆಂಕಿ ಹೊತ್ತಿಕೊಂಡಿದ್ದು, ಇದರಲ್ಲಿರುವ ಅಪಾರ ಪ್ರಮಾಣದ ಸರಕಿಗೆ ಹಾನಿಯಾಗಿದೆ.

ಹಡಗಿನಲ್ಲಿದ್ದ 22 ಮಂದಿಯಲ್ಲಿ ಭಾರತೀಯರು ಒಬ್ಬರೂ ಇಲ್ಲ. ಚೀನಾ, ಥಾಯ್ಲೆಂಡ್, ಇಂಡೊನೇಷ್ಯಾದವರು ಎಂಬುದು ಗೊತ್ತಾಗಿದೆ.

ಕಂಟೇನರ್‌ಗಳನ್ನು ಹೊತ್ತಿದ್ದ ಸಿಂಗಪುರದ ಹಡಗು ಸೋಮವಾರ ಕೇರಳ ಕರಾವಳಿ ಪ್ರವೇಶಿಸಿತ್ತು. ಬೆಳಿಗ್ಗೆ 10.30ಕ್ಕೆ ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡಿತು. ಈ ಬೃಹತ್ ಹಡಗು ಮುಂಬೈಗೆ ತೆರಳುತ್ತಿತ್ತು.



ನಗರದಲ್ಲಿ ಭಾನುವಾರ 'ಬಿಲ್ಲವ ಅಸೋಸಿಯೇಷನ್' ಆಯೋಜಿಸಿದ್ದ ಕೋಟಿ–ಚೆನ್ನಯ ಕ್ರೀಡಾಕೂಟ ಉದ್ಘಾಟನಾ ಸಮಾರಂಭದಲ್ಲಿ ಅಂತರರಾಷ್ಟ್ರೀಯ ಪವರ್ ಲಿಫ್ಟರ್ ದಿಶಾ ಮೋಹನ್, ಏಕಲವ್ಯ ಪ್ರಶಸ್ತಿ ಪುರಸ್ಕೃತರಾದ ಬೋಳ ಅಕ್ಷತಾ ಪೂಜಾರಿ, ಕಿರಿಯರ ಹಾಕಿ ತಂಡದ ತರಬೇತುದಾರ ಜನಾರ್ದನ್ ಸಿ.ಬಿ., ಭಾರತ ತಂಡದ ವಾಲಿಬಾಲ್ ಆಟಗಾರ (ಕಿವುಡರ ವಿಭಾಗ) ಭೂಷಣ್ ಪೂಜಾರಿ ಮತ್ತು ರಾಜ್ಯದ ಮಾಜಿ ಹಾಕಿ ಆಟಗಾರ್ತಿ ಸಂಗೀತ ಸಾಲ್ಯಾನ್ ಆರ್. ಅವರನ್ನು ಸನ್ಮಾನಿಸಲಾಯಿತು. 'ಬಿಲ್ಲವ ಅಸೋಸಿಯೇಷನ್'ನ ಸ್ವಾಗತ ಸಮಿತಿ ಅಧ್ಯಕ್ಷ ವಿಜಯಕೃಷ್ಣ, ಉಪಾಧ್ಯಕ್ಷೆ ಜಯಂತಿ ವಿಜಯಕೃಷ್ಣ, ಮುಂಬೈನ ಭಾರತ್ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಗಂಗಾಧರ ಪೂಜಾರಿ, ಅಸೋಸಿಯೇಷನ್ ಅಧ್ಯಕ್ಷ ಎಂ.ವೇದಕುಮಾರ್, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಜಂಟಿ ಕಾರ್ಯದರ್ಶಿ ಕೃಷ್ಣ ಓಬಯ್ಯ, ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್ ಡಿ.ಎನ್., ಹಣಕಾಸು ಸಮಿತಿ ಅಧ್ಯಕ್ಷ ಲಕ್ಷ್ಮಣ್ ಅಮೀನ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕ್ಯಾನ್ಸರ್ ಚಿಕಿತ್ಸೆಗೆ ಆಧುನಿಕ ವ್ಯವಸ್ಥೆ: ವೈದ್ಯಕೀಯ ಶಿಕ್ಷಣ ಇಲಾಖೆ ಸಿದ್ಧತೆ

ಕಿದ್ವಾಯಿಯಲ್ಲಿ ಪ್ರೋಟಾನ್ ಚಿಕಿತ್ಸಾ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಕ್ಯಾನ್ಸರ್ ಚಿಕಿತ್ಸೆಗಾಗಿ ಅತ್ಯಾಧುನಿಕ ಪ್ರೋಟಾನ್ ಚಿಕಿತ್ಸಾ ಸೌಲಭ್ಯವನ್ನು ಆರಂಭಿಸಲು ವೈದ್ಯಕೀಯ ಶಿಕ್ಷಣ ಇಲಾಖೆ ಸಿದ್ಧತೆ ನಡೆಸಿದೆ.

ಸರ್ಕಾರಿ ಆರೋಗ್ಯ ವ್ಯವಸ್ಥೆಯಲ್ಲಿ ಈ ಸೌಲಭ್ಯ ದೇಶದಲ್ಲೇ ಪ್ರಥಮವಾಗಲಿದೆ. ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ಅದರಲ್ಲೂ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಆಧುನಿಕ ಮತ್ತು ವಿಶೇಷ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವ ಡಾ.ಶರಣಪ್ರಕಾಶ್ ಪಾಟೀಲ ತಿಳಿಸಿದ್ದಾರೆ.

ಈ ಸೌಲಭ್ಯವನ್ನು ಒದಗಿಸಲು ₹500 ಕೋಟಿ ಅನುದಾನ ನೀಡುವಂತೆ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರು ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪಾಟೀಲ ಅವರು ಮನವಿ ಪತ್ರವೊಂದನ್ನೂ ನೀಡಿದ್ದಾರೆ.

ಕಿದ್ವಾಯಿ ಸಂಸ್ಥೆಯು ದೇಶದ ಪ್ರಮುಖ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಒಂದು. ಇಲ್ಲಿ ವಾರ್ಷಿಕವಾಗಿ 21 ಸಾವಿರಕ್ಕೂ ಹೆಚ್ಚು ಹೊಸ ಕ್ಯಾನ್ಸರ್ ಪ್ರಕರಣಗಳು ದಾಖಲಾಗುತ್ತಿವೆ. ವಿಕಿರಣ ಚಿಕಿತ್ಸೆಯಲ್ಲಿ ಕ್ಯಾನ್ಸರ್ ಗಡ್ಡೆಯ ಅಕ್ಕಪಕ್ಕದ ಭಾಗಗಳಿಗೂ ಪರಿಣಾಮವಾಗುವ ಸಾಧ್ಯತೆ ಇರುತ್ತದೆ. ಆದರೆ, ಸುಧಾರಿತ ರೂಪವಾದ ಪ್ರೋಟಾನ್ ಚಿಕಿತ್ಸೆಯು ಗಡ್ಡೆಯ ಬಳಿ ನಿರ್ಣಾಯಕ ಅಂಗಗಳಿಗೆ ಯಾವುದೇ ರೀತಿಯ ಹಾನಿ ಉಂಟು ಮಾಡುವುದಿಲ್ಲ. ವಿಶೇಷವಾಗಿ ಸೂಕ್ಷ್ಮ ಪ್ರದೇಶಗಳಲ್ಲಿ ದೀರ್ಘಕಾಲೀನ ಅಡ್ಡ ಪರಿಣಾಮಗಳನ್ನು ಕಡಿಮೆ ಮಾಡುತ್ತದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

'ಗಾಮಾ ಕಿರಣಗಳು ಅಥವಾ ಕ್ಷ-ಕಿರಣಗಳನ್ನು ಬಳಸುವುದು ಸಾಂಪ್ರದಾಯಿಕ ರೇಡಿಯೊ ಥೆರಪಿಗಿಂತ ಭಿನ್ನ. ಪ್ರೋಟಾನ್ ಚಿಕಿತ್ಸೆಯು ನಿಖರವಾಗಿ ಸಮಸ್ಯೆ ಇರುವ ಜಾಗಕ್ಕೆ ಮಾತ್ರ ಚಿಕಿತ್ಸೆ ಒದಗಿಸುತ್ತದೆ. ಇದರಿಂದ ಹಾನಿ ಪ್ರಮಾಣವೂ ಕಡಿಮೆ' ಎಂದು ಪಾಟೀಲ ವಿವರಿಸಿದ್ದಾರೆ.

'ಪ್ರೋಟಾನ್ ಚಿಕಿತ್ಸೆಯು ಮಕ್ಕಳ ಕ್ಯಾನ್ಸರ್ ಪ್ರಕರಣಗಳು, ವಿಶೇಷವಾಗಿ ಎನ್‌ಎಫ್–1 ಮತ್ತು ರೆಟಿನೋಬ್ಲಾಸ್ಟೊ-ಮಾದಂತಹ ಆನುವಂಶಿಕ ಪ್ರಕಾರಗಳು ಮತ್ತು ಕಣ್ಣು, ತಲೆಬುರುಡೆಯ ಬುಡ, ಬೆನ್ನುಮೂಳೆ, ಯಕೃತ್ತು, ಪ್ರಾಸ್ಟೇಟ್, ಸ್ತನ, ತಲೆ ಮತ್ತು ಕುತ್ತಿಗೆ ಹಾಗೂ ಪ್ಯಾರಾನಾಸಲ್ ಸೈನಸ್ ಕ್ಯಾನ್ಸರ್‌ಗಳು ಸೇರಿ ವ್ಯಾಪಕ ಶ್ರೇಣಿಯ ಇತರ ಮಾರಕ ಕಾಯಿಲೆಗಳಿಗೆ ಚಿಕಿತ್ಸೆ ನೀಡುತ್ತದೆ. ಮರು–ವಿಕಿರಣ ಪ್ರಕರಣಗಳು ಮತ್ತು ತೆಗೆದು ಹಾಕಲಾದ ಗಡ್ಡೆಗಳ ಪ್ರಕರಣ-ಗಳಿಗೂ ಬಳಸಬಹುದಾಗಿದೆ. ಇದರಿಂದ ಗುಣಮುಖರಾಗುವ ಸಾಧ್ಯತೆ ಹೆಚ್ಚು' ಎಂದು ಅವರು ಹೇಳಿದ್ದಾರೆ.



ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರ ಜತೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ ಸಮಾಲೋಚನೆ ನಡೆಸಿದರು

1.2 ಲಕ್ಷ ರೋಗಿಗಳಿಗೆ ಪ್ರೋಟಾನ್ ಚಿಕಿತ್ಸೆ

2025 ರ ವೇಳೆಗೆ ದೇಶದಲ್ಲಿ 1.2 ಲಕ್ಷಕ್ಕೂ ಹೆಚ್ಚು ರೋಗಿಗಳಿಗೆ ಪ್ರೋಟಾನ್ ಚಿಕಿತ್ಸೆಯ ಅಗತ್ಯವಿರಬಹುದು ಎಂದು ಅಂದಾಜಿಸಲಾಗಿದೆ. ಕಿದ್ವಾಯಿಯಲ್ಲಿರುವ ಈ ಸೌಲಭ್ಯವು ಅತ್ಯಾಧುನಿಕ ಕ್ಯಾನ್ಸರ್ ಚಿಕಿತ್ಸೆಗೆ ಆರೈಕೆ ಒದಗಿಸುವುದಲ್ಲದೇ, ನಿಮ್ಹಾನ್ಸ್ ಮತ್ತು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಿಂದ ಉಲ್ಲೇಖಿತ ಪ್ರಕರಣಗಳಿಗೂ ಚಿಕಿತ್ಸೆ ನೀಡಲು ಸಹಕಾರಿಯಾಗಿರುತ್ತದೆ.

ಸರ್ಕಾರದ 11 ವರ್ಷಗಳ ಸಾಧನೆಯನ್ನು ತೆರೆದಿಟ್ಟ ಪ್ರಧಾನಿ ನರೇಂದ್ರ ಮೋದಿ

ವಿವಿಧ ಕ್ಷೇತ್ರಗಳಲ್ಲಿ ಕ್ಷಿಪ್ರ ಪರಿವರ್ತನೆ

ನವದೆಹಲಿ (ಪಿಟಿಐ): 'ಎನ್‌ಡಿಎ ಸರ್ಕಾರದ ಹನ್ನೊಂದು ವರ್ಷಗಳ ಆಡಳಿತದಲ್ಲಿ ಭಾರತವು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಬದಲಾಗಿರುವ ಜತೆಯಲ್ಲೇ ಹವಾಮಾನ ಮತ್ತು ಡಿಜಿಟಲ್ ನಾವೀನ್ಯತೆ ಯಂತಹ ವಿಷಯಗಳಲ್ಲಿ ಪ್ರಮುಖ ಜಾಗತಿಕ ಧ್ವನಿಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಪ್ರತಿಪಾದಿಸಿದ್ದಾರೆ.

ತಮ್ಮ ಮೂರನೇ ಅವಧಿಯ ಆಡಳಿತದ ಮೊದಲ ವರ್ಷವನ್ನು ಸೋಮವಾರ ಪೂರ್ಣಗೊಳಿಸಿರುವುದಾಗಿ ಹೇಳಿದ ಮೋದಿ, ಕಳೆದ 11 ವರ್ಷಗಳಲ್ಲಿ ಸರ್ಕಾರವು ಉತ್ತಮ ಆಡಳಿತ ಮತ್ತು ಪರಿವರ್ತನೆಯ ಮೇಲೆ ಗಮನ ಹರಿಸಿತ್ತು ಎಂದರು.

140 ಕೋಟಿ ಭಾರತೀಯರ ಆಶೀರ್ವಾದ ಮತ್ತು ಸಾಮೂಹಿಕ ಪಾಲ್ಗೊಳ್ಳುವಿಕೆಯಿಂದ ದೊರೆತ ಶಕ್ತಿಯಿಂದ ಭಾರತವು ವಿವಿಧ ಕ್ಷೇತ್ರಗಳಲ್ಲಿ ಕ್ಷಿಪ್ರ ಪರಿವರ್ತನೆಗಳಿಗೆ ಸಾಕ್ಷಿಯಾಗಿದೆ ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್, ಸಬ್‌ಕಾ ಪ್ರಯಾಸ್' ತತ್ವದಿಂದ ಮುಂದಡಿಯಿಟ್ಟಿರುವ ಎನ್‌ಡಿಎ ಸರ್ಕಾರವು ಹಲವು ಕ್ಷೇತ್ರಗಳಲ್ಲಿ ಬದಲಾವಣೆಗಳನ್ನು ತಂದಿದೆ. ಆರ್ಥಿಕ ಬೆಳವಣಿಗೆಯಿಂದ ಸಾಮಾಜಿಕ ಉನ್ನತಿಯವರೆಗೆ, ಎಲ್ಲರನ್ನೂ ಒಳಗೊಂಡ ಮತ್ತು ಸರ್ವತೋಮುಖ ಪ್ರಗತಿಯತ್ತ ಗಮನ ಹರಿಸಲಾಗಿದೆ ಎಂದರು.

'ನಮ್ಮ ಸಾಮೂಹಿಕ ಯಶಸ್ಸಿನ ಬಗ್ಗೆ ಹೆಮ್ಮೆಪಡುತ್ತೇವೆ ಮತ್ತು ವಿಕಸಿತ ಭಾರತವನ್ನು ನಿರ್ಮಿಸಲು ನಾವು ಭರವಸೆ, ವಿಶ್ವಾಸ ಮತ್ತು ಹೊಸ ಸಂಕಲ್ಪದೊಂದಿಗೆ ಎದುರು ನೋಡುತ್ತೇವೆ' ಎಂದು ನುಡಿದರು.

'11 ವರ್ಷಗಳ ಸೇವೆ' ಎಂಬ ಹ್ಯಾಷ್ ಟ್ಯಾಗ್‌ನೊಂದಿಗೆ ಮೋದಿ ಅವರು ತಮ್ಮ ಸರ್ಕಾರದ ಅವಧಿಯಲ್ಲಿ ಆಗಿರುವ ಬದಲಾವಣೆಗಳು ಮತ್ತು ಅಭಿವೃದ್ಧಿ ಕೆಲಸಗಳ ಸಂಪೂರ್ಣ ಮಾಹಿತಿ ಒಳಗೊಂಡಿರುವ ಲಿಂಕ್‌ಗಳನ್ನು ಹಂಚಿಕೊಂಡಿದ್ದಾರೆ.

81 ಕೋಟಿಗೂ ಅಧಿಕ ನಾಗರಿಕರು ಉಚಿತ ಆಹಾರ ಧಾನ್ಯ ಪಡೆಯುತ್ತಿದ್ದು, 15 ಕೋಟಿಗೂ ಹೆಚ್ಚು ಕುಟುಂಬಗಳು ನಲ್ಲಿ ನೀರಿನ ಸಂಪರ್ಕವನ್ನು ಪಡೆದಿವೆ. ಬಡವರಿಗಾಗಿ ನಾಲ್ಕು ಕೋಟಿ ಮನೆಗಳು ಮತ್ತು 12 ಕೋಟಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಎಂದು ಅವರು ಸರ್ಕಾರದ ಸಾಧನೆಯ ಮೇಲೆ ಬೆಳಕು ಚೆಲ್ಲಿದ್ದಾರೆ.



ಮೋದಿ ಸರ್ಕಾರ 11 ವರ್ಷ ಪೂರೈಸಿದ ಪ್ರಯುಕ್ತ ನವದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಆಯೋಜಿಸಿರುವ ವಸ್ತು ಪ್ರದರ್ಶನವನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಪಕ್ಷದ ಮುಖಂಡರು ಸೋಮವಾರ ವೀಕ್ಷಿಸಿದರು –ಪಿಟಿಐ ಚಿತ್ರ

ಮೋದಿ ಅವರು ದೇಶದ ರಾಜಕೀಯ ಸಂಸ್ಕೃತಿಯನ್ನು ಬದಲಿಸಿದ್ದಾರೆ. ಸರ್ಕಾರದ ಕೆಲಸಗಳನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು
ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ನರೇಂದ್ರ ಮೋದಿ ಸರ್ಕಾರದ ಹನ್ನೊಂದು ವರ್ಷಗಳು ಸಂಕಲ್ಪ, ಪ್ರಯತ್ನ ಮತ್ತು ಸಾರ್ವಜನಿಕ ಸೇವೆಗೆ ಸಮರ್ಪಣೆಯ 'ಸುವರ್ಣ ಯುಗ'
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಹೊಣೆಗಾರಿಕೆ ಇಲ್ಲದ ಮೋದಿ ಸರ್ಕಾರ ವರ್ತಮಾನದ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದ್ದು, 2047ರ ಕನಸುಗಳನ್ನು ಮಾರಾಟ ಮಾಡುತ್ತಿದೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಪ್ರಜಾಪ್ರಭುತ್ವ, ಆರ್ಥಿಕತೆಗೆ ಹೊಡೆತ: ಖರ್ಗೆ

ನವದೆಹಲಿ (ಪಿಟಿಐ): ಮೋದಿ ನೇತೃತ್ವದ ಸರ್ಕಾರದ 11 ವರ್ಷಗಳು ದೇಶದ ಪ್ರಜಾಪ್ರಭುತ್ವ, ಆರ್ಥಿಕತೆ ಮತ್ತು ಸಾಮಾಜಿಕ ವ್ಯವಸ್ಥೆಗೆ ಭಾರಿ ಹೊಡೆತ ನೀಡಿವೆ ಎಂದು ಕಾಂಗ್ರೆಸ್ ಸೋಮವಾರ ಟೀಕಿಸಿದೆ.

'ಎನ್‌ಡಿಎ ಸರ್ಕಾರವು ಈ ಹನ್ನೊಂದು ವರ್ಷಗಳಲ್ಲಿ ಸಂವಿಧಾನದ ಪ್ರತಿ ಪುಟಕ್ಕೂ ಸರ್ವಾಧಿಕಾರದ ಮಸಿ ಬಳಿದಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ಆರೋಪಿಸಿದ್ದಾರೆ.

ಬಿಜೆಪಿ ಮತ್ತು ಆರ್‌ಎಸ್‌ಎಸ್ ದೇಶದ ಪ್ರತಿಯೊಂದು ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸಿವೆ. ಅವುಗಳ ಸ್ವಾಯತ್ತತೆಯ ಮೇಲೆ ದಾಳಿ ಮಾಡಿವೆ. ದ್ವೇಷ, ಬೆದರಿಕೆ ಮತ್ತು ಭಯದ ವಾತಾವರಣವನ್ನು ಹರಡಲು ನಿರಂತರವಾಗಿ ಪ್ರಯತ್ನಗಳು ನಡೆಯುತ್ತಿವೆ ಎಂದು ದೂರಿದ್ದಾರೆ.

'ದಲಿತರು, ಬುಡಕಟ್ಟು ಜನರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ದುರ್ಬಲ ವರ್ಗಗಳ ಶೋಷಣೆ ನಿರಂತರವಾಗಿ ಹೆಚ್ಚುತ್ತಿದೆ. ಮೀಸಲಾತಿ ಸೌಲಭ್ಯ ಮತ್ತು ಸಮಾನ ಹಕ್ಕುಗಳನ್ನು ಕಸಿದುಕೊಳ್ಳುವ ಷಡ್ಯಂತ್ರ ಮುಂದುವರಿದಿದೆ. ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವು ಬಿಜೆಪಿಯ ಆಡಳಿತ ವೈಫಲ್ಯಕ್ಕೆ ಅತಿದೊಡ್ಡ ಪುರಾವೆ' ಎಂದು ವಾಗ್ದಾಳಿ ನಡೆಸಿದ್ದಾರೆ,

ಕಾಂಗ್ರೆಸ್‌ನಿಂದ ರಿಪೋರ್ಟ್ ಕಾರ್ಡ್

ಮೋದಿ ಸರ್ಕಾರದ 11 ವರ್ಷಗಳ ಆಡಳಿತಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್, ಸೋಮವಾರ ಕಿರುಪುಸ್ತಕಗಳನ್ನು ಬಿಡುಗಡೆ ಮಾಡಿದೆ. ಕುಂಠಿತ ಬೆಳವಣಿಗೆ ದರ, ಹೆಚ್ಚುತ್ತಿರುವ ಹಸಿವು ಮತ್ತು ಸರ್ಕಾರದ 'ಈಡೇರಿಸಲಾಗದ ಭರವಸೆ'ಗಳನ್ನು ಅದರಲ್ಲಿ ಎತ್ತಿ ತೋರಿಸಲಾಗಿದೆ.

'11 ಸಾಲ್, ಝೂಠೆ ವಿಕಾಸ್ ಕೆ ವಾದೆ' ಮತ್ತು 'ಏಕ್ ಔರ್ ಬಾರ್ ಜುಮ್ಲಾ ಸರ್ಕಾರ್" ಹೆಸರಿನ ಎರಡು ಕಿರುಪುಸ್ತಕಗಳನ್ನು ಎಐಸಿಸಿ ಸಂಶೋಧನಾ ವಿಭಾಗದ ಮುಖ್ಯಸ್ಥ ರಾಜೀವ್ ಗೌಡ ಸೋಮವಾರ ಬಿಡುಗಡೆ ಮಾಡಿದರು.

'ಈ ಸರ್ಕಾರ ಪ್ರಚಾರ ಗಿಟ್ಟಿಸಿಕೊಳ್ಳುವುದು ಮತ್ತು ಸುಳ್ಳು ಸುದ್ದಿ ಹರಡುವುದರಲ್ಲಿ ಯಶಸ್ವಿಯಾಗಿದೆ. ಪ್ರತಿಪಕ್ಷದಲ್ಲಿದ್ದುಕೊಂಡು ಈ ಕಟು ವಾಸ್ತವವನ್ನು ಜನರಿಗೆ ತಿಳಿಸುವುದು ನಮ್ಮ ಕೆಲಸ' ಎಂದು ಅವರು ಹೇಳಿದರು. '11 ಸಾಲ್, ಝೂಠೆ ವಿಕಾಸ್ ಕೆ ವಾದೆ' ಕಿರುಪುಸ್ತಕವು 'ಈ ಸರ್ಕಾರದ ಕೆಲವು ದೊಡ್ಡ ಸುಳ್ಳುಗಳನ್ನು' ಬಯಲು ಮಾಡಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ರೈಲಿನಿಂದ ಬಿದ್ದು ನಾಲ್ವರ ಸಾವು

ಮಹಾರಾಷ್ಟ್ರದ ಠಾಣೆ ಜಿಲ್ಲೆಯಲ್ಲಿ ಸಂಭವಿಸಿದ ದುರ್ಘಟನೆ

ಪ್ರಜಾವಾಣಿ ವಾರ್ತೆ

ಠಾಣೆ (ಮಹಾರಾಷ್ಟ್ರ): ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಮುಂಬ್ರಾ ಮತ್ತು ದಿವಾ ನಿಲ್ದಾಣಗಳ ನಡುವೆ ಸಂಚರಿಸುತ್ತಿದ್ದ ಲೋಕಲ್ ರೈಲಿನಿಂದ ಬಿದ್ದು ನಾಲ್ವರು ಮೃತಪಟ್ಟಿದ್ದಾರೆ.

ಸೋಮವಾರ ಬೆಳಿಗ್ಗೆ 9ರಿಂದ 9.15ರ ಮಧ್ಯೆ ನಡೆದ ಈ ದುರ್ಘಟನೆಯಲ್ಲಿ ಒಂಬತ್ತು ಪ್ರಯಾಣಿಕರು ಗಾಯಗೊಂಡಿದ್ದಾರೆ. ಅದರಲ್ಲಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಯಾಣಿಕರಿಂದ ಕಿಕ್ಕಿರಿದು ತುಂಬಿದ್ದ ರೈಲಿನ ಫುಟ್‌ಬೋರ್ಡ್‌ನಲ್ಲಿ ನಿಂತು ಪ್ರಯಾಣಿಸುತ್ತಿದ್ದವರು ಆಯತಪ್ಪಿ ಬಿದ್ದಿದ್ದಾರೆ ಎಂದು ಮೂಲಗಳು ಹೇಳಿವೆ.

'ಮುಂಬ್ರಾ ನಿಲ್ದಾಣದ ಸಮೀಪದ ತಿರುವಿನಲ್ಲಿ ಲೇನ್ 3 ಮತ್ತು ಲೇನ್ 4ರಲ್ಲಿ ಎರಡು ರೈಲುಗಳು ವಿರುದ್ಧ ದಿಕ್ಕಿನಲ್ಲಿ ಸಂಚರಿಸುತ್ತಿದ್ದವು. ಎರಡೂ ರೈಲುಗಳಲ್ಲಿ ಹಲವರು ಬಾಗಿಲ ಬಳಿ ನೇತಾಡಿಕೊಂಡು ಪ್ರಯಾಣಿಸುತ್ತಿದ್ದರು. ಹಲವರು ಬೆನ್ನಿಗೆ ಬ್ಯಾಗ್‌ಗಳನ್ನು ಹಾಕಿಕೊಂಡಿದ್ದರು. ಈ ಬ್ಯಾಗ್‌ಗಳು ಪರಸ್ಪರರಿಗೆ ತಾಗಿದ್ದರಿಂದ ಪ್ರಯಾಣಿಕರು ಆಯತಪ್ಪಿ ಕೆಳಗೆ ಬಿದ್ದರು' ಕೇಂದ್ರ ರೈಲ್ವೆ ವಕ್ತಾರ ಸ್ವಪ್ನಿಲ್ ನೀಲಾ ತಿಳಿಸಿದ್ದಾರೆ.

'ಸಾಮಾನ್ಯವಾಗಿ ಎರಡು ಹಳಿಗಳ ನಡುವೆ ಒಂದೂವರೆ ಮೀಟರ್‌ನಿಂದ ಎರಡು ಮೀ. ಅಂತರ ಇರುತ್ತದೆ. ಆದರೆ, ಎರಡೂ ರೈಲುಗಳ ಬಾಗಿಲುಗಳ ಬಳಿ ಪ್ರಯಾಣಿಕರು ನೇತಾಡಿಕೊಂಡು ಇದ್ದ ಕಾರಣ ಅವಘಡ ಸಂಭವಿಸಿದೆ' ಎಂದಿದ್ದಾರೆ.


ರೈಲಿನಿಂದ ಬಿದ್ದು ಮೃತಪಟ್ಟ ಪ್ರಯಾಣಿಕರೊಬ್ಬರ ಕುಟುಂಬದ ಸದಸ್ಯರು ರೋದಿಸಿದರು –ಪಿಟಿಐ ಚಿತ್ರ

'ಡಿಜಿಟಲ್ ರೂಪದಲ್ಲಿ ದತ್ತಾಂಶ ನೀಡಿ'

ನವದೆಹಲಿ (ಪಿಟಿಐ): ಹರಿಯಾಣ ಮತ್ತು ಮಹಾರಾಷ್ಟ್ರದ ಮತದಾರ ಪಟ್ಟಿ ಕುರಿತ ದತ್ತಾಂಶವನ್ನು ಹಂಚಿಕೊಳ್ಳಲು ಚುನಾವಣಾ ಆಯೋಗ ನಿರ್ಧರಿಸಿದೆ ಎಂಬ ವರದಿಯನ್ನು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶ್ಲಾಘಿಸಿದ್ದಾರೆ.

ದತ್ತಾಂಶವನ್ನು ಹಂಚಿಕೊಳ್ಳುವ ನಿರ್ದಿಷ್ಟ ದಿನಾಂಕವನ್ನು ತಿಳಿಸುವಂತೆ ಆಯೋಗಕ್ಕೆ ಮನವಿ ಮಾಡಿದ್ದಾರೆ ಮತ್ತು ಮಾಹಿತಿಯನ್ನು ಡಿಜಿಟಲ್ ರೂಪದಲ್ಲಿ ಮತ್ತು ಮಷಿನ್ ಓದಬಲ್ಲ ಸ್ವರೂಪದಲ್ಲಿ ನೀಡುವಂತೆ ಕೋರಿದ್ದಾರೆ.

ಹರಿಯಾಣ ಮತ್ತು ಮಹಾರಾಷ್ಟ್ರದ 2009–2024ರ ವರೆಗಿನ ಮತದಾರರ ಪಟ್ಟಿ ಕುರಿತ ದತ್ತಾಂಶವನ್ನು ಹಂಚಿಕೊಳ್ಳಲು ಚುನಾವಣಾ ಆಯೋಗವು ನಿರ್ಧರಿಸಿದೆ ಎನ್ನಲಾದ ಮಾಧ್ಯಮ ವರದಿಯನ್ನು ರಾಹುಲ್ ಗಾಂಧಿ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ. 'ಇದೊಂದು ಉತ್ತಮ ನಡೆ' ಎಂದು ಅವರು ಶ್ಲಾಘಿಸಿದ್ದಾರೆ. ಆದರೆ, ಆಯೋಗವು ಈವರೆಗೆ ಈ ಬಗ್ಗೆ ಅಧಿಕೃತವಾಗಿ ಯಾವುದೇ ಹೇಳಿಕೆ ನೀಡಿಲ್ಲ.

ಕಳೆದ ವರ್ಷ ಮಹಾರಾಷ್ಟ್ರದಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ರಾಹುಲ್ ಗಾಂಧಿ ಅವರು ಪತ್ರಿಕೆಗಳಿಗೆ ಸುದೀರ್ಘ ಲೇಖನ ಬರೆದಿದ್ದರು. ತನಗೆ ನೇರವಾಗಿ ಪತ್ರ ಬರೆದರೆ ಮಾತ್ರ ಪ್ರತಿಕ್ರಿಯೆ ನೀಡಲಾಗುವುದು ಎಂದು ಚುನಾವಣಾ ಆಯೋಗ ಭಾನುವಾರ ತಿಳಿಸಿತ್ತು.

ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಕುರಿತ ವಿರೋಧ ಪಕ್ಷಗಳ ಪ್ರಶ್ನೆಗಳಿಗೆ ಉತ್ತರ ನೀಡುವಂತೆ ಬಿಜೆಪಿಗೆ ಗುತ್ತಿಗೆ ನೀಡಲಾಗಿದೆಯೇ?
ಸಂಜಯ್ ರಾವುತ್
ಶಿವಸೇನಾ (ಉದ್ಧವ್ ಬಣ) ನಾಯಕ

ಕಾಲ್ತುಳಿತ: ನೋಟಿಸ್ ಜಾರಿಗೆ ಸಿಐಡಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ತಂಡವು ವಿಜಯೋತ್ಸವದ ಆಯೋಜಕರಿಗೆ ನೋಟಿಸ್ ಜಾರಿ ಮಾಡಲು ಸಿದ್ಧತೆ ನಡೆಸಿದೆ.

ಆರ್‌ಸಿಬಿ ಮ್ಯಾನೇಜ್‌ಮೆಂಟ್, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಿಐಡಿ ಎಸ್‌ಪಿ ಶುಭನ್ವಿತಾ ಅವರ ನೇತೃತ್ವದ ತಂಡವು ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿದೆ. ಪ್ರಕರಣದ ಸಂಬಂಧ ಆರ್‌ಸಿಬಿ, ಕೆಎಸ್‌ಸಿಎ ಮತ್ತು ಡಿಎನ್‌ಎ ಪದಾಧಿಕಾರಿಗಳಿಗೆ ಶೀಘ್ರದಲ್ಲಿಯೇ ನೋಟಿಸ್ ನೀಡಿ ವಿಚಾರಣೆ ನಡೆಸಲು ಸಿದ್ಧತೆ ನಡೆದಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಬಂಧಿತ ಆರೋಪಿಗಳಾದ ನಿಖಿಲ್ ಸೋಸಲೆ, ಸುನೀಲ್ ಮ್ಯಾಥ್ಯೂ, ಕಿರಣ್ ಮತ್ತು ಸುಮಂತ್ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದುಕೊಳ್ಳಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಹೇಳಿಕೆ ದಾಖಲಿಸಿಕೊಳ್ಳಲು ಸಿದ್ಧತೆ: ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ನೇತೃತ್ವದಲ್ಲಿ ಮ್ಯಾಜಿಸ್ಟೀರಿಯಲ್ ತನಿಖೆಯೂ ನಡೆಯುತ್ತಿದ್ದು, ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಜೂನ್ 11, 13 ಮತ್ತು 17ರಂದು ಸಂತ್ರಸ್ತರು ಹಾಗೂ ಅವರ ಕುಟುಂಬ ಸದಸ್ಯರಿಂದ ಹೇಳಿಕೆ ದಾಖಲಿಸಿಕೊಳ್ಳಲು ದಿನಾಂಕ ನಿಗದಿ ಪಡಿಸಲಾಗಿದೆ.

ಜಗದೀಶ್ ಅವರು ಕ್ರೀಡಾಂಗಣಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕಿದ್ದರು. ಕಾಲ್ತುಳಿತ ಸಂಭವಿಸಿದ ಜಾಗಗಳನ್ನು ಪರಿಶೀಲನೆ ನಡೆಸಿದ್ದರು.

'ವಿಜಯೋತ್ಸವ ಆಯೋಜನೆ ಸಂದರ್ಭದಲ್ಲಿ ಆಂಬುಲೆನ್ಸ್ ಇರಲಿಲ್ಲ. ಪ್ರಥಮ ಚಿಕಿತ್ಸೆಗೂ ಯಾವುದೇ ವ್ಯವಸ್ಥೆ ಮಾಡಿಕೊಂಡಿರಲಿಲ್ಲ. ಅಗ್ನಿಶಾಮಕ ದಳದ ಸಿಬ್ಬಂದಿಯೂ ಸ್ಥಳದಲ್ಲಿ ಇರಲಿಲ್ಲ ಎಂದು ಗಾಯಾಳುಗಳು ಹಾಗೂ ಮೃತಪಟ್ಟವರ ಕುಟುಂಬದ ಸದಸ್ಯರು ಆರೋಪಿಸಿದ್ದಾರೆ. 11 ಮಂದಿಯ ಕುಟುಂಬದ ಸದಸ್ಯರಿಂದ ಹೇಳಿಕೆ ದಾಖಲಿಸಲು ಪ್ರತಿ ಕುಟುಂಬಕ್ಕೆ ಪ್ರತ್ಯೇಕ ಸಮಯ ನಿಗದಿ ಪಡಿಸಲಾಗಿದೆ. ಸಂಬಂಧಿಸಿದವರಿಗೆ ಮಾಹಿತಿಯನ್ನೂ ನೀಡಲಾಗಿದೆ' ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

ಪೊಲೀಸ್ ಅಧಿಕಾರಿಗಳ ಅಮಾನತು ಪ್ರಶ್ನಿಸಿ ಮುಖ್ಯಮಂತ್ರಿಗೆ ಪತ್ರ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿಜಯೋತ್ಸವದ ವೇಳೆ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೇರಿ ಐವರು ಪೊಲೀಸ್ ಅಧಿಕಾರಿಗಳ ಅಮಾನತು ಮಾಡಿರುವ ಕ್ರಮವನ್ನು ಪ್ರಶ್ನಿಸಿ, ಇಂಡಿಯನ್ ಪೊಲೀಸ್ ಫೌಂಡೇಷನ್ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಮಹಾದುರಂತಕ್ಕೆ ಸಂಬಂಧಿಸಿದಂತೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್, ಕೇಂದ್ರ ವಿಭಾಗದ ಡಿಸಿಪಿ ಶೇಖರ್, ಎಸಿಪಿ ಬಾಲಕೃಷ್ಣ, ಇನ್‌ಸ್ಪೆಕ್ಟರ್ ಗಿರೀಶ್ ಅವರನ್ನು ರಾಜ್ಯ ಸರ್ಕಾರ ಅಮಾನತು ಮಾಡಿತ್ತು. ಅಮಾನತು ಆದೇಶವನ್ನು ರದ್ದು ಪಡಿಸಬೇಕು ಎಂದು ನಿವೃತ್ತ ಅಧಿಕಾರಿಗಳು ಪತ್ರದಲ್ಲಿ ಕೋರಿದ್ದಾರೆ.

'ವಿಜಯೋತ್ಸವಕ್ಕೆ ಪೂರ್ವ ತಯಾರಿ ಮಾಡಿಕೊಳ್ಳದೇ ಸಾಮಾಜಿಕ ಮಾಧ್ಯಮಗಳಲ್ಲಿ ಉಚಿತವಾಗಿ ಟಿಕೆಟ್ ನೀಡುವುದಾಗಿ ಮಾಹಿತಿ ನೀಡಲಾಗಿತ್ತು. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಜಮಾಯಿಸಿದ್ದರು. ಆರಂಭದಲ್ಲೇ ಭದ್ರತೆಯ ಆತಂಕ ವ್ಯಕ್ತಪಡಿಸಿ ಅನುಮತಿ ನೀಡಲು ಪೊಲೀಸರು ನಿರಾಕರಿಸಿದ್ದರು. ನಿರೀಕ್ಷೆಗೂ ಮೀರಿ ಜನರು ಬಂದಿದ್ದರಿಂದ ಬಂದೋಬಸ್ತ್ ಕಲ್ಪಿಸುವುದೂ ಪೊಲೀಸರಿಗೆ ಕಷ್ಟವಾಗಿತ್ತು. ಹೀಗಾಗಿ ಪೊಲೀಸರ ಅಮಾನತು ಕ್ರಮದ ಆದೇಶವನ್ನು ವಾಪಸ್ ಪಡೆದುಕೊಳ್ಳಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ. 'ಪ್ರಕರಣದ ಸಂಬಂಧ ತನಿಖೆ ನಡೆಸಲು ಸರ್ಕಾರ ಆದೇಶ ಮಾಡಿದೆ. ಅದನ್ನು ಸ್ವಾಗತ ಮಾಡುತ್ತೇವೆ. ಆದರೆ, ತನಿಖಾ ವರದಿಗೂ ಮುನ್ನವೇ ಪೊಲೀಸ್ ಅಧಿಕಾರಿಗಳ ಮೇಲೆ ತಪ್ಪು ಹೊರಿಸಿ ಅಮಾನತು ಮಾಡಲಾಗಿದೆ. ಇದು ತಪ್ಪು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸರ್ಕಾರಿ ಕಚೇರಿಗಳಿಗೆ ಬೆಂಕಿ

ಮಣಿಪುರ ಸಂಘರ್ಷ

ಇಂಫಾಲ್ (ಪಿಟಿಐ): ಮೈತೇಯಿ ನಾಯಕರ ಬಂಧನ ಖಂಡಿಸಿ ಮಣಿಪುರದಲ್ಲಿ ಸೃಷ್ಟಿಯಾಗಿದ್ದ ಹಿಂಸಾಚಾರ ತೀವ್ರ ಸ್ವರೂಪ ಪಡೆದುಕೊಂಡಿದೆ. ಉದ್ವಿಗ್ನ ಪರಿಸ್ಥಿತಿ ಇನ್ನೂ ಮುಂದುವರೆದಿದೆ. ಪ್ರತಿಬಂಧಕಾಜ್ಞೆಗಳನ್ನೂ ಉಲ್ಲಂಘಿಸಿ ಪ್ರತಿಭಟನಕಾರರು ಅಹೋರಾತ್ರಿ ಪಂಜಿನ ಮೆರವಣಿಗೆ ನಡೆಸಿದ್ದಾರೆ. ಸರ್ಕಾರಿ ಕಚೇರಿಗಳನ್ನು ಸುಟ್ಟು ಹಾಕಿದ್ದಾರೆ. ಭದ್ರತಾ ಸಿಬ್ಬಂದಿ ಜತೆಗೂ ಘರ್ಷಣೆ ನಡೆಸಿದ್ದಾರೆ.

ಭಾನುವಾರ ರಾತ್ರಿ ಮತ್ತು ಸೋಮವಾರವೂ ಭಾರಿ ಪ್ರತಿಭಟನೆಗಳಿಗೆ ಮಣಿಪುರ ಸಾಕ್ಷಿಯಾಗಿದೆ.

ಇಂಫಾಲ್ ಪಶ್ಚಿಮ ಜಿಲ್ಲೆಯ ಕ್ವಾಕೈತೆಲ್ ಮತ್ತು ಸಿಂಗ್ಜಮೇಯಿಯಲ್ಲಿ ಪ್ರತಿಭಟನಕಾರರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಸಂಘರ್ಷ ನಡೆದಿದೆ. ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಹಲವು ಸುತ್ತು ಅಶ್ರುವಾಯು ಸಿಡಿಸಿದ್ದಾರೆ. ಪ್ರತಿಭಟನಕಾರರನ್ನು ಚದುರಿಸಲು ರಬ್ಬರ್ ಗುಂಡುಗಳನ್ನು ಹಾರಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

ಸರ್ಕಾರಿ ಕಚೇರಿಗಳಿಗೆ ಬೆಂಕಿ: 'ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಯೈರಿಪೋಕ್ ಟುಲಿಹಾಲ್ ಉಪ ವಿಭಾಗಾಧಿಕಾರಿ ಕಚೇರಿಗೆ ಬೆಂಕಿ ಹಚ್ಚಲಾಗಿದೆ. ಇದರಿಂದ ಮಹತ್ವದ ದಾಖಲೆಗಳು ಬೆಂಕಿಗೆ ಆಹುತಿಯಾಗಿವೆ. ಹಿಂಸೆ ನಿಯಂತ್ರಿಸಲು ಭದ್ರತೆ ಹೆಚ್ಚಿಸಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸೆಕ್ಮಾಯಿ ಮತ್ತು ಕೋಯಿರೆಂಗಾಯಿಯಲ್ಲಿ ಭದ್ರತಾ ಸಿಬ್ಬಂದಿ ಸಂಚರಿಸದಂತೆ ಹೋರಾಟಗಾರರು ರಸ್ತೆಗಳಿಗೆ ಮಣ್ಣಿನ ರಾಶಿ ಸುರಿದರು. ಕೆಲವೆಡೆ ರಸ್ತೆಗಳಲ್ಲಿ ಟೈರ್ ಸುಡಲಾಗಿದೆ.


ಇಂಫಾಲ್ ಸಂಪರ್ಕಿಸುವ ರಸ್ತೆಗಳನ್ನು ಪ್ರತಿಭಟನಕಾರರು ತಡೆದರು

ಪೊಲೀಸ್ ಕಾನ್‌ಸ್ಟೆಬಲ್ ಆಗಿದ್ದ ಕನನ್

ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸಿಬಿಐ ಬಂಧಿಸಿರುವ 'ಅರಂಬಾಯ್ ಟೆಂಗೋಲ್' ಸಂಘಟನೆಯ ನಾಯಕ ಕನನ್ ಸಿಂಗ್ ಮಣಿಪುರದ ಮಾಜಿ ಪೊಲೀಸ್ ಹೆಡ್ ಕಾನ್‌ಸ್ಟೆಬಲ್. ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾದ ಕಾರಣಕ್ಕೆ ಅವರನ್ನು ಮಾರ್ಚ್‌ನಲ್ಲಿ ಸೇವೆಯಿಂದ ವಜಾ ಮಾಡಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

'ಎಕ್ಸ್'ನಲ್ಲಿ ಮಾಹಿತಿ ನೀಡಿರುವ ಮಣಿಪುರ ಪೊಲೀಸರು, ' ಅಶೆಮ್ ಕನನ್ ಸಿಂಗ್ (46) ಅವರನ್ನು ಇಂಫಾಲ್‌ನಲ್ಲಿ ಸಿಬಿಐ ಬಂಧಿಸಿದೆ. 2025ರ ಮಾರ್ಚ್ 3ರಂದು ಅವರನ್ನು ಸೇವೆಯಿಂದ ವಜಾ ಮಾಡಲಾಗಿತ್ತು. ಗಡಿಯಲ್ಲಿ ಶಸ್ತ್ರಾಸ್ತ್ರ ಅಪಹರಣ ಸೇರಿ ಹಲವು ಅಪರಾಧ ಚಟುವಟಿಕೆಗಳಲ್ಲಿ ಇವರು ಭಾಗಿಯಾಗಿದ್ದರು' ಎಂದು ಹೇಳಿದ್ದಾರೆ.

'ಥಗ್ ಲೈಫ್': 'ಸುಪ್ರೀಂ'ನಲ್ಲಿ ಶುಕ್ರವಾರ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಮಲ್ ಹಾಸನ್ ನಟನೆಯ 'ಥಗ್ ಲೈಫ್' ಸಿನಿಮಾ ಪ್ರದರ್ಶನಕ್ಕೆ ಕರ್ನಾಟಕದಲ್ಲಿ ನಿಷೇಧ ಹೇರಿರುವುದನ್ನು ಪ್ರಶ್ನಿಸಿ ಸಲ್ಲಿಸಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ಶುಕ್ರವಾರ ನಡೆಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಬೆಂಗಳೂರಿನ ಎಂ. ಮಹೇಶ್ ರೆಡ್ಡಿ ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದ್ದಾರೆ. ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಮನ್ ಮೋಹನ್ ಅವರು ಈ ಅರ್ಜಿಯ ವಿಚಾರಣೆ ನಡೆಸಿದರು.

'ನೀವು ಯಾಕೆ ಕರ್ನಾಟಕ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಿಲ್ಲ' ಎಂದು ಅರ್ಜಿದಾರರಿಗೆ ಪೀಠ ಪ್ರಶ್ನಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ಅರ್ಜಿದಾರರ ಪರ ವಕೀಲ ಎ. ವೇಳನ್, 'ಇದೇ ಪ್ರಕರಣಕ್ಕೆ ಸಂಬಂಧಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಆ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯವು, ಕಮಲ್ ಅವರು ಕ್ಷಮೆ ಕೇಳಬೇಕು ಎಂದು ಆದೇಶಿಸಿತ್ತು. ಜೊತೆಗೆ, ಸಿನಿಮಾ ನಿಷೇಧದ ಪರ ಇರುವವರನ್ನು ಕರ್ನಾಟಕ ಹೈಕೋರ್ಟ್ ಓಲೈಕೆ ಮಾಡುವಂತೆಕಂಡುಬಂದಿತು' ಎಂದರು.

ಕಾಲ್ತುಳಿತ ಘಟನೆ–ಬಂಧನ ಬೇಡ: ಹೈಕೋರ್ಟ್

ಒಂದನೇ ಪುಟದಿಂದ...

ನಿಖಿಲ್ ಸೋಸಲೆ ಅರ್ಜಿಯನ್ನು ಮಂಗಳವಾರ (ಜೂನ್ 10) ಬೆಳಿಗ್ಗೆಗೆ ಮುಂದೂಡಿತು. ಇತರರ ಅರ್ಜಿಗಳನ್ನು ಇದೇ 12ಕ್ಕೆ ಮುಂದೂಡಿ ಆದೇಶಿಸಿತು.

'ತಮ್ಮ ಬಂಧನವನ್ನು ಕಾನೂನು ಬಾಹಿರ' ಎಂದು ಆರೋಪಿಸಿ, ಆರ್‌ಸಿಬಿ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ ಹಾಗೂ 'ತಮ್ಮ ವಿರುದ್ಧದ ಎಫ್‌ಐಆರ್ ರದ್ದು ಗೊಳಿಸಬೇಕು' ಎಂದು ಕೋರಿ, ಮೆಸರ್ಸ್ ಡಿಎನ್‌ಎ ಎಂಟರ್‌ಪ್ರೈಸಸ್‌ನ ವ್ಯವಸ್ಥಾಪಕ ನಿರ್ದೇಶಕ ವೆಂಕಟವರ್ಧನ ತಿಮ್ಮಯ್ಯ, ರಾಯಲ್ ಚಾಲೆಂಜರ್ಸ್ ಕಂಪನಿ ಮುಖ್ಯ ನಿರ್ವಹಣಾ ಅಧಿಕಾರಿ ರಾಜೇಶ್ ವಿ.ಮೆನನ್ ಈ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಪತ್ರ: 'ಕಾಲ್ತುಳಿತ ಘಟನೆಯನ್ನು ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು' ಎಂದು ಕೋರಿ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್, ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅವರಿಗೆ ಪತ್ರ ಬರೆದಿದ್ದಾರೆ.

ಸಿಎಟಿ ಮೆಟ್ಟಿಲೇರಿದ ವಿಕಾಸ್ ಕುಮಾರ್

ಕಾಲ್ತುಳಿತದ ಘಟನೆಗೆ ಸಂಬಂಧಿಸಿದಂತೆ ಅಮಾನತುಗೊಂಡಿರುವ, ಬೆಂಗಳೂರು ಪೂರ್ವ ವಿಭಾಗದ ಹೆಚ್ಚುವರಿ ಆಯುಕ್ತ ವಿಕಾಸ್ ಕುಮಾರ್ ವಿಕಾಸ್ ತಮ್ಮ ಅಮಾನತು ಆದೇಶವನ್ನು ಪ್ರಶ್ನಿಸಿ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಮೊರೆ ಹೋಗಿದ್ದಾರೆ. ಈ ಕುರಿತಂತೆ ಅವರು ಸೋಮವಾರ ಸಿಎಟಿಯಲ್ಲಿ ಅರ್ಜಿ ಸಲ್ಲಿಸಿದ್ದು, ಇದು ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

ಆರ್‌ಸಿಬಿ ವಿರುದ್ಧ ಇ.ಡಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ವಿಜಯೋತ್ಸವದ ವೇಳೆ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಅತೀ ಹಿಂದುಳಿದ ಮಠಾಧೀಶರ ಮಹಾಸಭಾವು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ದೂರು ಸಲ್ಲಿಸಿದೆ. ಮಹಾ ದುರಂತದಿಂದ 11 ಮಂದಿ ಮೃತಪಟ್ಟು, 64 ಮಂದಿ ಗಾಯಗೊಂಡಿದ್ದರು.

ಮಹಾಸಭಾದ ಸಂಸ್ಥಾಪಕ ರಾಜ್ಯ ಘಟಕದ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ನೇತೃತ್ವದ ನಿಯೋಗವು ಇ.ಡಿ ನಿರ್ದೇಶಕರಿಗೆ ದೂರು ಸಲ್ಲಿಸಿತು.

'ಮಹಾದುರಂತಕ್ಕೆ ಆರ್‌ಸಿಬಿ ಮ್ಯಾನೇಜ್‌ಮೆಂಟ್ ಕಾರಣವಾಗಿದ್ದು, ಸಂಬಂಧಿಸಿದವರ ವಿರುದ್ಧ ಕ್ರಮ ಆಗಬೇಕು' ಎಂದು ಸ್ವಾಮೀಜಿ ಆಗ್ರಹಿಸಿದರು.

'ಕ್ರಿಕೆಟ್ ಅನ್ನು ಆರ್‌ಸಿಬಿ ವಾಣಿಜ್ಯೋದ್ಯಮಕ್ಕಾಗಿ ಬಳಸಿಕೊಂಡಿದೆ. ಆರ್‌ಸಿಬಿ ಹಣಕಾಸು ವ್ಯವಹಾರದ ಬಗ್ಗೆ ತನಿಖೆ ನಡೆಸಬೇಕು. ಕಾರ್ಯಕ್ರಮಕ್ಕೆಂದು ಹಣ ಸಂಗ್ರಹಿಸಿ ಬೇರೆ ಕಡೆ ಬಳಸಿದ್ದಾರೆ. ಅದರ ಬಗ್ಗೆಯೂ ವಿಚಾರಣೆ ನಡೆಸಬೇಕು. ಕೆಎಸ್‌ಸಿಎ ವಿರುದ್ಧವೂ ತನಿಖೆ ನಡೆಸಬೇಕು' ಎಂದು ಸ್ವಾಮೀಜಿ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸಿಎಂ, ಡಿಸಿಎಂ ವಿರುದ್ಧವೂ ದೂರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ ಮತ್ತು ಆರ್‌ಸಿಬಿ ಆಡಳಿತ ಮಂಡಳಿ ವಿರುದ್ಧವೂ ಕ್ರಮಕ್ಕೆ ಆಗ್ರಹಿಸಿ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೂ ದೂರು ಸಲ್ಲಿಸಲಾಗಿದೆ.

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಬಸವನಾಗಿದೇವ ಸ್ವಾಮೀಜಿ, ಬಸವಮೂರ್ತಿ ಸ್ವಾಮೀಜಿ ಹಾಜರಿದ್ದರು.

ಸಿ.ಎಂ.ಗೆ ರಾಹುಲ್ ಬುಲಾವ್

ಒಂದನೇ ಪುಟದಿಂದ...

'ಆರ್‌ಸಿಬಿ ಆಟಗಾರರು ಬೆಂಗಳೂರಿಗೆ ಬರುವ ವಿಚಾರ ಜೂನ್ 4ರಂದು ಬೆಳಿಗ್ಗೆ 9 ಗಂಟೆಗೆ ಗೊತ್ತಾಗಿದೆ. ಬಂದೋಬಸ್ತ್ ಮಾಡಲು ಸಮಯಾವಕಾಶ ಸಿಗಲಿಲ್ಲ. ಅಲ್ಲದೆ, ದೊಡ್ಡ ಸಂಖ್ಯೆಯಲ್ಲಿ ಜನ ಸೇರುವ ಕಲ್ಪನೆಯೂ ಇರಲಿಲ್ಲ. ಆದರೂ ಜನಸಾಗರವನ್ನು ನಿಯಂತ್ರಿಸಲು ಪೊಲೀಸರು ಸಾಕಷ್ಟು ಪ್ರಯತ್ನ ನಡೆಸಿದ್ದಾರೆ. ವ್ಯವಸ್ಥೆಯ ವೈಫಲ್ಯ ಆಗಿದೆ. ಇನ್ನು ಮುಂದೆ ಈ ರೀತಿಯ ಲೋಪ ಆಗದಂತೆ ಎಲ್ಲ ರೀತಿಯ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಲಿದೆ' ಎಂದೂ ವಸ್ತುಸ್ಥಿತಿ ವರದಿಯಲ್ಲಿ ಉಲ್ಲೇಖಿಸಲು ತೀರ್ಮಾನಿಸಲಾಗಿದೆ.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಜಿ. ಸತ್ಯವತಿ ಅವರನ್ನು ರಜೆಯ ಮೇಲೆ ಕಳುಹಿಸುವ ವಿಷಯವನ್ನು ಮುಖ್ಯಮಂತ್ರಿಯ ವಿವೇಚನೆಗೆ ಬಿಡಲು ನಿರ್ಧರಿಸಲಾಗಿದೆ ಎಂದೂ ಮೂಲಗಳು ತಿಳಿಸಿವೆ.

ಆರ್‌ಸಿಬಿ ತಂಡದ ವಿಜಯೋತ್ಸವಕ್ಕೆ ಲಕ್ಷಾಂತರ ಜನ ಸೇರುವುದನ್ನು ಮೊದಲೇ ಗ್ರಹಿಸಿ, ಬಂದೋಬಸ್ತ್ ಸೇರಿದಂತೆ ಅಗತ್ಯ ವ್ಯವಸ್ಥೆಗಳನ್ನು ಮಾಡುವಲ್ಲಿ ರಾಜ್ಯ ಸರ್ಕಾರದಿಂದ ಆಗಿರುವ ವೈಫಲ್ಯವೇ ಕಾಲ್ತುಳಿತಕ್ಕೆ ಕಾರಣ. ಈ ಅನಾಹುತಕ್ಕೆ ಸರ್ಕಾರವೇ ನೇರ ಹೊಣೆ ಎಂಬ ಅಪವಾದ– ಆರೋಪ ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತೀವ್ರ ಮುಜುಗರ ಉಂಟು ಮಾಡಿದೆ. ಈ ಎಲ್ಲ ವಿಚಾರಗಳಿಗೆ ಸಂಬಂಧಿಸಿದಂತೆ ಮಾಹಿತಿ ಪಡೆಯಲು ದೆಹಲಿಗೆ ಬರುವಂತೆ ಮುಖ್ಯಮಂತ್ರಿಯವರನ್ನು ವರಿಷ್ಠರು ಕರೆದಿದ್ದಾರೆ ಎಂದು ಮೂಲಗಳು ಹೇಳಿವೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರು ಸಿದ್ದರಾಮಯ್ಯ ಅವರಿಗೆ ಸೋಮವಾರ ಕರೆ ಮಾಡಿ ದೆಹಲಿಗೆ ಬರುವಂತೆ ಆಹ್ವಾನಿಸಿದ್ದಾರೆ. ಆದರೆ, ಯಾವ ವಿಚಾರದ ಬಗ್ಗೆ ಚರ್ಚಿಸಲು ವರಿಷ್ಠರು ಬಯಸಿದ್ದಾರೆ ಎಂಬ ವಿಚಾರವನ್ನು ತಿಳಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಪರಿಷತ್‌ಗೆ ನಾಮ ನಿರ್ದೇಶನ ಚರ್ಚೆ?: ವಿಧಾನ ಪರಿಷತ್‌ನಲ್ಲಿ ಖಾಲಿ ಇರುವ ನಾಲ್ಕು ಸ್ಥಾನಗಳಿಗೆ ಅಂತಿಮಗೊಂಡಿದ್ದ ಪಟ್ಟಿಗೆ ರಾಜ್ಯ ಕಾಂಗ್ರೆಸ್‌ನ ಕೆಲವು ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ವರಿಷ್ಠರು ತಡೆ ಹಿಡಿದಿದ್ದಾರೆ. ಈ ಬಗ್ಗೆಯೂ ಮುಖ್ಯಮಂತ್ರಿ ಜೊತೆ ವರಿಷ್ಠರು ಚರ್ಚೆ ನಡೆಸುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

ವಿಧಾನಸೌಧದ ಮೆಟ್ಟಿಲುಗಳಿಗಷ್ಟೇ ಮುಖ್ಯಮಂತ್ರಿಯೇ: ಎಚ್‌ಡಿಕೆ

ಬೆಂಗಳೂರು: ಸಿದ್ದರಾಮಯ್ಯ ಅವರು ವಿಧಾನಸೌಧದ ಮೆಟ್ಟಿಲುಗಳಿಗಷ್ಟೇ ಮುಖ್ಯಮಂತ್ರಿಯೇ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ವಿಧಾನಸೌಧ ಮೆಟ್ಟಿಲುಗಳ ಮೇಲೆ ಸರ್ಕಾರ ವಿಜಯೋತ್ಸವ ಆಚರಿಸಿತು. ಕಾಲ್ತುಳಿತ ಆಗಿರುವುದು ವಿಧಾನಸೌಧದ ಮುಂದೆ ಅಲ್ಲ, ಅಲ್ಲಿ ಯಾರೂ ಸತ್ತಿಲ್ಲ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿಯಷ್ಟೇ ಕಾಲ್ತುಳಿತ ಸಂಭವಿಸಿ ಜನ ಸತ್ತಿದ್ದಾರೆ' ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಅವರು ಕರ್ನಾಟಕದ ಮುಖ್ಯಮಂತ್ರಿ ಅಲ್ಲವೇ? ದುರಂತದ ಹೊಣೆಯನ್ನು ಪೊಲೀಸರ ಮೇಲೆ ಹಾಕಿ ಕೈತೊಳೆದುಕೊಳ್ಳುವುದು ಎಷ್ಟು ಸರಿ ಎಂದಿದ್ದಾರೆ.

ಘಟನೆಗೆ ಹೊಣೆ ಹೊತ್ತುಕೊಳ್ಳುವ ಬದಲು ಪ್ರತಿಪಕ್ಷಗಳನ್ನು ದೂರಿ ಪಾರಾಗುವ ಹುನ್ನಾರ ಮಾಡುತ್ತಿದ್ದಾರೆ. ಅವರನ್ನು 'ಮೆಟ್ಟಿಲು ಮುಖ್ಯಮಂತ್ರಿ' ಎಂದೇ ಕರೆಯಬೇಕಿದೆ ಎಂದು ಟೀಕಿಸಿದ್ದಾರೆ.

ದಯಾನಂದ್‌ಗೆ ಬಿಜೆಪಿ ಏಕೆ ಹುದ್ದೆ ನೀಡಲಿಲ್ಲ: ಕಾಂಗ್ರೆಸ್

ಬೆಂಗಳೂರು: 'ಐಪಿಎಸ್ ಅಧಿಕಾರಿ ಬಿ. ದಯಾನಂದ್ ಅವರು ಎಲ್ಲ ಅರ್ಹತೆ ಹೊಂದಿದ್ದರೂ ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಅವರಿಗೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಹುದ್ದೆ ಏಕೆ ನೀಡಲಿಲ್ಲ' ಎಂದು ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಸಾಮಾಜಿಕ ಜಾಲತಾಣದಲ್ಲಿ ಬೆಂಗಳೂರು ಪೊಲೀಸ್ ಆಯುಕ್ತರಾಗಿದ್ದ ದಯಾನಂದ್ ಅವರ ಸಮುದಾಯವನ್ನುಉಲ್ಲೇಖಿಸಿ ಕೆಲವರು ಅವರ ಪರವಾಗಿ ಮಾತನಾಡುತ್ತಿದ್ದಾರೆ. ಕಾಂಗ್ರೆಸ್ ನೇತೃತ್ವದ ಸರ್ಕಾರ ಅವರನ್ನು ಆಯುಕ್ತರನ್ನಾಗಿ ನೇಮಿಸುವಾಗ ಅವರ ಸಮುದಾಯದ ಯಾರೂ ಅಧಿಕಾರ ನೀಡಿ ಎಂದು ಮನವಿ ಮಾಡಿರಲಿಲ್ಲ. ಎಲ್ಲಾ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಸಿದ್ದರಾಮಯ್ಯ ಅವರೇ ಈ ನಿರ್ಧಾರ ಮಾಡಿದ್ದರು. ಎರಡು ಸಲ ಅವರನ್ನು ಅದೇ ಹುದ್ದೆಯಲ್ಲಿ ಮುಂದುವರಿಸಿದ್ದಾರೆ. ಈಗ ಬರುತ್ತಿರುವ ಅಭಿಪ್ರಾಯಗಳು ಬಿಜೆಪಿ ಪ್ರಣೀತ ಅಭಿಪ್ರಾಯಗಳು ಎಂದು ಟೀಕಿಸಿದರು.

11 ಜನರು ತಮ್ಮ ಪ್ರಾಣವನ್ನು ಕಳೆದುಕೊಂಡ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ಮುಟ್ಟಿಸುವಲ್ಲಿ ದಯಾನಂದ್ ವಿಫಲರಾಗಿದ್ದಾರೆ. ಅಂದು ಬೆಳಿಗ್ಗೆ ಅವರ ಜತೆ ಮಾತುಕತೆ ನಡೆಸಿದಾಗಲೂ ಪೂರ್ವ ಸಿದ್ಧತೆಯ ಬಗ್ಗೆ ಸರಿಯಾದ ಮಾಹಿತಿ ನೀಡಿರಲಿಲ್ಲ. ಭವಿಷ್ಯದಲ್ಲಿ ಇಂತಹ ಘಟನೆಗಳು ನಡೆಯದಂತೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ತೀರ್ಮಾನ ಮಾಡಿದ್ದಾರೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಕ್ಷೇಮ ಕುಶಲ



ಆಟಿಸಂ ಸಮಸ್ಯೆಯಿರುವ ಮಕ್ಕಳ ಜೊತೆಗೆ ಒಡನಾಡಲು ಮತ್ತು ಅವರ ಭಾವನೆಗಳಿಗೆ ಸ್ಪಂದಿಸಲು ಹೆತ್ತವರಿಗೆ ಸೂಕ್ತ ತರಬೇತಿಯ ಅಗತ್ಯವಿದೆ. ಭಾಷೆಯನ್ನು ಕಲಿಯುವುದರಲ್ಲಿ ಹಿಂದಿರುವ ಮಕ್ಕಳಿಗೆ ಭಾಷಾ ತರಬೇತಿ ತಜ್ಞರ ಸಹಾಯವೂ ಅಗತ್ಯ. ಇಂಥ ಮಕ್ಕಳ ಜೊತೆಗೆ ಒಡನಾಡಲು ಮನಃಶಾಸ್ತ್ರಜ್ಞರಿಂದ ಹೆತ್ತವರು ಸೂಕ್ತ ತರಬೇತಿಯನ್ನು ಪಡೆದುಕೊಳ್ಳಬೇಕು.

ಆಟಿಸಂಗೆ ಬೇಕು ಭರವಸೆಯ ಬೆಳಕು

ಭಾಗ 2

ಡಾ. ಕುಶ್ವಂತ್ ಕೋಳಿಬೈಲು

ಆಟಿಸಂ ಸಮಸ್ಯೆಯನ್ನು ಪತ್ತೆಹಚ್ಚುವುದಕ್ಕಿಂತ ಹೆಚ್ಚಿನ ಸವಾಲಿನ ಕೆಲಸವು ಆಟಿಸಂ ಸಮಸ್ಯೆಗೆ ಚಿಕಿತ್ಸೆ ನೀಡುವುದಾಗಿದೆ. ಆಟಿಸಂ ಸಮಸ್ಯೆಯನ್ನು ಶೀಘ್ರವಾಗಿ ಪತ್ತೆಹಚ್ಚಿ ಶಿಸ್ತುಬದ್ಧವಾಗಿ ಚಿಕಿತ್ಸೆ ನೀಡಿದರೆ ಅಂಥ ಮಕ್ಕಳಲ್ಲಿ ಉತ್ತಮ ಪ್ರಗತಿ ಸಾಧ್ಯವಿದೆ. ಅವರು ಮುಂದೆ ಸಮಾಜಕ್ಕೆ ಹೊಂದಿಕೊಂಡು ಬದುಕುವಂಥ ವಾತಾವರಣವನ್ನು ಸೃಷ್ಟಿಸಬಹುದಾಗಿದೆ. ಹೆತ್ತವರಲ್ಲಿ ವಿವಿಧ ಸವಾಲುಗಳನ್ನು ಕೇಳಿ ಮತ್ತು ಬೆಳೆಯುವ ಮಕ್ಕಳನ್ನು ಗಮನಿಸಿ ಅವರ ಪ್ರತಿಕ್ರಿಯೆಗೆ ಅಂಕಗಳನ್ನು ನೀಡುವ ಮೂಲಕ ಆಟಿಸಂ ಪತ್ತೆ ಹಚ್ಚುವ ವಿವಿಧ 'ಪ್ರಶ್ನೆಗಳ ಸರಮಾಲೆ'ಗಳು (Questionnaire) ಜನಪ್ರಿಯವಾಗಿದೆ. ಆಟಿಸಂ ಕೋಷನ್ಟ್ ಟೆಸ್ಟ್, ಸೋಶಿಯಲ್ ರೆಸ್ಪಾನ್ಸಿವ್ ಸ್ಕೇಲ್, M-CHAT ಮುಂತಾದವನ್ನು ಬಳಸಿ ಆಟಿಸಂ ಕಾಯಿಲೆಯನ್ನು ಚಿಕ್ಕವಯಸ್ಸಿನಲ್ಲಿ ಪತ್ತೆಹಚ್ಚಬಹುದಾಗಿದೆ.

ತಮ್ಮ ಮಕ್ಕಳಲ್ಲಿ ಆಟಿಸಂ ಅಥವಾ ಕಲಿಕೆಯ ಸಮಸ್ಯೆಗಳು ಇವೆ ಎಂಬ ವಿಚಾರವನ್ನು ಒಪ್ಪಿಕೊಳ್ಳಲು ಗ್ರಾಮೀಣ ಭಾಗದಲ್ಲಿ ಹೆತ್ತವರು ಹಿಂದೇಟು ಹಾಕುತ್ತಾರೆ. ತಮ್ಮ ಕುಟುಂಬದಲ್ಲಿ ಎಲ್ಲರೂ ಮಾತನಾಡುವುದು ಕಡಿಮೆ ಅಥವಾ ತಡವಾಗಿ ಮಾತನಾಡಲು ಕಲಿತರೆಂಬ ಸಬೂಬು ನೀಡುವುದು ಸಹಜ. ಅವರು ಈ ಸಮಸ್ಯೆಗಳಿಗೆ ನಾಟಿ ಔಷಧ ಮತ್ತು ಪವಾಡಗಳ ಮೊರೆ ಹೋಗುತ್ತಾರೆ. ಈ ಕಾರಣದಿಂದಾಗಿ ಅಮೂಲ್ಯವಾದ ಸಮಯವು ವ್ಯರ್ಥವಾಗುವುದರ ಜೊತೆಗೆ ಚಿಕಿತ್ಸೆಯೂ ವಿಳಂಬವಾಗುತ್ತದೆ. ನಗರಗಳ ಸುಶಿಕ್ಷಿತ ಪೋಷಕರು ಚೆನ್ನಾಗಿರುವ ಮಕ್ಕಳಲ್ಲಿಯೂ ಸಮಸ್ಯೆಗಳನ್ನು ಹುಡುಕುತ್ತಾರೆ. ಬೆಳೆಯುವ ಮಕ್ಕಳಲ್ಲಿ ಭಾಷೆಯ ಜೊತೆಗೆ ಸಂವಾದ ಮತ್ತು ಸಂವಹನ ಕಲೆಗಳು ಒಂದೇ ರೀತಿಯದ್ದಾಗಿರುವುದಿಲ್ಲ; ಒಂದೆರಡು ತಿಂಗಳ ಅಂತರವಿರುವುದು ಸಹಜ. ಹೆಣ್ಣುಮಕ್ಕಳು ಸಂವಾದ ಮತ್ತು ಸಂವಹನ ಕಲೆಯಲ್ಲಿ ತುಸು ಮುಂದಿರುವುದು ಸಹಜ. ತಮ್ಮ ಮಕ್ಕಳ ಬೆಳವಣಿಗೆಯನ್ನು ಅದೇ ವಯಸ್ಸಿನ ಬೇರೆ ಮಕ್ಕಳ ಜೊತೆಗೆ ಹೊಂದಿಸಿ ನೋಡಿ ವೈದ್ಯರ ಬಳಿಗೆ ಓಡೋಡಿ ಬರುವ ಪೋಷಕರ ಸಂಖ್ಯೆ ನಗರಗಳಲ್ಲಿ ಹೆಚ್ಚಾಗಿದೆ. ಎರಡೂ ವಿಧದ ಪೋಷಕರಿಗೆ ಸರಿಯಾದ ಮಾರ್ಗದರ್ಶನದ ಅಗತ್ಯವಿದೆ. ಏಕೆಂದರೆ ಸಮಸ್ಯೆಯಿರುವ ಮಕ್ಕಳನ್ನು ಪತ್ತೆಹಚ್ಚುವುದರ ಜೊತೆಗೆ ಸರಿಯಾದ ರೀತಿಯಲ್ಲಿ ಬೆಳೆಯುತ್ತಿರುವ ಮಕ್ಕಳ ಪೋಷಕರ ಆತಂಕವನ್ನು ಕಡಿಮೆ ಮಾಡುವುದು ಕೂಡ ವೈದ್ಯರ ಕರ್ತವ್ಯವಾಗಿದೆ.

ಪ್ರಾಡರ್ ವಿಲ್ಲಿ, ಡೌನ್, ಏಂಜಲ್‌ಮ್ಯಾನ್ ಸಿಂಡ್ರೋಮ್ ಮುಂತಾದ ಆನುವಂಶೀಯ ಕಾಯಿಲೆಗಳಲ್ಲಿಯೂ ಆಟಿಸಂ ಕಂಡುಬರುತ್ತದೆ. ಆ ಕಾಯಿಲೆಗಳಲ್ಲಿ ಆಟಿಸಂ ಹೊರತಾಗಿ ಮಕ್ಕಳಿಗೆ ಬೇರೆ ಅಂಗಾಂಗಗಳ ಸಮಸ್ಯೆಗಳಿರುವುದರಿಂದ, ಆಟಿಸಂಗೆ ಒಳಗಾಗಿರುವ ಮಗುವಿಗೆ ಬೇರೆ ಯಾವುದಾದರು ಗಂಭೀರ ಸಿಂಡ್ರೋಮ್ ಇರುವ ಬಗ್ಗೆ ಗಮನಹರಿಸಬೇಕಾಗುತ್ತದೆ. ಆಟಿಸಂ ಬರಲು ಶೇಕಡ ಐವತ್ತರಷ್ಟು ಆನುವಂಶಿಕ ಕಾರಣಗಳೇ ಆಗಿರುವುದರಿಂದ ಈ ಮಾಹಿತಿಯನ್ನು ಹೆತ್ತವರ ಬಳಿ ಹಂಚಿಕೊಳ್ಳಬೇಕಾಗುತ್ತದೆ. ಏಕೆಂದರೆ ನಂತರ ಹುಟ್ಟಬಹುದಾದ ಮಕ್ಕಳಲ್ಲಿ ಆಟಿಸಂ ಬರುವ ಸಾಧ್ಯತೆ ಶೇಕಡ ಇಪ್ಪತ್ತರಷ್ಟಿರುತ್ತದೆ. ಮುಂದಿನ ಬಾರಿ ಗರ್ಭ ಧರಿಸುವ ಮೊದಲು ತಾಯಿಗೆ ಸೂಕ್ತ ಮಾರ್ಗದರ್ಶನದ ಅಗತ್ಯವೂ ಇರುತ್ತದೆ.

ಆಟಿಸಂ ಸಮಸ್ಯೆಯಿರುವ ಮಕ್ಕಳ ಜೊತೆಗೆ ಒಡನಾಡಲು ಮತ್ತು ಅವರ ಭಾವನೆಗಳಿಗೆ ಸ್ಪಂದಿಸಲು ಹೆತ್ತವರಿಗೆ ಸೂಕ್ತ ತರಬೇತಿಯ ಅಗತ್ಯವಿರುತ್ತದೆ. ಭಾಷೆಯನ್ನು ಕಲಿಯುವುದರಲ್ಲಿ ಹಿಂದಿರುವ ಮಕ್ಕಳಿಗೆ ಭಾಷಾ ತರಬೇತಿ ತಜ್ಞರ ಸಹಾಯದ ಅಗತ್ಯವಿರುತ್ತದೆ. ಹೆತ್ತವರು ಇಂಥ ಮಕ್ಕಳ ಜೊತೆಗೆ ತಾಳ್ಮೆಯಿಂದ ಒಡನಾಡಲು ಮನಃಶಾಸ್ತ್ರಜ್ಞರು ಹೆತ್ತವರಿಗೆ ಸೂಕ್ತ ತರಬೇತಿಯನ್ನು ನೀಡಬೇಕಾಗುತ್ತದೆ. ಇಂಥ ಮಕ್ಕಳು ತಮ್ಮ ದಿನನಿತ್ಯದ ಪ್ರಕ್ರಿಯೆಗಳನ್ನು ಇನ್ನೊಬ್ಬರ ಮೇಲೆ ಅವಲಂಬಿತವಾಗದೆ ಮಾಡಿಕೊಳ್ಳಲು ಸೂಕ್ತ ತರಬೇತಿಯನ್ನು ನೀಡಬೇಕಾಗುತ್ತದೆ. ಇಂಥ ಮಕ್ಕಳ ಕಲಿಕಾ ಸಾಮರ್ಥ್ಯ ಮತ್ತು ಸುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವು ಕಡಿಮೆಯಿರುವುದರಿಂದ ಸಾಮಾನ್ಯ ಶಾಲೆಗಳಲ್ಲಿ ಇವರಿಗೆ ಶಿಕ್ಷಣ ನೀಡಲು ಸಾಧ್ಯವಾಗುವುದಿಲ್ಲ.

ವಿಶೇಷ ಮಕ್ಕಳಿಗೆ ಶಿಕ್ಷಣ ನೀಡುವ ಶಾಲೆಗಳು ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಇರದು. ಈ ಕಾರಣ ಭಾರತದಲ್ಲಿರುವ ಸುಮಾರು ಇಪ್ಪತ್ತು ಲಕ್ಷ ಆಟಿಸಂ ಪೀಡಿತ ಮಕ್ಕಳು ಸರಿಯಾದ ತರಬೇತಿ ಸಿಗದೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ ಎನ್ನಬಹುದು. ಹೆಚ್ಚಿನ ಆಟಿಸಂ ಮಕ್ಕಳು ಸಾಮಾನ್ಯ ಶಾಲೆಗಳಿಗೆ ಸೇರಿದ ನಂತರ ಕಲಿಕೆಯಲ್ಲಿ ಹಿಂದುಳಿಯುವ ಕಾರಣದಿಂದ ಅಥವಾ ಶಾಲೆಗೆ ಹೊಂದಿಕೊಳ್ಳಲಾಗದ ಕಾರಣದಿಂದ ಶಿಕ್ಷಣವನ್ನು ಕೈಬಿಡುತ್ತಾರೆ. ಮೆಟ್ರೊ ನಗರಗಳಲ್ಲಿ ಮತ್ತು ವಿದೇಶಗಳಲ್ಲಿ ಆಟಿಸಂ ಮಕ್ಕಳಿಗೆ ಸೂಕ್ತ ತರಬೇತಿ ನೀಡುವ ಕೇಂದ್ರಗಳಿವೆ. ಆಟಿಸಂ ಮಕ್ಕಳಿಗೆ ಔದ್ಯೋಗಿಕ ತರಬೇತಿಯನ್ನು ಸೂಕ್ತವಾಗಿ ನೀಡಿದರೆ ಅವರು ದೊಡ್ಡವರಾದ ನಂತರ ಸ್ವಾವಲಂಬಿಯಾಗಿ ಬದುಕನ್ನು ಕಟ್ಟಿಕೊಳ್ಳಬಹುದಾಗಿದೆ. ಆಟಿಸಂ ಸಮಸ್ಯೆಯಿರುವ ಮಕ್ಕಳಿಗೆ ಚಿಕಿತ್ಸೆ ಹಾಗೂ ತರಬೇತಿ ನೀಡುವ ಸೂಕ್ತ ತಂಡ ಮತ್ತು ವಾತಾವರಣ ಸಿಗಬೇಕು. ಆಗ ಈ ಮಕ್ಕಳ ಬಾಳು ಹಸನಾಗುವುದರಲ್ಲಿ ಸಂಶಯವಿಲ್ಲ. ಭಾರತದಲ್ಲಿ ಆಟಿಸಂ ಮಕ್ಕಳ ಒಳಿತಿಗಾಗಿ ಮಾಡಬೇಕಾದ ಕೆಲಸಗಳು ಬಹಳಷ್ಟಿವೆ.

❖

ಬಾಯಿರುಚಿ ಕೆಟ್ಟಾಗ ಆರೋಗ್ಯವೂ ಕೆಡುವುದು



ಡಾ. ಗೀತಾ ಸತ್ಯ

ಒಂದು ಮದುವೆಯ ಸಮಾರಂಭ. ಬೆಳಗಿನ ಉಪಾಹಾರ ಸಮಯ. ಉಪಾಹಾರಕ್ಕೆ ಹುಳಿ ಗೊಜ್ಜವಲಕ್ಕಿ ಸಿದ್ಧವಾಗಿತ್ತು. ಬಹಳ ರುಚಿ ಇತ್ತು. ಒಂಬತ್ತರ ಹರೆಯದ ಬಾಲಕ ಪಕ್ಕದಲ್ಲಿ ಕುಳಿತಿದ್ದ. ಅವರಮ್ಮ ಪಕ್ಕದಲ್ಲಿದ್ದರು. ಹುಡುಗ ಮೊದಲ ತುತ್ತು ಬಾಯಿಗಿಡುತ್ತಲೇ ಖಾರ, ಖಾರ ಎಂದು ಒದರಿದ. ಅಮ್ಮನಿಗೆ ಗದರಿದ. ಆಹಾರದ ಸರಿಯಾದ ಸವಿಯರಿಯದ ಸಂಗತಿ ಕೂಡ ರುಚಿಗೆಡುವುದರ ರೂಪಾಂತರ ತಾನೇ? ಹಾಗೂ ಹೀಗೂ ಸುಮಾರು ಇಪ್ಪತ್ತು ನಿಮಿಷದಲ್ಲಿ ಅರೆ ತಟ್ಟೆ ಗೊಜ್ಜವಲಕ್ಕಿ ಬಾಲಕನ ಉದರ ಸೇರಲು ಅಮ್ಮನ ಹರಸಾಹಸ ಕಾರಣ. ಒಂದು ತಾಸು ಕಳೆಯುತ್ತಲೆ ದೂರವಾಣಿ ಕರೆಯೊಂದರಲ್ಲಿ ಒಬ್ಬ ಮಾತೆಯ ದೂರು ಸಲ್ಲಿಕೆ. ಮಗಳಿಗೆ ಹತ್ತರ ಹರೆಯ. ಏನು ಕೊಟ್ಟರೂ ಮಗಳು ಖಾರ ಖಾರ ಎನ್ನುತ್ತಾಳೆ!? ಯಾಕೆ ಹೀಗೆ ಡಾಕ್ಟ್ರೆ?

ಅನ್ನವೇ ಬ್ರಹ್ಮ – ಎನ್ನುತ್ತದೆ, ಚರಕಸಂಹಿತೆ. ಸೃಷ್ಟಿ, ಸ್ಥಿತಿಗೆ ಅನ್ನವೇ ಪರಮ ಮತ್ತು ಚರಮ ವಸ್ತು. ಅದುವೇ ವಿಷ ಮತ್ತು ವಿಷಮ ರೂಪದ್ದಾಯಿತೆ? ಲಯವೂ ಅದರಿಂದಲೇ. ಅಗ್ಗದ ಕುರುಕು ತಿಂಡಿಯ ಬಣ್ಣ ಬಣ್ಣದ ಪ್ಯಾಕೆಟ್ ತೋರಣ ಕಂಡಿದ್ದೀರಿ. ಹಸುಗೂಸಿನ ಎಳೆಯ ನಾಲಿಗೆಗೆ ಇಂತಹ ಕುರುಕು ರುಚಿ ಹತ್ತಿದರೆ ಮತ್ತೆ ಬಿಡಿಸಲಾಗದ ಬಂಧ. 'ಜುವೆನೈಲ್ ಡಯಾಬಿಟಿಸ್' ಎಂದರೆ ಬಾಲ್ಯದ ಮಧುಮೇಹದ ಹೆದ್ದಾರಿಗೆ ಕ್ರಮೇಣ ಮಕ್ಕಳು ಸಾಗುವ ದೊಡ್ಡ ದುರಂತದ ಮೂಲ ನಾಲಗೆಯ ಚಪಲ.

ನಾಲಗೆಯ ರುಚಿ ಗ್ರಂಥಿಗಳು 'ಬೋಧಕ ಕಫ' ಎಂಬ ಸ್ರಾವಾಧೀನ. ಮಧುರ, ಅಮ್ಲ, ಲವಣ, ಖಾರ, ಕಹಿ ಮತ್ತು ಒಗರು ಎಂಬ ಷಡ್ರಸಗಳು ನಮ್ಮ ನಾಲಗೆಗೆ ಪರಿಚಿತ. ತುದಿ, ನಡು, ಮುಂಬದಿ ಮತ್ತು ಹಿಂಬದಿ ಅಕ್ಕಪಕ್ಕ – ಹೀಗೆ ಆರುವಲಯಗಳಲ್ಲಿ ನಾಲಗೆಯ ವಿಭಾಗ ಊಹಿಸಿಕೊಳ್ಳಿರಿ. ಸುಮಾರು ಹತ್ತು ಸಾವಿರ ರಸಗ್ರಂಥಿಗಳು! ಪ್ರತಿ ಹದಿನೈದು ದಿನಕ್ಕೊಮ್ಮೆ ಇದು ಹೊಸದಾಗಿ ರೂಪುಗೊಳ್ಳುತ್ತದೆ. ಹಳೆಯ ಸವಕಲು ಗ್ರಂಥಿ ತಳಕ್ಕಿಳಿಯುತ್ತದೆ. ಮರಗಿಡದ ಬೇರಿನ ರಚನೆ ಊಹಿಸಿಕೊಳ್ಳಿರಿ. ಆದರೆ ಈ ಬೇರಿನ ರಚನೆಗಳು ಮಿದುಳಿನ ನಾನಾ ಕಣಗಳೊಂದಿಗೆ ಸಂಪರ್ಕ. ಆಗಲೇ ನಮಗೆ ರುಚಿಯ ಬೋಧೆ. ಆಯುರ್ವೇದದ ರೀತ್ಯಾ ಇದು ಬೋಧಕ ಕಫ. ಚೆನ್ನಾಗಿ ಜಗಿದು ನುಂಗುವಾ. ಆಗಲೇ ಜೊಲ್ಲಿನ ರಸದೊಡನೆ ಗೊಜ್ಜವಲಕ್ಕಿ ಮಿಳಿತ. ಮಿದುಳಿಗೆ ರುಚಿಯ ಬೋಧನೆ. ಆದರೆ ಪಕ್ಕದಲ್ಲಿ ಕುಳಿತ ಒಂಬತ್ತರ ಹರೆಯದ ಬಾಲಕನ ಎದುರು ಮೊಬೈಲ್ ಆಟವಿತ್ತು. ಏಕಕಾಲಕ್ಕೆ ಮಿದುಳು ಎರಡು ಕೆಲಸದಲ್ಲಿ ತೊಡಗಲು ದುಸ್ಸಾಧ್ಯ. ಅವನು ತಿಂದ ಅರೆಬರೆ ಅವಲಕ್ಕಿ ಅಜೀರ್ಣ. 'ಆಮ' ಎಂಬ ಸ್ವರೂಪ. ಕುಂಠಿತ ಬೆಳವಣಿಗೆ, ಮಾನಸಿಕ ವಿಕೃತಿಗೆ ಅದು ಮುಂದೆ ಕಾರಣ. ಇಂತಹ ಪ್ರಸಂಗ ಎದುರಿಸುವ ಹೊಸ ಪೀಳಿಗೆ ಬಾಲಕರ ಭವಿಷ್ಯವನ್ನು ರೂಪಿಸಲು ಹೆತ್ತವರು ಹೆಣಗಾಡಲೇಬೇಕು.



ನಾಲಗೆಯ ಮೇಲಿನ ದಪ್ಪ ಪದರ ಶುಚಿಗೊಳಿಸುವುದು ನಿತ್ಯದ ಅಗತ್ಯ. ಪ್ಲಾಸ್ಟಿಕ್, ಲೋಹದ ಟಂಗ್ ಕ್ಲೀನರ್ ಏಕೆ? ಮಾವು, ಗೇರೆಲೆಯ ನಡುನರ (ಮಿಡ್ ರಿಬ್), ಹೊಂಗೆಕಡ್ಡಿಗಳನ್ನೂ ಬಳಸಬಹುದು. ಬಾಯಿಗೆ ಎಳ್ಳೆಣ್ಣೆ ಅಥವಾ ತೆಂಗಿನೆಣ್ಣೆಯ ಕವಳ ಗಂಡೂಷ (ಮುಕ್ಕಳಿಕೆ) ಉತ್ತಮ ವಿಧಾನ. ಅನಂತರ ಹದ ಬಿಸಿ ನೀರಿನ ಗಂಡೂಷ. ಜ್ಯೇಷ್ಠಮಧು ಪುಡಿ ಎಲ್ಲೆಡೆ ಲಭ್ಯ. ಅದರ ಹದ ಬಿಸಿ ಕಷಾಯದ ಗಂಡೂಷ ಅತ್ಯಂತ ಸರಳ ಮತ್ತು ಪರಿಣಾಮಕಾರಿ ವಿಧಾನ. ಸತತ ಆ್ಯಂಟಿಬಯಾಟಿಕ್ ಸೇವನೆಯ ದುಷ್ಪರಿಣಾಮದಿಂದ ನಾಲಿಗೆ ರುಚಿ ಕೆಡುವ ಸ್ಥಿತಿಗೆ ಇದು ಪರಿಹಾರ. ಜೇನು ಅಥವಾ ತುಪ್ಪವನ್ನು ನಾಲಗೆಗೆ ಸವರಿಕೊಳ್ಳಿ; ನಾಲಗೆಯ ರುಚಿಪದರಗಳನ್ನು ಸಂತೈಸಿಕೊಳ್ಳಿರಿ.

ಶುಂಠಿ, ಕಾಳುಮೆಣಸು ಮತ್ತು ಹಿಪ್ಪಲಿ ಪುಡಿಯನ್ನೋ ಕಷಾಯವನ್ನೋ ಬಳಸಿ ಬಾಯಿಯನ್ನು ತೊಳೆದುಕೊಳ್ಳುವ ವಿಧಾನವೂ ಇದೆ. ಅಳಲೆ, ತಾರೆ ಮತ್ತು ನೆಲ್ಲಿಯ ಅದ್ಭುತ ಮಿಶ್ರಣವಂತೂ ಸರ್ವರೋಗ ಸಂಜೀವಿನಿ. ಮಲಪ್ರವೃತ್ತಿಗೆ ಸರಾಗ ಸಹ. ಸೇವನೆಗೆ, ನಾಲಗೆಗೆ ಹಚ್ಚಲು, ಕಷಾಯ ಗಂಡೂಷಕ್ಕಿದು ಸುಲಭದ ದಾರಿ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಸಮಾಜ ವಿಜ್ಞಾನ

ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

25) ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ .... ರೂಪಾಯಿಗಳನ್ನು ನೀಡಿದನು.

ಉತ್ತರ:– ಹದಿನೇಳು ಕೋಟಿ ಎಪ್ಪತ್ತು ಲಕ್ಷ

26) ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ....ಕದನ ನಡೆಯಿತು.

ಉತ್ತರ:– ಪ್ಲಾಸಿ

27) ದಸ್ತಕ್‌ಗಳನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ....ತಮ್ಮ ಖಾಸಗಿ ವ್ಯಾಪಾರ–ವ್ಯವಹಾರಕ್ಕಾಗಿ ದುರುಪಯೋಗಪಡಿಸಿಕೊಳ್ಳ ತೊಡಗಿದರು

ಉತ್ತರ:– ನೌಕರರು

28) ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ....ನೀಡಿದನು.

ಉತ್ತರ:– ಎರಡನೇ ಷಾ ಆಲಂ

29) ಷಾ ಆಲಂ ವಾರ್ಷಿಕ ....ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು

ಉತ್ತರ:– 26 ಲಕ್ಷ

30) ಔದ್‌ನ ನವಾಬನಾದ ....ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.

ಉತ್ತರ:– ಷುಜಾ–ಉದ್–ದೌಲನು

31) ಮೀರ್ ಖಾಸಿಮನು ಮೊಗಲ್ ದೊರೆ ಎರಡನೇ ಷಾ ಆಲಂ ಮತ್ತು ಔದ್‌ನ ನವಾಬ ಷುಜಾ–ಉದ್–ದೌಲರೊಂದಿಗೆ ಒಪ್ಪಂದ ಮಾಡಿಕೊಂಡನು. ಹೀಗಾಗಿ ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು ....ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

ಉತ್ತರ:– 1764

32) ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ....ನನ್ನು ಬಂಗಾಳದ ನವಾಬನೆಂದು ನೇಮಿಸಿದರು

ಉತ್ತರ:– ಮೀರ್ ಖಾಸಿಂ

5) ಮಾರ್ತಾಂಡ ವರ್ಮನು ವೈನಾಡ್ ಸಂಸ್ಥಾನದ ಗಡಿಯನ್ನು ವಿಸ್ತರಿಸಲು .... ಸಾವಿರ ಸೈನಿಕರ ಸೈನ್ಯವನ್ನು ಕಟ್ಟಿದನು.

ಉತ್ತರ:– 50

ಹಿಂದಿನ ಪ್ರಶ್ನೆಪತ್ರಿಕೆಯಿಂದ

ಈ ಹಿಂದೆ ವಾರ್ಷಿಕ ಪರೀಕ್ಷೆಗಳಲ್ಲಿ ಈ ಪಾಠದಿಂದ ಕೇಳಲಾದ ಪ್ರಶ್ನೆಗಳನ್ನು ನೋಡೋಣ

1) ಬಕ್ಸಾರ್ ಕದನವು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಮೇಲೆ ಬೀರಿದ ಪರಿಣಾಮಗಳೇನು?

(2024 ಮಾರ್ಚ್ ವಾರ್ಷಿಕ ಪರೀಕ್ಷೆ 3 ಅಂಕದ ಪ್ರಶ್ನೆ)

ಉತ್ತರ:– ಬಕ್ಸಾರ್ ಕದನವು ಈಸ್ಟ್ ಇಂಡಿಯಾ ಕಂಪನಿಯ ಮೇಲೆ ಬೀರಿದ ಪರಿಣಾಮಗಳು:–

1. ಈಸ್ಟ್ ಇಂಡಿಯಾ ಕಂಪನಿಯು ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನಿಂದ ಪಡೆಯಿತು
2. ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಟ್ಟನು
3. ಔದ್‌ನ ನವಾಬನಾದ ಷುಜಾ–ಉದ್–ದೌಲನು ಕಂಪನಿಗೆ ಯುದ್ಧ ನಷ್ಟದ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ನೀಡಿದನು
4. ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು

ಅಂತಿಮವಾಗಿ ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು ಹಾಗೂ ಔದ್ ಕೂಡ ಅವರ ಅಧೀನದಲ್ಲಿ ಉಳಿಯುವಂತಾಯಿತು. 1765ರಲ್ಲಿ ರಾಬರ್ಟ್ ಕ್ಲೈವನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು.

2) ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು ಸ್ಪಷ್ಟೀಕರಿಸಿ

(2019 ಮಾರ್ಚ್ ವಾರ್ಷಿಕ ಪರೀಕ್ಷೆ 2 ಅಂಕದ ಪ್ರಶ್ನೆ)

ಉತ್ತರ:– ಬಕ್ಸಾರ್ ಕದನದ ಪರಿಣಾಮ ಬಿಹಾರ, ಒಡಿಶಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು.

1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್‌ಕ್ಲೈವನು ದ್ವಿ–ಸರ್ಕಾರವನ್ನು ಜಾರಿಗೆ ತಂದನು. ಇದರ ಪ್ರಕಾರ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡಿಕೊಂಡು ತಮ್ಮ ಸಂಪತ್ತನ್ನು ವೃದ್ಧಿಸಿಕೊಂಡರು.. ಈ ರೀತಿ ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು

3) 1453ರಲ್ಲಿ ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು..............................

ಎ) ಅರಬರು ಬಿ) ಅಟೊಮನ್ ಟರ್ಕರು
ಸಿ) ಇಟಲಿ ಡಿ) ಪೋರ್ಚುಗೀಸರು

(2020 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

ಉತ್ತರ:–ಬಿ

4) ಬಂಗಾಳದಲ್ಲಿ ದ್ವಿಪ್ರಭುತ್ವವನ್ನು ಜಾರಿಗೆ ತಂದವನು ಯಾರು?

ಉತ್ತರ:– ರಾಬರ್ಟ್ ಕ್ಲೈವ್

(2020ರ ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

5) ಕಾನ್‌ಸ್ಟಾಂಟಿನೋಪಲ್‌ನ್ನು ವ್ಯಾಪಾರದ ದ್ವಾರವೆಂದು ಪರಿಗಣಿಸಲಾಗಿತ್ತು. ಏಕೆಂದರೆ ಅದು............

ಎ) ಅಂತಾರಾಷ್ಟ್ರೀಯ ವ್ಯಾಪಾರ ಮಾರ್ಗಗಳ ಕೇಂದ್ರ
ಬಿ) ಅದೊಂದೇ ಜಲಮಾರ್ಗ
ಸಿ) ರೋಮನ್ ಸಾಮ್ರಾಜ್ಯದ ರಾಜಧಾನಿ
ಡಿ) ಯೂರೋಪಿಯನ್ ಸಂಪನ್ಮೂಲಗಳ ಏಕೈಕ ಮೂಲ

ಉತ್ತರ:– ಎ (2021 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

6) ಪ್ಲಾಸಿ ಕದನದ ಪರಿಣಾಮಗಳೇನು? (ಜೂನ್ 2017 ಪರೀಕ್ಷೆ)

ಉತ್ತರ:– ಪ್ಲಾಸಿ ಕದನದ ಪರಿಣಾಮಗಳು

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ


ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC - PHYSICS

Chapter – 1

ELECTRIC CHARGES AND FIELDS

5. A pendulum consisting of an insulating bob of mass *m* and charge *q* hung as shown in the figure. What is the time period of the pendulum if uniform electric field $\vec{E}$ is set up between the plates.




Soln:- Let the pendulum be at an angle θ with the vertical.

Net force acting on the bob = $(mg - qE)$.

(…….Contd)

Torque experienced by the body about point of suspension is, is in the direction is in the direction $\tau = -(mg - qE)\, l \sin\theta$. Negative sign shows that torque is restoring torque.



As the amplitude of oscillation is small,

$$\sin\theta = \theta$$

$$\therefore \tau = -(mg - qE)\, l\, \theta$$

But $\tau = I\alpha$ (or) $\alpha = \dfrac{\tau}{I}$,

$$= \frac{-(mg - qE)\, l\, \theta}{I}$$

Where I = moment of inertia of pendulum about the point of suspension = ml^2

$$\therefore \alpha = \frac{-(mg - qE)\, l\, \theta}{ml^2}$$

$$= \frac{-(g - qE/m)\,\theta}{l}$$

(or) $\alpha \propto -\theta$

Therefore, the bob of the pendulum has simple harmonic motion.

Now, time period of pendulum, $T = 2\pi\sqrt{\dfrac{\theta}{|\alpha|}}$

$$= 2\pi\sqrt{\frac{l}{g - qE/m}}$$

6. Find electric intensity due to uniformly charged disc of radius a having surface charge density σ at any point on the axis of the disc.


Soln:- Let P be the point on the axis of disc and its distance from the centre of disc is r. disc is assumed to be formed by concentric rings.

Consider one such ring of radius x and thickness dx. Area of the ring is given by

$$dA = 2\pi x\, dx$$

and change on ring,

$$dq = \sigma\, dA = \sigma\, 2\pi x\, dx$$



Electric field due to considered ring at a distance r from its centre,

$$dE = \frac{1}{4\pi\varepsilon_0}\frac{dq\, r}{(x^2 + r^2)^{3/2}}$$

$$= \frac{1}{4\pi\varepsilon_0}\frac{(2\pi\sigma\, x\, dx) r}{(x^2 + r^2)^{3/2}}$$

$$\therefore E = \int_0^a dE = \frac{2\pi\sigma r}{4\pi\varepsilon_0}\int_0^a \frac{x\, dx}{(x^2 + r^2)^{3/2}}$$

Put $x^2 + r^2 = y$

$\therefore 2x\,dx = dy$

(or) $x\,dx = \dfrac{dy}{2}$


$$\therefore E = \frac{\sigma r}{2\epsilon_0}\int_{r^2}^{a^2 + r^2} \frac{dy}{2y^{3/2}}$$

$$= \frac{\sigma r}{2\epsilon_0}\left[\frac{1}{r} - \frac{1}{(a^2 + r^2)^{1/2}}\right]$$

$$= \frac{\sigma}{2\epsilon_0}\left[1 - \frac{1}{\left(\frac{a^2}{r^2} + 1\right)^{1/2}}\right]$$

For $a \gg x$, we get $E = \dfrac{\sigma}{2\varepsilon_0}$.

7. In the given figure $q_A = -256$ C, $q_B = 299$ C and $q_C = 81$ C. Calculate net electric field along DA



Soln :– Here, $AC = \sqrt{4^2 + 3^2} = 5\,cm$

$= 5 \times 10^{-2}\,m$

$BD = BC \sin\theta = 3 \times \dfrac{4}{5} = 2.4\,cm$

$= 2.4 \times 10^{-2}\,m$

$CD = BC\cos\theta = 3 \times \dfrac{3}{5} = 1.8\,cm$

$= 1.8 \times 10^{-2}\,m$

Then $AD = AC - CD = 5 - \dfrac{9}{5}$

$= 3.2\,cm = 3.2 \times 10^{-2}\,m$

(Contd….)

2,400 ಮೆ.ವಾ. ಉತ್ಪಾದನೆ ಗುರಿ

ಉಪ ಕೇಂದ್ರದ ಬಳಿ ವಿದ್ಯುತ್ ಸೌರ ಘಟಕ: ಇಂಧನ ಸಚಿವ ಕೆ.ಜೆ.ಜಾರ್ಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯುತ್ ಫೀಡರ್‌ಗಳ ಬಳಿ ಸೌರವಿದ್ಯುತ್ ಉತ್ಪಾದಿಸಿ ಕೃಷಿ ಪಂಪ್‌ಸೆಟ್‌ಗಳಿಗೆ ಪೂರೈಸುವ 'ಕುಸುಮ್ ಸಿ' ಯೋಜನೆಯಡಿ ಮೊದಲ ಹಂತದಲ್ಲಿ ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ 2400 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರಿಗೆ ಹಗಲು ವೇಳೆ ಸಮರ್ಪಕ ವಿದ್ಯುತ್ ಪೂರೈಸುವ ಉದ್ದೇಶದಿಂದ ಪ್ರತಿ ವಿದ್ಯುತ್ ಉಪಕೇಂದ್ರದ ವ್ಯಾಪ್ತಿಯಲ್ಲಿ 'ಕುಸುಮ್ ಸಿ' ಯೋಜನೆಯಡಿ ಸೌರವಿದ್ಯುತ್ ಘಟಕ ಸ್ಥಾಪಿಸ-ಲಾಗುತ್ತಿದೆ. ಈ ಘಟಕದಿಂದ ಫೀಡರ್‌ಗಳ ಮೂಲಕ ಆಯಾ ಉಪಕೇಂದ್ರದ ವ್ಯಾಪ್ತಿಯಲ್ಲಿರುವ ಪಂಪ್‌ಸೆಟ್‌ಗಳಿಗೆ ಪೂರೈಸಲಾಗುವುದು. ಇದರಿಂದ ಗುಣಮಟ್ಟದ ವಿದ್ಯುತ್ ಲಭ್ಯವಾಗುತ್ತದೆ. ಪರಿವರ್ತಕಗಳ ಮೇಲಿನ ಹೊರೆಯೂ ತಗ್ಗುತ್ತದೆ ಎಂದು ವಿವರಿಸಿದರು.



ಮೊದಲ ಹಂತದಲ್ಲಿ ಈ ಯೋಜನೆಯಿಂದ ಸುಮಾರು 6.19 ಲಕ್ಷ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸುವ ನಿಟ್ಟಿನಲ್ಲಿ ಕೆಲಸ ಪ್ರಗತಿಯಲ್ಲಿದೆ. ಈಗಾಗಲೇ ಸುಮಾರು 200 ಮೆಗಾವಾಟ್ ಸಾಮರ್ಥ್ಯದ ಸೌರ ಘಟಕಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಕೆಲವೇ ತಿಂಗಳುಗಳಲ್ಲಿ 93 ಸ್ಥಳಗಳಲ್ಲಿ 545 ಮೆಗಾವಾಟ್ ಸಾಮರ್ಥ್ಯದ ಸೌರ ಘಟಕಗಳು ಚಾಲನೆಗೊಳ್ಳಲಿವೆ' ಎಂದು ಮಾಹಿತಿ ನೀಡಿದರು.

'ಕುಸುಮ್ ಸಿ' ಯೋಜನೆಯಡಿ 1 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಸುಮಾರು ₹4 ಕೋಟಿ ವೆಚ್ಚವಾಗುತ್ತದೆ. ಈ ಪೈಕಿ ₹1 ಕೋಟಿ ಕೇಂದ್ರ ಸರ್ಕಾರದಿಂದ ಸಬ್ಸಿಡಿ ಬರುತ್ತದೆ. ಉಳಿದ ಮೊತ್ತವನ್ನು ಖಾಸಗಿ ಕಂಪನಿಗಳು ಹೂಡುತ್ತವೆ. ಈ ಎಲ್ಲ ಅಂಶಗಳನ್ನು ಆಧರಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಪ್ರತಿ ಯೂನಿಟ್ ವಿದ್ಯುತ್‌ಗೆ ಗರಿಷ್ಠ ₹3.13 ನಿಗದಿಪಡಿಸಿದೆ' ಎಂದರು.

'ತಾಂತ್ರಿಕ ಸಾಧ್ಯತೆ ಇರುವ ವಿದ್ಯುತ್ ಉಪ ಕೇಂದ್ರಗಳ ಬಳಿ ಸೌರ ಘಟಕಗಳ ಸ್ಥಾಪನೆಗೆ ನಿರ್ಧರಿಸಲಾಗಿದೆ. ರಾಜ್ಯದಲ್ಲಿ 1,400 ವಿದ್ಯುತ್ ಉಪಕೇಂದ್ರಗಳಿವೆ. ಸದ್ಯ 400 ಉಪಕೇಂದ್ರಗಳಲ್ಲಿ ಮಾತ್ರ ಕುಸುಮ್ ಸಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಖಾಸಗಿಯವರು ಸೌರ ಘಟಕಗಳನ್ನು ಸ್ಥಾಪಿಸಿ, ವಿದ್ಯುತ್ ಉತ್ಪಾದಿಸುತ್ತಾರೆ. ಅದನ್ನು ಸರ್ಕಾರ ಖರೀದಿಸಿ ಆಯಾ ಫೀಡರ್‌ಗಳ ವ್ಯಾಪ್ತಿಯ ಕೃಷಿ ಪಂಪ್‌ಸೆಟ್‌ಗಳಿಗೆ ಪೂರೈಸುತ್ತದೆ' ಎಂದು ವಿವರಿಸಿದರು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್ , ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕ್ರೆಡಲ್) ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ, ಬೆಸ್ಕಾಂ ತಾಂತ್ರಿಕ ನಿರ್ದೇಶಕ ಎಚ್.ಜೆ.ರಮೇಶ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

'ಕುಸುಮ್ ಸಿ' ಉದ್ಘಾಟನೆ ನಾಳೆ

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರಿನ ನೇತಾಜಿ ಕ್ರೀಡಾಂಗಣದಲ್ಲಿ ಜೂನ್ 11ರ ಬೆಳಿಗ್ಗೆ 10ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುಸುಮ್-ಸಿ ಯೋಜನೆಯನ್ನು ಅಧಿಕೃತವಾಗಿ ಉದ್ಘಾಟಿಸಲಿದ್ದಾರೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

'ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ, ರಾಜ್ಯ ಖಾತೆ ಸಚಿವ ಶ್ರೀಪಾದ್ ನಾಯಕ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಕೃಷ್ಣ ಬೈರೇಗೌಡ, ಡಾ.ಎಂ.ಸಿ.ಸುಧಾಕರ್ ಮತ್ತಿತರರು ಪಾಲ್ಗೊಳ್ಳಲಿ ದ್ದಾರೆ' ಎಂದರು.



ಕೆ.ಜೆ. ಜಾರ್ಜ್

'ಗೌರಿಬಿದನೂರು ತಾಲ್ಲೂಕಿನ ತೊಂಡೇಬಾವಿ ಹೋಬಳಿ ಹನುಮೇನಹಳ್ಳಿ ಮತ್ತು ಚರಕಮಟ್ಟೇನಹಳ್ಳಿ ಗ್ರಾಮದ ಸುಮಾರು 60 ಎಕರೆ ಪ್ರದೇಶದಲ್ಲಿ 20 ಮೆ.ವಾ. ಸಾಮರ್ಥ್ಯದ ಸೋಲಾರ್ ಘಟಕ ಸ್ಥಾಪಿಸಲಾಗಿದೆ. ಸದ್ಯ ರಾಜ್ಯದಲ್ಲಿ ಕುಸುಮ್-ಸಿ ಯೋಜನೆಯಡಿ ಸ್ಥಾಪಿಸಲಾಗಿರುವ ಅತಿ ದೊಡ್ಡ ಘಟಕವಿದು. ಹೀಗಾಗಿ ಗೌರಿಬಿದನೂರಿನಲ್ಲಿ ಯೋಜನೆಯನ್ನು ಉದ್ಘಾಟಿಸಲು ನಿರ್ಧರಿಸಲಾಗಿದೆ. ಇಲ್ಲಿ ಖಾಸಗಿ ಜಮೀನನ್ನು 25 ವರ್ಷಕ್ಕೆ ಭೋಗ್ಯಕ್ಕೆ ಪಡೆಯಲಾಗಿದೆ' ಎಂದು ವಿವರಿಸಿದರು.

ಡಿಸಿಇಟಿ, ವಾಸ್ತುಶಿಲ್ಪ: ದಾಖಲೆ ಪರಿಶೀಲನೆ

ಬೆಂಗಳೂರು: ಎರಡನೇ ವರ್ಷದ ಎಂಜಿನಿಯರಿಂಗ್ (ಡಿಸಿಇಟಿ) ಪ್ರವೇಶ ಹಾಗೂ ಮೊದಲನೇ ವರ್ಷದ ವಾಸ್ತುಶಿಲ್ಪ ಶಾಸ್ತ್ರ ಪ್ರವೇಶ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನಾ ಕಾರ್ಯ ಜೂನ್ 10ರಿಂದ 13ರವರೆಗೆ ನಡೆಯಲಿದೆ.

ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಪರಿಶೀಲನೆ ನಡೆಸಲಾಗುತ್ತಿದ್ದು, 37 ಕಾಲೇಜುಗಳ ಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಲಾಗಿದೆ. ಅಭ್ಯರ್ಥಿಗಳು ಮುಂಗಡವಾಗಿ ದಿನಾಂಕ ನಿಗದಿ ಮಾಡಿಕೊಂಡು ಆಯಾ ಕಾಲೇಜುಗಳಿಗೆ ಭೇಟಿ ನೀಡಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಕ್ಲೇಮುಗಳಿಗೆ ಪೂರಕವಾಗಿ ಎಲ್ಲ ಶೈಕ್ಷಣಿಕ ಮೂಲ ದಾಖಲೆಗಳನ್ನು ಮತ್ತು ವಿಶೇಷ ಪ್ರವರ್ಗದ (ಎನ್‌ಸಿಸಿ, ಕ್ರೀಡೆ, ಸೈನಿಕರು, ಮಾಜಿ ಸೈನಿಕರು, ಮಾಜಿ-ಸಿಎಪಿಎಫ್, ಸಿಎಪಿಎಫ್, ಕ್ಲೇಮ್ ಮಾಡಿದ್ದಲ್ಲಿ ಮಾತ್ರ (ಅರ್ಹತೆ) ಕಡ್ಡಾಯವಾಗಿ ಪ್ರಮಾಣ ಪತ್ರ ತೆಗೆದುಕೊಂಡು ಹೋಗಬೇಕು ಎಂದಿದ್ದಾರೆ.

ಮಂಗಳೂರಿಗೆ ಬಿಜೆಪಿ ನಿಯೋಗ ಭೇಟಿ, ಸಭೆ

'ಪೊಲೀಸರ ಗೂಂಡಾ ವರ್ತನೆ ನಿಲ್ಲಲಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಹಾಸ್ ಶೆಟ್ಟಿ ಹತ್ಯೆ ನಂತರ ಕಾನೂನು ಸುವ್ಯವಸ್ಥೆ ನಿರ್ವಹಣೆಯ ನೆಪ ಒಡ್ಡಿ, ಪೊಲೀಸ್ ಇಲಾಖೆ ಗೂಂಡಾ ವರ್ತನೆ ತೋರುತ್ತಿದೆ. ಆದರೂ ನಮ್ಮ ಕಾರ್ಯಕರ್ತರು ಸಮಾಧಾನದಿಂದಿದ್ದಾರೆ. ಇದನ್ನು ದೌರ್ಬಲ್ಯ ಎಂದು ಭಾವಿಸಿದರೆ ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿದರು.

ಇಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಪರಾಮರ್ಶಿಸಲು ಬಿಜೆಪಿ ನಾಯಕರ ನಿಯೋಗದೊಂದಿಗೆ ಸೋಮವಾರ ಜಿಲ್ಲಾ ಪ್ರವಾಸ ಕೈಗೊಂಡಿದ್ದ ಅವರು, ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಪೊಲೀಸ್ ಇಲಾಖೆ ಸರ್ಕಾರದ ಒತ್ತಡಕ್ಕೆ ಮಣಿದು ಕೆಲಸ ಮಾಡುವುದನ್ನು ಮುಂದುವರಿಸಿದರೆ ಕಾನೂನು ಸುವ್ಯವಸ್ಥೆ ಕುಸಿದು ಬೀಳಲಿದೆ. ಅದಕ್ಕೆ ನೀವೇ ಹೊಣೆ ಎಂದು ಜಿಲ್ಲಾಡಳಿತಕ್ಕೆ ಸ್ಪಷ್ಟಪಡಿಸಿದ್ದೇನೆ' ಎಂದರು.

'ಸುಳ್ಯ ಮತ್ತು ಇತರ ಕೆಲವು ವಿಧಾನ ಸಭಾ ಕ್ಷೇತ್ರಗಳಲ್ಲಿ ವಿಎಚ್‌ಪಿ, ಬಜರಂಗ ದಳ ಹಿಂದೂ ಜಾಗರಣ ವೇದಿಕೆ ಮುಖಂಡರನ್ನು ಗುರಿಯಾಗಿಸಿ, ಪೊಲೀಸರು ಮಧ್ಯರಾತ್ರಿ ಅವರ ಮನೆಯ ಬಾಗಿಲು ತಟ್ಟುತ್ತಿದ್ದಾರೆ. ಅವರ ಭಾವಚಿತ್ರ ಕ್ಲಿಕ್ಕಿಸುತ್ತಿದ್ದಾರೆ. ಕಾರ್ಯಕರ್ತರೊಬ್ಬರ ಮನೆಗೆ ತೆರಳಿದ್ದ ಮಹಿಳಾ ಪೊಲೀಸ್ ಒಬ್ಬರು ಆತನ ತಂದೆ ತಾಯಿಗೆ ರಿವಾಲ್ವರ್ ತೋರಿಸಿದ್ದಾರೆ. ನಿಮ್ಮ ಮಗ ಓಡಾಡಲು ಸಾಧ್ಯವಿಲ್ಲ. ಊಟ ಮಾಡುವುದಕ್ಕೂ ಬಿಡುವುದಿಲ್ಲ ಎಂದೆಲ್ಲ ಬೆದರಿಸಿದ್ದಾರೆ' ಎಂದು ಅವರು ಆರೋಪಿಸಿದರು.

'ಜಿಲ್ಲೆಯಲ್ಲಿ ನಡೆದ ಮೂರೂ ಹತ್ಯೆ (ಮಹಮದ್ ಅಶ್ರಫ್, ಸುಹಾಸ್ ಶೆಟ್ಟಿ ಹಾಗೂ ಅಬ್ದುಲ್ ರಹಿಮಾನ್) ಪ್ರಕರಣಗಳ ತನಿಖೆಯನ್ನು ಎನ್ಐಎಗೆ ವಹಿಸಲು ಅಭ್ಯಂತರ ಇಲ್ಲ. ಈ ಬಗ್ಗೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬಹುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಬಿಜೆಪಿ ಕಾರ್ಯಕರ್ತರ ಅಳಲು ಆಲಿಸುವ ಸಭೆಯಲ್ಲಿ ಸುಹಾಸ್ ಶೆಟ್ಟಿ ತಂದೆ ಮೋಹನ್ ಮತ್ತು ತಾಯಿ ಸುಲೋಚನಾ ಅವರು ಭಾಗಿಯಾದ್ದರು.

ಅಳಲು ಆಲಿಸಿದ ಬಿಜೆಪಿ ನಿಯೋಗ: ಆರ್‌ಎಸ್‌ಎಸ್ ಪ್ರಮುಖರ ಜೊತೆ ನಿಯೋಗವು ಇಲ್ಲಿ ಗೋಪ್ಯ ಸಭೆ ನಡೆಸಿತು. ಬಳಿಕ ಪ್ರತ್ಯೇಕ ಸಭೆ ನಡೆಸಿ ಕಾರ್ಯಕರ್ತರ ಅಳಲು ಆಲಿಸಿತು. ವಿಶ್ವ ಹಿಂದೂ ಪರಿಷತ್, ಬಜರಂಗ ದಳ, ಹಿಂದೂ ಜಾಗರಣ ವೇದಿಕೆ ಸೇರಿ ಹಿಂದುತ್ವವಾದಿ ಸಂಘಟನೆಗಳ ಪ್ರಮುಖರೂ ಭಾಗವಹಿಸಿದ್ದರು. ನಂತರ ಜಿಲ್ಲಾಧಿಕಾರಿ, ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿತು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಉಪನಾಯಕ ಅರವಿಂದ ಬೆಲ್ಲದ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್, ಪಕ್ಷದ ಮುಖಂಡರಾದ ಸದಾನಂದ ಗೌಡ, ಭಾಸ್ಕರ್ ರಾವ್ ನಿಯೋಗದಲ್ಲಿದ್ದರು.

ಸಂಸದ ಕ್ಯಾಪ್ಟನ್ ಚೌಟ, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ, ಬಿಜೆಪಿ ಶಾಸಕರು ಉಪಸ್ಥಿತರಿದ್ದರು.

ಮಡಿಕೇರಿ, ಚಿಕ್ಕಜಾಜೂರಿನಲ್ಲಿ ವರ್ಷಧಾರೆ

ಹಲವೆಡೆ ಮಳೆ: ಸಿಡಿಲು ಬಡಿದು ಯುವಕ, ಚಾವಣಿ ಕುಸಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ/ಮಡಿಕೇರಿ: ರಾಜ್ಯದ ಹಲವೆಡೆ ಸೋಮವಾರ ಮಳೆಯಾಗಿದೆ. ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರು ಹಾಗೂ ಧರ್ಮಪುರದಲ್ಲಿ ಬಿರುಸಿನ ಮಳೆಯಾಗಿದೆ. ಕೊಡಗು ಜಿಲ್ಲೆಯ ಮಡಿಕೇರಿ ನಗರ ಸೇರಿದಂತೆ ತಾಲ್ಲೂಕಿನ ನಾಲ್ಕಾರು ಭಾಗದಲ್ಲಿ ರಾತ್ರಿಯಿಂದ ಸೋಮವಾರ ಸಾಧಾರಣವಾಗಿ ಮಳೆ ಸುರಿದಿದೆ.

ಚಿಕ್ಕಜಾಜೂರಿನಲ್ಲಿ ಸೋಮವಾರ ಮಧ್ಯಾಹ್ನ ಸುಮಾರು 20 ನಿಮಿಷಗಳವರೆಗೆ ಸಾಧಾರಣ ಮಳೆಯಾಯಿತು. ಸಂಜೆ ಅಂದಾಜು 15 ನಿಮಿಷಗಳವರೆಗೆ ಗಾಳಿಸಹಿತ ಧಾರಾಕಾರ ಮಳೆ ಸುರಿಯಿತು. ಧರ್ಮಪುರ ಹೋಬಳಿಯಲ್ಲಿ ಭಾನುವಾರ ರಾತ್ರಿ ಉತ್ತಮ ವರ್ಷಧಾರೆಯಾಗಿದೆ. ಇದರಿಂದ ಈಗಾಗಲೇ ಮೆಕ್ಕೆಜೋಳ ಬಿತ್ತನೆ ಮಾಡಿದ್ದ ರೈತರು ಹರ್ಷಗೊಂಡಿದ್ದಾರೆ.

ದಾವಣಗೆರೆ ನಗರದಲ್ಲಿ ಸೋಮವಾರ ಸಂಜೆ ಅಂದಾಜು 20 ನಿಮಿಷ ಜೋರು ಮಳೆ ಸುರಿಯಿತು.



ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರಿನಲ್ಲಿ ಸೋಮವಾರ ಸಂಜೆ ಬಿರುಸಿನ ಮಳೆ ಸುರಿಯಿತು

ಜಿಲ್ಲೆಯ ಜಗಳೂರು, ಕಡರನಾಯ್ಕನಹಳ್ಳಿ ಮತ್ತು ನ್ಯಾಮತಿಯಲ್ಲೂ ಮಳೆಯಾಗಿದೆ.

ಜೂನ್ 12 ಮತ್ತು 13ರಂದು ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆ ಬೀಳುವ ಮುನ್ಸೂಚನೆ ನೀಡಿರುವ ಭಾರತೀಯ ಹವಾಮಾನ ಇಲಾಖೆ 'ರೆಡ್ ಅಲರ್ಟ್' ಘೋಷಿಸಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್‌ಡಿಆರ್‌ಎಫ್) ಸೋಮವಾರ ಹಾರಂಗಿ ಅಣೆಕಟ್ಟು ಹಾಗೂ ಕುಶಾಲನಗರದಲ್ಲಿ ಪ್ರವಾಹ ಸಂಭವಿಸಬಹುದಾದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಇಬ್ಬರ ಸಾವು: (ಹುಬ್ಬಳ್ಳಿ ವರದಿ) ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ದಶಮಾಪುರ ಗ್ರಾಮದಲ್ಲಿ ಭಾನುವಾರ ಮಧ್ಯರಾತ್ರಿ ಸಿಡಿಲು ಬಡಿದು ಚಂದ್ರಶೇಖರ್ (25) ಮೃತಪಟ್ಟಿದ್ದಾರೆ.

ವಿಜಯಪುರ ಜಿಲ್ಲೆ ತಿಕೋಟಾ ತಾಲ್ಲೂಕಿನ ಬಾಬಾ ನಗರದಲ್ಲಿ ಭಾರಿ ಮಳೆಗೆ ಮನೆಯ ಚಾವಣಿ ಕುಸಿದು ಸಂಗೀತಾ ಬಾಳಾಸಾಹೇಬ ಪಾಟೀಲ (30) ಮೃತಪಟ್ಟಿದ್ದಾರೆ.

ವಿಜಯನಗರ ಜಿಲ್ಲೆ ಕಾನಹೊಸಹಳ್ಳಿ ಹೋಬಳಿಯ ಕಾತ್ರಿಕೆಹಟ್ಟಿಯಲ್ಲಿ ಒಂದು ಮನೆ, ಕೊಟ್ಟೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ನಾಲ್ಕು ಮನೆಗಳು ಭಾಗಶಃ ಹಾನಿಯಾಗಿವೆ. ಕೂಡ್ಲಿಗಿ ತಾಲ್ಲೂಕಿನ ಬಡೇಲಡಕು ಗ್ರಾಮದಲ್ಲಿ ಮನೆ ಗೋಡೆ ಬಿದ್ದು ಮಹಿಳೆಯೊಬ್ಬರಿಗೆ ಗಾಯವಾಗಿದೆ.

ಬೀದರ್ ವರದಿ: ಜಿಲ್ಲೆಯ ಹಲವೆಡೆ ಸೋಮವಾರ ಉತ್ತಮವಾಗಿ ಮಳೆಯಾಗಿದೆ. ಬೀದರ್ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಮೂನಾಲ್ಕು ತಾಸು ಬಿರುಸಿನ ಮಳೆಯಾಗಿದೆ. ಬೆಳಿಗ್ಗೆ 6ರ ಸುಮಾರಿಗೆ ಆರಂಭಗೊಂಡ ಮಳೆ ಹತ್ತು ಗಂಟೆಯ ತನಕ ಸುರಿದಿದೆ. ಜಿಲ್ಲೆಯ ಭಾಲ್ಕಿ, ಹುಲಸೂರ, ಹುಮನಾಬಾದ್, ಚಿಟಗುಪ್ಪ, ಔರಾದ್ ಹಾಗೂ ಬಸವಕಲ್ಯಾಣದಲ್ಲಿ ಸಾಧಾರಣ ಮಳೆಯಾಗಿದೆ. ಕಲಬುರಗಿ ಹಾಗೂ ಕೊಪ್ಪಳ ಜಿಲ್ಲೆಯ ಕೆಲವೆಡೆ ತುಂತುರು ಮಳೆಯಾಗಿದೆ.

ಶ್ರೀಗಂಗಾಧರ ಶಾಸ್ತ್ರಿ ಪ್ರತಿಷ್ಠಾನ ಅಸ್ತಿತ್ವಕ್ಕೆ

ಬೆಂಗಳೂರು: ಬಾಗಲಕೋಟೆ ಜಿಲ್ಲೆಯ ಚಿತ್ತರಗಿಯಲ್ಲಿ ಶ್ರೀಗಂಗಾಧರ ಶಾಸ್ತ್ರಿ ಪ್ರತಿಷ್ಠಾನ ಹಾಗೂ ಬೀಳಗಿ ತಾಲ್ಲೂಕಿನಲ್ಲಿ ಕಂದಗಲ್ ಹನುಮಂತರಾಯರ ವೃತ್ತಿ ರಂಗಭೂಮಿ ಟ್ರಸ್ಟ್ ರಚಿಸಿ ಸರ್ಕಾರ ಆದೇಶ ಹೊರಡಿಸಿದೆ.

ಗಂಗಾಧರ ಶಾಸ್ತ್ರಿ ಅವರು ವೃತ್ತಿ ರಂಗಭೂಮಿಗೆ ಅಮೃತಸ್ಪರ್ಶ ನೀಡಿದ್ದಾರೆ. ತಮ್ಮ ಜೀವಿತ ಅವಧಿಯಲ್ಲಿ ರಂಗಭೂಮಿಗೆ ಅಪಾರ ಕೊಡುಗೆ ನೀಡಿದ್ದಾರೆ. ಕಲೆಯನ್ನೇ ಕಾಯಕ ಎಂದು ನಂಬಿದ್ದರು. ಅವರ ಹೆಸರಲ್ಲಿ ಪ್ರತಿಷ್ಠಾನ ಸ್ಥಾಪಿಸಲಾಗುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೇಳಿದೆ.

ಗುರು ಬಿ. ಹಿರೇಮಠ (ಅಧ್ಯಕ್ಷ), ಶಿವಕುಮಾರ ಗಂಗಾಧರ ಶಾಸ್ತ್ರಿ ಹಿರೇಮಠ, ಅಭಯರಾಮ ಮನಗೂಳಿ, ಪರಸಪ್ಪ ಹನುಮಂತಪ್ಪ ಬಿಸಲದಿನ್ನಿ, ವಿಜಯಲಕ್ಷ್ಮಿ ಬಸವರಾಜ ಹಿರೇಮಠ, ಕುಮಾರಸ್ವಾಮಿ ಮುಪ್ಪಯ್ಯ ಹಿರೇಮಠ, ವಿಜಯಕುಮಾರ ಎಸ್. ಕಟಗಿಹಳ್ಳಿ ಮಠ, ಮಲ್ಲಪ್ಪ ಮಹಾಂತಪ್ಪ ಬಿಸರಡ್ಡಿ (ಸದಸ್ಯರು) ಶ್ರೀಗಂಗಾಧರ ಶಾಸ್ತ್ರಿ ಪ್ರತಿಷ್ಠಾನಕ್ಕೆ ನೇಮಕವಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿ-ಯಾಗಿ ಕಾರ್ಯನಿರ್ವಹಿಸಲಿದ್ದಾರೆ.

₹3.96 ಕೋಟಿ ನಷ್ಟ: ಪ್ರಾಚಾರ್ಯರಿಗೆ ನೋಟಿಸ್

ಬೆಂಗಳೂರು: ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಬೋಧನಾ ಶುಲ್ಕವನ್ನು ಅವರಿಗೆ ಮಂಜೂರಾದ ವಿದ್ಯಾರ್ಥಿವೇತನದಿಂದ ಮರು ಪಾವತಿ ಮಾಡಿಕೊಳ್ಳದ 2 ಎಂಜಿನಿಯರಿಂಗ್ ಹಾಗೂ 60 ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರಿಗೆ ತಾಂತ್ರಿಕ ಶಿಕ್ಷಣ ಇಲಾಖೆ ನೋಟಿಸ್ ನೀಡಿದೆ.

2020-21, 2021-22 ಮತ್ತು 2022-23ನೇ ಸಾಲಿನ ಎಂಜನಿಯರಿಂಗ್, ಡಿಪ್ಲೊಮಾ ವಿದ್ಯಾರ್ಥಿಗಳು ಪಡೆದಿದ್ದ ಶುಲ್ಕ ವಿನಾಯಿತಿಯ ಮೊತ್ತ ₹3.96 ಕೋಟಿಯನ್ನು ಮರಳಿ ಪಡೆಯದೇ ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿದ್ದಾರೆ ಎಂದು ಮಹಾಲೇಖಪಾಲರ ವರದಿ ಆಕ್ಷೇಪ ಮಾಡಿತ್ತು. ಆಕ್ಷೇಪದ ನಂತರ ತಾಂತ್ರಿಕ ಶಿಕ್ಷಣ ಇಲಾಖೆ ಪ್ರಾಂಶುಪಾಲರ ವಿರುದ್ಧ ಕ್ರಮಕ್ಕೆ ಮುಂದಾಗಿದೆ.



ಸುಭಾಷಿತ

ನಿತ್ಯ, ಅನಿತ್ಯ ವಸ್ತುಗಳನ್ನು ವಿಮರ್ಶಿಸಿ ಸತ್ಯವನ್ನು ಕಂಡುಹಿಡಿಯುವುದೇ ವಿವೇಕ.

–ರಾಮಕೃಷ್ಣ ಪರಮಹಂಸ

ಜನಗಣತಿಗೆ ಸಮಯ ನಿಗದಿ ಜಾತಿ ಜನಗಣತಿ ಮೇಲೆ ಗಮನ

ಮುಂಬರುವ ಜನಗಣತಿಯು ಎರಡು ಹಂತಗಳಲ್ಲಿ ನಡೆಯಲಿದೆ ಎಂದು ಕೇಂದ್ರ ಸರ್ಕಾರ ಪ್ರಕಟಿಸಿದೆ. ಮೊದಲ ಹಂತದಲ್ಲಿ ಜಮ್ಮು ಮತ್ತು ಕಾಶ್ಮೀರ, ಉತ್ತರಾಖಂಡದಂತಹ ಗುಡ್ಡಗಾಡು ಪ್ರದೇಶಗಳಲ್ಲಿ ಜನಗಣತಿ ನಡೆಯಲಿದೆ. ಇದು, 2026ರ ಅಕ್ಟೋಬರ್ ಒಂದರ ಒಳಗೆ ಪೂರ್ಣಗೊಳ್ಳಲಿದೆ. ಎರಡನೆಯ ಹಂತದ ಜನಗಣತಿಯು ದೇಶದ ಇತರ ಭಾಗಗಳಲ್ಲಿ ನಡೆಯಲಿದ್ದು, 2027ರ ಮಾರ್ಚ್ 1ರ ಒಳಗೆ ಕೊನೆಗೊಳ್ಳಲಿದೆ. ದಶವಾರ್ಷಿಕ ಜನಗಣತಿಯು 2021ರಲ್ಲಿ ನಡೆಯಬೇಕಿತ್ತು. ಆದರೆ, ಕೋವಿಡ್ ಸಾಂಕ್ರಾಮಿಕದ ಕಾರಣಕ್ಕೆ ಅದನ್ನು ಮುಂದೂಡಲಾಗಿತ್ತು. ಆದರೆ ನಂತರದ ದಿನಗಳಲ್ಲಿ ಅದನ್ನು ಮತ್ತೆ ಮುಂದಕ್ಕೆ ಹಾಕಿದ್ದು ಏಕೆ ಎಂಬ ಬಗ್ಗೆ ವಿವರಣೆ ಸಿಕ್ಕಿಲ್ಲ. ಈಗ ಕೇಂದ್ರ ಸರ್ಕಾರ ಮಾಡಿರುವ ಘೋಷಣೆಯನ್ನು ಸ್ವಾಗತಿಸಬೇಕಿದೆ. ಏಕೆಂದರೆ ಈ ಪ್ರಕ್ರಿಯೆಯು ದೇಶಕ್ಕೆ ಹಲವು ಆಯಾಮಗಳಲ್ಲಿ ಬಹಳ ಮುಖ್ಯವಾಗುತ್ತದೆ. ಈ ಜನಗಣತಿಯು 16 ವರ್ಷಗಳ ಅಂತರದ ನಂತರ ನಡೆಯಲಿದೆ. ಸ್ವಾತಂತ್ರ್ಯಾನಂತರ ಇದೇ ಮೊದಲ ಬಾರಿ ಜಾತಿ ಜನಗಣತಿಯೂ ಜನಗಣತಿಯ ಜೊತೆ ನಡೆಯಲಿದೆ. ದೇಶದಲ್ಲಿ ಕಡೆಯ ಬಾರಿಗೆ ಜಾತಿ ಜನಗಣತಿ ನಡೆದಿದ್ದು 1931ರಲ್ಲಿ. ಹೀಗಾಗಿ ಈ ಬಾರಿ ಜಾತಿ ವಿವರ ಸಂಗ್ರಹಿಸಲಿರುವುದು ಮಹತ್ವ ಪಡೆದುಕೊಳ್ಳುತ್ತದೆ. ಇದೇ ಮೊದಲ ಬಾರಿಗೆ ಜನಗಣತಿಯನ್ನು ಡಿಜಿಟಲ್ ಸಾಧನಗಳನ್ನು ಬಳಸಿ ನಡೆಸಲಾಗುತ್ತದೆ. ಅಂದರೆ ದತ್ತಾಂಶ ಸಂಗ್ರಹ ಇನ್ನಷ್ಟು ವೇಗವಾಗಿ ನಡೆಯುತ್ತದೆ, ಬೇಕಾದ ಮಾಹಿತಿಯನ್ನು ಪಡೆಯುವುದು ಸುಲಭವಾಗುತ್ತದೆ.



ದತ್ತಾಂಶವು ನಿಖರವಾಗಿ ಇರಬೇಕು ಎಂದಾದರೆ ದತ್ತಾಂಶ ಸಂಗ್ರಹವು ದಕ್ಷವಾಗಿರಬೇಕು, ಪಾರದರ್ಶಕವಾಗಿ ಇರಬೇಕು

ದೇಶದ ಜನಸಂಖ್ಯೆಯ ಸ್ವರೂಪ, ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಬಹಳ ಬೇಗವಾಗಿ ಬದಲಾವಣೆ ಕಾಣುತ್ತಿದೆ. ಇಂತಹ ಸಂದರ್ಭದಲ್ಲಿ ಜನಗಣತಿಯ ಅಂಕಿ–ಅಂಶಗಳು ಬಹಳ ಮುಖ್ಯವಾಗುತ್ತವೆ. 2011ರಲ್ಲಿ ದೇಶದ ಜನಸಂಖ್ಯೆಯು 121 ಕೋಟಿ ಆಗಿತ್ತು. ಈಗ ಅದು ಶೇಕಡ 18ರಿಂದ ಶೇ 20ರವರೆಗೆ ಹೆಚ್ಚಳ ಆಗಿರಬಹುದು. ಅಂದರೆ ಈಗ ಭಾರತವು ವಿಶ್ವದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆಯ ದೇಶವಾಗಿದೆ. 1.8 ಲಕ್ಷ ಕೋಟಿ ಡಾಲರ್ ಆಗಿದ್ದ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಗಾತ್ರ 2027ರ ವೇಳೆಗೆ 5 ಲಕ್ಷ ಕೋಟಿ ಡಾಲರ್‌ಗೆ ಹೆಚ್ಚಾಗಬಹುದು ಎಂದು ನಿರೀಕ್ಷಿಸಲಾಗಿದೆ. ದೇಶದಲ್ಲಿ ಜನನ ಪ್ರಮಾಣ ಕಡಿಮೆ ಆಗಿರಬಹುದು. ಆದರೆ ಇದು ಬೇರೆ ಬೇರೆ ರಾಜ್ಯಗಳಲ್ಲಿ ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿ ಒಂದೇ ಪ್ರಮಾಣದಲ್ಲಿ ಇದ್ದಿರುವ ಸಾಧ್ಯತೆ ಇಲ್ಲ. ದೇಶದಲ್ಲಿ ನಗರೀಕರಣವು ಬಹಳ ವೇಗವಾಗಿ ಆಗುತ್ತಿದೆ. ಹೀಗಾಗಿ, ಜನಸಂಖ್ಯೆಯ ವಿವರಗಳು ನೀತಿ ನಿರೂಪಣೆಗೆ ಮತ್ತು ನಿರ್ದಿಷ್ಟ ವರ್ಗಗಳನ್ನು ಗುರಿಯಾಗಿಸಿಕೊಂಡ ಯೋಜನೆಗಳಿಗೆ ಮಹತ್ವದ್ದಾಗುತ್ತವೆ. ಖಾಸಗಿ ವಲಯಕ್ಕೆ ಕೂಡ ತನ್ನ ಯೋಜನೆಗಳನ್ನು ಇನ್ನಷ್ಟು ನಿಖರವಾಗಿಸಲು ಜನಸಂಖ್ಯೆಯ ದತ್ತಾಂಶವು ಮುಖ್ಯವಾಗುತ್ತದೆ. ದತ್ತಾಂಶವು ನಿಖರವಾಗಿ ಇರಬೇಕು ಎಂದಾದರೆ ದತ್ತಾಂಶ ಸಂಗ್ರಹವು ದಕ್ಷವಾಗಿರಬೇಕು, ಪಾರದರ್ಶಕವಾಗಿ ಇರಬೇಕು.

ಈ ಬಾರಿಯ ಜನಗಣತಿಯ ಬಹಳ ಪ್ರಮುಖವಾದ ಅಂಶ ಜಾತಿ ಕುರಿತ ಮಾಹಿತಿ ಸಂಗ್ರಹ. ಜಾತಿ ಜನಗಣತಿ ಆಗಬೇಕು ಎಂದು ಪ್ರಮುಖ ವಿರೋಧ ಪಕ್ಷಗಳು ಒತ್ತಾಯಿಸುತ್ತಿದ್ದವು, ಕೇಂದ್ರ ಸರ್ಕಾರವು ಆ ಒತ್ತಾಯವನ್ನು ಮತ್ತೆ ಮತ್ತೆ ತಳ್ಳಿಹಾಕುತ್ತಿತ್ತು. ಆದರೆ ಈಗ ಕೇಂದ್ರ ಸರ್ಕಾರವು ಈ ಮಾಹಿತಿ ಸಂಗ್ರಹಕ್ಕೆ ಮುಂದಾಗಿದೆ. ಇಲ್ಲಿ ಹಲವು ರಾಜಕೀಯ ಹಿತಾಸಕ್ತಿಗಳೂ ಅಡಗಿವೆ. ಜಾತಿಗಳ ಕುರಿತಾಗಿ ಹೊಸದಾಗಿ ಸಿಗುವ ಅಂಕಿ–ಅಂಶಗಳನ್ನು ಆಧರಿಸಿ ತೀವ್ರವಾದ ರಾಜಕೀಯ ಬದಲಾವಣೆಗಳು ಆಗಬಹುದು. ಜನಗಣತಿಯ ಮೂಲಕ ಸಿಗುವ ದತ್ತಾಂಶವನ್ನು ಆಧರಿಸಿ ಲೋಕಸಭೆ ಹಾಗೂ ವಿಧಾನಸಭೆಗಳ ಕ್ಷೇತ್ರ ಮರುವಿಂಗಡಣೆ ಬಗ್ಗೆ ಹೆಚ್ಚಿನ ಚರ್ಚೆಗಳು ನಡೆಯಬಹುದು. ಜನಸಂಖ್ಯೆಯನ್ನು ಆಧರಿಸಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಆದಲ್ಲಿ ತಮಗೆ ಅನ್ಯಾಯ ಆಗುತ್ತದೆ ಎಂಬ ಆತಂಕವನ್ನು, ಜನಸಂಖ್ಯೆಯ ನಿಯಂತ್ರಣದಲ್ಲಿ ಯಶಸ್ಸು ಸಾಧಿಸಿರುವ ರಾಜ್ಯಗಳು ಈಗಾಗಲೇ ವ್ಯಕ್ತಪಡಿಸಿವೆ. ಈ ಆತಂಕಕ್ಕೆ ಸ್ಪಂದಿಸುವ ಕೆಲಸ ಆಗಬೇಕಿದೆ. ಈ ಜನಗಣತಿಯ ನಂತರದಲ್ಲಿ ಮಹಿಳಾ ಮೀಸಲಾತಿ ಕಾಯ್ದೆಯನ್ನು ಅನುಷ್ಠಾನಕ್ಕೆ ತರುವ ಸಾಧ್ಯತೆ ಇರುವ ಕಾರಣಕ್ಕೆ, ಜನಗಣತಿ ಪ್ರಕ್ರಿಯೆಯು ಮಹಿಳೆಯರ ಪ್ರಾತಿನಿಧ್ಯದ ಮೇಲೆಯೂ ಪರಿಣಾಮ ಬೀರಲಿದೆ.

ದಿನದ ಟ್ವೀಟ್

ಪುನರ್‌ರಚನೆಗೆ ಒತ್ತಾಯಿಸಿ



ನೀವು ಬೆಂಗಳೂರಿನವರಾಗಿದ್ದರೆ, ಬೆಂಗಳೂರಿನ ಸೂಕ್ತ ಪುನರ್‌ರಚನೆಗೆ ಒತ್ತಾಯಿಸಬೇಕಿದೆ... ಕೆರೆಗಳ ನಗರವಾದ ಬೆಂಗಳೂರು ಈಗ ಗುಂಡಿಗಳು, ಸಂಚಾರ ಮತ್ತು ಜನದಟ್ಟಣೆಯ ನಗರವಾಗಿ ಮಾರ್ಪಟ್ಟಿದೆ... ಇಂದು ಈ ನಗರದಲ್ಲಿ ಯಾವುದೇ ಅಡೆತಡೆ ಇಲ್ಲದೆ ನಡೆದಾಡಲು ನೀವು ಯೋಗ್ಯ ಸ್ಥಳ ಹುಡುಕುವುದೂ ಕಷ್ಟವಾಗಿದೆ...

ಆಯುಷ್ ಸಂಘಿ, ಯುಪಿಎಸ್‌ಸಿ ಮಾರ್ಗದರ್ಶಕ

ಕಿಡಿನುಡಿ



ವಿಧಾನಸೌಧದ ಡಿಸಿಪಿಯು ಡಿಪಿಎಆರ್ ಕಾರ್ಯದರ್ಶಿಗೆ ಬರೆದ ಪತ್ರವನ್ನು ಸೋರಿಕೆ ಮಾಡಿದ್ದು ಯಾರು? ಸಚಿವ ಪರಮೇಶ್ವರ ವಿರುದ್ಧ ಇ.ಡಿಗೆ ದಾಖಲೆ ನೀಡಿದ್ದು ಯಾರು? ಟ್ರೇಲರ್‌ಗಳೇ ಇಷ್ಟು ಕುತೂಹಲಕಾರಿ ಆಗಿರುವಾಗ, ಅಕ್ಟೋಬರ್, ನವೆಂಬರ್‌ನಲ್ಲಿ ಬಿಡುಗಡೆ ಆಗಲಿರುವ ಸಿನಿಮಾ ಇನ್ನೆಷ್ಟು ಭಯಾನಕವಾಗಿರುತ್ತದೋ...

ಆರ್. ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 10-6-2000

• ಕೆಪಿಎಸ್‌ಸಿ ನಿರ್ಧಾರ ತಂದಿರುವ ಆತಂಕ

ಬೆಂಗಳೂರು, ಜೂನ್ 9– ಗ್ರಾಮೀಣ ಕೃಪಾಂಕ ನೀಡುವ ವಿಚಾರ ಇನ್ನೂ ಇತ್ಯರ್ಥವಾಗದಿರುವಾಗಲೇ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿಯ ಸಂದರ್ಶನ ನಡೆಸಲು ಮುಂದಾಗಿರುವುದು ಕೃಪಾಂಕ ನಿರೀಕ್ಷೆಯಲ್ಲಿದ್ದ ಅಭ್ಯರ್ಥಿಗಳನ್ನು ಆತಂಕಕ್ಕೆ ಈಡುಮಾಡಿದೆ.

ಸುಪ್ರೀಂ ಕೋರ್ಟ್ ಗ್ರಾಮೀಣ ಕೃಪಾಂಕ ರದ್ದುಪಡಿಸಿದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ಕುರಿತು ಅಧ್ಯಯನ ನಡೆಸಲು ಎರಡೂವರೆ ತಿಂಗಳ ಹಿಂದೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಾಮಕೃಷ್ಣ ನೇತೃತ್ವದ ಏಕಸದಸ್ಯ ಆಯೋಗವನ್ನು ರಚಿಸಿತು.

ನಂತರದ ಬೆಳವಣಿಗೆಗಳಲ್ಲಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ‘ಗ್ರಾಮೀಣ ಕೃಪಾಂಕ ನೀಡುವ ಕುರಿತು ಏಕಸದಸ್ಯ ಆಯೋಗ ವರದಿ ನೀಡುವವರೆಗೆ ನೇಮಕಾತಿ ಪ್ರಕ್ರಿಯೆಯನ್ನು ನಡೆಸುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದರು.

• ಭೀಷ್ಮ ಸಹಾನಿಗೆ ‘ಶಲಾಕ ಸಮ್ಮಾನ್’

ನವದೆಹಲಿ, ಜೂನ್ 9 – ಹಿಂದಿ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ ಖ್ಯಾತ ಬರಹಗಾರ ಭೀಷ್ಮ ಸಹಾನಿ ಅವರಿಗೆ ದೆಹಲಿ ಸರ್ಕಾರದ ಪ್ರತಿಷ್ಠಿತ ಪ್ರಶಸ್ತಿಯಾದ ‘ಶಲಾಕ ಸಮ್ಮಾನ್’ ಅನ್ನು ನೀಡಿ ಇಂದು ಗೌರವಿಸಲಾಯಿತು.

ಹಿಂದಿ ಅಕಾಡೆಮಿ ಸ್ಥಾಪಿಸಿರುವ ಈ ಪ್ರಶಸ್ತಿಯಲ್ಲಿ 1.11 ಲಕ್ಷ ರೂಪಾಯಿ ನಗದು ಕೂಡಾ ಸೇರಿರುತ್ತದೆ.

50 ವರ್ಷಗಳ ಹಿಂದೆ

ಮಂಗಳವಾರ, 10-6-1975

• ದ್ಯೂತ ವ್ಯೂಹ

ಬೆಂಗಳೂರು, ಜೂನ್ 9– ಜೂಜಾಟ, ಅದರಲ್ಲೂ ಬಾಜಿ ಕಟ್ಟುವ ಹವ್ಯಾಸ ಬೆಂಗಳೂರಿನಲ್ಲಿ ಹೆಚ್ಚುತ್ತಿದೆ ಎಂದರೆ ಸಂಬಂಧಪಟ್ಟವರು ಯಾರೇ ಆಗಲಿ ಕಣ್ಣು ಕೆರಳಿಸಬೇಕಾಗಿಲ್ಲ. ಜೂಜು, ಕುದುರೆ ಪಂದ್ಯಗಳಲ್ಲಿ ಆಸಕ್ತಿ ಇರುವವರಿಗೂ, ಬೆಂಗಳೂರಿಗೂ ಹತ್ತಿರದ ನಂಟು ಎಂದು ರಾಜ್ಯದ ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ಇತ್ತೀಚೆಗೆ ‘ಶುದ್ಧಾಚಾರ’ ದೃಷ್ಟಿ ಬೆಳೆಸಿಕೊಂಡಿರುವ ತಮಿಳುನಾಡು ಸರ್ಕಾರ ಕುದುರೆ ಪಂದ್ಯ ಮತ್ತು ಲಾಟರಿಯನ್ನು ಕೈಬಿಟ್ಟ ಪರಿಣಾಮವಾಗಿ ಮೋಜಿನ ಜೀವನ ನಡೆಸಬಯಸುವ ಅಲ್ಲಿನ ಜನರ ದೃಷ್ಟಿ ಬೆಂಗಳೂರಿನತ್ತ ಹರಿದಿದೆ. ಬೆಂಗಳೂರಿನಲ್ಲಿ ಜೂಜಿನ ಹವ್ಯಾಸ ವಿಪರೀತವಾಗಿ ಹೆಚ್ಚಿದೆ ಎಂಬುದಕ್ಕೆ ಇದೊಂದೇ ಕಾರಣವಲ್ಲ...

ಬಾಜಿ ಕಟ್ಟುವವರಿಗೆ ಇಲ್ಲಿ ‘ಪ್ರೋತ್ಸಾಹಕಾರಿ’ ವಾತಾವರಣ ಇದೆ. ಕಾನೂನುಬದ್ಧವಾಗಿ ನಡೆಸಲು ಅವಕಾಶ ಇದ್ದರೂ, ಕಾನೂನು ವಿರುದ್ಧವಾಗಿ ನಡೆಯುವುದೇ ಜಾಸ್ತಿ. ಕಾನೂನು ಪ್ರಕಾರ ನಡೆಸುವುದಾದರೆ, ಸರಿಯಾದ ಲೆಕ್ಕಪತ್ರ ಇರಿಸಿಕೊಳ್ಳುವ ಹಾಗೂ ತೆರಿಗೆ ಪಾವತಿ ಮಾಡುವ ಹೊಣೆಗಾರಿಕೆ ಅನಿವಾರ್ಯ. ಹೊಣೆಗಾರಿಕೆಯಿಂದ ನುಣುಚಿಕೊಳ್ಳಬಯಸುವವರೇ ಸಂಖ್ಯೆಯಲ್ಲಿ ಜಾಸ್ತಿ ಇರುವುದು ಸ್ವಾಭಾವಿಕ.

• ಕೃತಕ ಮಳೆ ಇನ್ನೂ ತೂಗುಯ್ಯಾಲೆಯಲ್ಲಿ

ಬೆಂಗಳೂರು, ಜೂನ್ 9– ಶರಾವತಿ ವಿದ್ಯುಜ್ಜನಕಗಳಿಗೆ ನೀರು ಹರಿಸುವ ಲಿಂಗನಮಕ್ಕಿ ಜಲಾಶಯ ಪ್ರದೇಶದಲ್ಲಿ ಕೃತಕ ವಿಧಾನಗಳಿಂದ ಮಳೆ ಸುರಿಸುವ ಯೋಜನೆ ಇನ್ನೂ ತೂಗುಯ್ಯಾಲೆಯಲ್ಲಿದೆ.

ಕೃತಕ ವಿಧಾನಗಳಿಂದ ಮಳೆ ಸುರಿಸಲು 12 ಲಕ್ಷ ರೂ.ಗಳ ಯೋಜನೆಯೊಂದನ್ನು ವಿದ್ಯುಚ್ಛಕ್ತಿ ಮಂಡಳಿ ರೂಪಿಸಿದೆ. ಒಂದೆರಡು ದಿನದಲ್ಲಿ ಮಳೆ ಬರದಿದ್ದರೆ, ಕೃತಕ ಮಳೆ ಯೋಜನೆ ಕಾರ್ಯಗತಗೊಳಿಸದಿದ್ದರೆ ಸರ್ಕಾರಕ್ಕೆ ಬೇರೆ ಮಾರ್ಗವೇ ಇಲ್ಲ.

ಪರಿಸರ ಉಳಿಸಿಕೊಂಡೂ ಅಭಿವೃದ್ಧಿ ಹೊಂದುವ ತಂತ್ರಗಳು ನಮಗೀಗ ಅಗತ್ಯ

ಅಭಿವೃದ್ಧಿಗೆ ಅಗ್ರಿವೋಲ್ಟಾಯಿಕ್ಸ್ ಮಾದರಿ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಭೂಮಿಯ ಬಿಸಿ ಹೆಚ್ಚುತ್ತಿರುವುದರ ಕುರಿತು ವಿಶ್ವದ ವಿವಿಧೆಡೆ ಗಂಭೀರ ಚರ್ಚೆ ನಡೆಯುತ್ತಿರುವಾಗಲೇ, ಬಲಾಢ್ಯ ದೇಶಗಳ ನಾಯಕರು ಹವಾಗುಣ ಬದಲಾವಣೆ ಆಗುತ್ತಿರುವುದೇ ಸುಳ್ಳೆಂದು ಪ್ರತಿಪಾದಿಸುತ್ತಾರೆ. ವಯಸ್ಸಾದವರಿಗೆ ಚಳಿ– ಥಂಡಿ ಬಾಧಿಸುವುದು ಹೆಚ್ಚು, ಅದನ್ನು ಹವಾಗುಣ ಬದಲಾವಣೆ ಎಂದು ಹೇಳಲಾಗುತ್ತದೆಯೇ ಎಂದು ನಮ್ಮ ರಾಜಕೀಯ ಮುಖಂಡರೊಬ್ಬರು ಶಾಲಾ ಮಕ್ಕಳ ಜೊತೆಗಿನ ಚರ್ಚೆಯಲ್ಲಿ ಕೇಳಿದ್ದರು.

ಮಾಗಿ ಕಾಲದ ಇಬ್ಬನಿ ಸುರಿಯುವ ದಿನಗಳಲ್ಲಿ ಮಲೆನಾಡಿನ ಭಾಗದಲ್ಲಿ ನೆಲಜೇಡಗಳು ಗೂಡು ಕಟ್ಟುವುದನ್ನು ಕಾಣಬಹುದು. ಡಿಸೆಂಬರ್ ತಿಂಗಳಿನ ಮುಂಜಾವುಗಳಲ್ಲಿ ಮಂಜು ಮುಸುಕಿ, ಮಲೆನಾಡಿನ ಗುಡ್ಡಗಳು ಸ್ವರ್ಗಸದೃಶ ಸೌಂದರ್ಯದಿಂದ ಕಂಗೊಳಿಸುತ್ತವೆ. ಜೇಡಗಳ ಬಲೆಯಲ್ಲಿ ಮುತ್ತು ಪೋಣಿಸಿದಂತೆ ಇಬ್ಬನಿ ಹನಿಗಳು ಹೊಳೆಯುತ್ತವೆ. ಮೇ ತಿಂಗಳ ಬಿರುಬೇಸಿಗೆಯಲ್ಲೂ ಮಲೆನಾಡಿನ ಮುಂಜಾವಿನಲ್ಲಿ ಮಂಜು ಮುಸುಕಿದ ವಾತಾವರಣ! ನೆಲಜೇಡದ ಜೈವಿಕ ಗಡಿಯಾರ ದಿಕ್ಕು ತಪ್ಪಿದೆ. ಅದು, ನೆಲದಲ್ಲಿ ಬಲೆ ಹೆಣೆಯುತ್ತಿದೆ. ಪೂರ್ಣಚಂದ್ರನ ಬೆಳದಿಂಗಳಲ್ಲಿ ಹೊಳೆಯುವ ನಕ್ಷತ್ರಗಳು ಸೂರ್ಯೋದಯವಾಗುತ್ತಿದ್ದಂತೆ ಕಾಲು ಕೀಳುತ್ತವೆ. ಪ್ರಖರವಾಗಿ ಹೊಳೆಯುವ ಧ್ರುವ ನಕ್ಷತ್ರ ಮಾತ್ರ ಸೂರ್ಯನ ಆಗಮನದ ನಂತರದಲ್ಲೂ ಕ್ಷೀಣವಾಗಿ ಹೊಳೆಯುತ್ತದೆ. ಮುಂಜಾವಿನ ಐದೂವರೆಗೆ ಹೊಳೆಯುವ ಧ್ರುವ ನಕ್ಷತ್ರ ಕೆಲವೇ ನಿಮಿಷಗಳಲ್ಲಿ ಮರೆಯಾಗುತ್ತದೆ. ಇದಕ್ಕೆ ಕಾರಣ, ಆಗಸದೆತ್ತರಕ್ಕೂ ಮುಸುಕುವ ಮಂಜು. ಇಂತಹ, ಸಾವಿರಾರು ವಿಲಕ್ಷಣ ವಿದ್ಯಮಾನಗಳು ಮಲೆನಾಡಿನಲ್ಲಿ ಘಟಿಸುತ್ತಿವೆ.

ಒಂದೇ ದಿನದಲ್ಲಿ ಮೂರು ಋತುಮಾನಗಳನ್ನೂ ಮಲೆನಾಡಿನಲ್ಲೀಗ ಕಾಣಬಹುದು. ಮುಂಜಾವಿನಲ್ಲಿ ಚಳಿ ಮತ್ತು ಮಂಜು. ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ ನಾಲ್ಕು ಗಂಟೆಯವರೆಗೆ ಬಿರು ಬಿಸಿಲು. ಸಂಜೆ ಸಿಡಿಲಬ್ಬರದ ಮಳೆ. ಹವಾಗುಣ ಬದಲಾವಣೆ ಪ್ರಕ್ರಿಯೆ ತಾರಕದಲ್ಲಿದೆ ಎಂದು ಪ್ರಕೃತಿ ನೀಡುತ್ತಿರುವ ಎಚ್ಚರಿಕೆಯ ಗಂಟೆ ಇದು ಎಂದು ಯಾರಿಗಾದರೂ ಅರ್ಥವಾಗುತ್ತದೆ.

ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್‌ನ ವೆಲ್ಲಿಂಗ್ಟನ್ ಸೌರ ವಿದ್ಯುದಾಗಾರದಲ್ಲಿ ಮೂರು ವರ್ಷಗಳಿಂದ ನಡೆಯುತ್ತಿದ್ದ ಒಂದು ಸಂಶೋಧನೆಯಲ್ಲಿ ಅಚ್ಚರಿಯ ಫಲಿತಾಂಶ ಹೊರಹೊಮ್ಮಿದೆ. ಆ ಸಂಶೋಧನೆಯ ಭಾಗವಾಗಿ, 1,700 ಮೆರಿನೋ ಮೇಕೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ, ಒಂದು ಮಂದೆಯನ್ನು ಸೌರ ಫಲಕಗಳ ಪರಿಧಿಯಲ್ಲಿ ಬೆಳೆಯುವ ಹುಲ್ಲು ಮತ್ತು ಸಸ್ಯಗಳನ್ನು ಮೇಯಲು ಬಿಡಲಾಯಿತು. ಇನ್ನೊಂದು ಮಂದೆಯನ್ನು ಸೌರ ಫಲಕಗಳ ಕೆಳಗೆ ಮೇಯಿಸಲಾಯಿತು. ಸೌರ ಫಲಕಗಳ ಅಡಿಯಲ್ಲಿ ಮೇಯ್ದ ಕುರಿಗಳ ಉಣ್ಣೆ ಉತ್ತಮ ಗುಣಮಟ್ಟದಿಂದ ಕೂಡಿತ್ತು. ಬಿಸಿಲಿನಲ್ಲಿ ಮೇಯುವ ಮೇಕೆಗಳ ಉಣ್ಣೆಯ ಗುಣಮಟ್ಟ ಕಡಿಮೆಯದಾಗಿತ್ತು ಹಾಗೂ ಗಾಳಿ ಬಂದಾಗ ಏಳುವ ದೂಳು ಸೇರಿಕೊಂಡು ಉಣ್ಣೆಯ ಗುಣಮಟ್ಟವನ್ನು ಕಡಿಮೆ ಮಾಡುತ್ತಿತ್ತು.

ಬಿಸಿಲಿನಲ್ಲಿ ಮೇಯುವ ಮೇಕೆಗಳಿಗೆ ಒಂದು ರೀತಿಯ ಪರಾವಲಂಬಿ ಕೀಟಗಳು ತೊಂದರೆ ನೀಡುತ್ತಿದ್ದವು. ನೆರಳಿನಲ್ಲಿ ಮೇಯುವ ಮೇಕೆಗಳಿಗೆ ಇಂತಹ ಸಮಸ್ಯೆಗಳು ಇರಲಿಲ್ಲ. ಸೌರ ಫಲಕಗಳಿಗೆ ಅಡ್ಡಿಯಾಗುವ ಹುಲ್ಲು ಮತ್ತು ಸಸ್ಯಗಳನ್ನು ಕತ್ತರಿಸಲಾಗುತ್ತಿತ್ತು ಮತ್ತು ಕೆಲವು ಬಾರಿ ಕಳೆನಾಶಕಗಳನ್ನು ಬಳಸುವುದು ಅನಿವಾರ್ಯ ಆಗಿತ್ತು. ಮೇಕೆಗಳು ಚೊಕ್ಕಟವಾಗಿ ಹುಲ್ಲು ಮೇಯಲು ತೊಡಗಿದ ಮೇಲೆ ನಿರ್ವಹಣಾ ವೆಚ್ಚ ಗಣನೀಯವಾಗಿ ಕಡಿಮೆಯಾಯಿತು. ಸಂಶೋಧಕರು ಇದಕ್ಕೆ ‘ಅಗ್ರಿವೋಲ್ಟಾಯಿಕ್ಸ್’ ಎಂದು ಕರೆದರು. ಅಭಿವೃದ್ಧಿ ಎನ್ನುವುದು ಪರಿಸರ, ಕೃಷಿ, ಮಾನವ ವಿರೋಧಿ ಎಂಬ ನಿಲುವನ್ನು ತಕ್ಕಮಟ್ಟಿಗೆ ಹೋಗಲಾಡಿಸಲು ‘ಅಗ್ರಿವೋಲ್ಟಾಯಿಕ್ಸ್ ಮಾದರಿ’ ನೆರವಾಗಿದೆಯೆಂದು ವಿಶ್ಲೇಷಿಸಲಾಗುತ್ತಿದೆ.

2020ರಲ್ಲಿ ತಮಿಳುನಾಡಿನ ಪೊದಕುಡಿ ಹಳ್ಳಿಯಲ್ಲಿ ಅಪರೂಪದ ಘಟನೆಯೊಂದು ನಡೆಯಿತು. 35 ಬೀದಿದೀಪಗಳಿಗೆ ಅಳವಡಿಸಲಾದ ಸ್ವಿಚ್ ಬೋರ್ಡಿನಲ್ಲೊಂದು ಚಿಟ್ಟು ಮಡಿವಾಳ ಹಕ್ಕಿಯೊಂದು ಗೂಡು ಕಟ್ಟಿಕೊಂಡಿತು. ಬೀದಿದೀಪ ಬೆಳಗಿಸುವ ಕರ್ತವ್ಯ ನಿರ್ವಹಿಸುತ್ತಿದ್ದ ಕರುಪ್ಪು ರಾಜನ ಗಮನಕ್ಕೆ ಹಕ್ಕಿಗೂಡು ಬಂತು. ಚಿಟ್ಟು ಮಡಿವಾಳಕ್ಕೆ ತೊಂದರೆ ಮಾಡಿದರೆ, ಅದು ಗೂಡು ಬಿಟ್ಟು ಹೋಗಬಹುದು ಎಂದು ಅಳುಕಿದ ಆತ, ಆ ಸಂಜೆ ಬೀದಿದೀಪ ಬೆಳಗಿಸಲಿಲ್ಲ.

ಹಳ್ಳಿಯ ವಾಟ್ಸ್‌ಆ್ಯಪ್ ಗುಂಪಿನಲ್ಲಿ ‘ಸ್ವಿಚ್ ಬೋರ್ಡ್‌ನಲ್ಲಿ ಹಕ್ಕಿಗಳು ಗೂಡು ಕಟ್ಟಿವೆ. ಅವು ಮೊಟ್ಟೆಯಿಟ್ಟು ಮರಿ ಮಾಡಿ, ಹಾರಿ ಹೋಗುವವರೆಗೂ ಬೀದಿದೀಪಗಳನ್ನು ಬೆಳಗಿಸದಿರಲು ಯೋಚಿಸಿದ್ದೇನೆ. ನಿಮ್ಮಗಳ ಸಹಕಾರವಿದ್ದರೆ ಈ ಕೆಲಸ ಸಾಧ್ಯ’ ಎಂದು ಕರುಪ್ಪು ರಾಜ ವಿನಂತಿ ಮಾಡಿಕೊಂಡ. ಹಳ್ಳಿಯ ಹೆಚ್ಚಿನವರು ಬೆಂಬಲ ನೀಡಿದರು. ಒಟ್ಟು 45 ದಿನಗಳ ಕಾಲ 35 ಬೀದಿದೀಪಗಳು ಬೆಳಗಲಿಲ್ಲ. ಮಾನವೀಯತೆಯ ಮೇರುಸದೃಶದ ಮಾದರಿ ಇದು.

ತೀರ್ಥಹಳ್ಳಿ ತಾಲ್ಲೂಕಿನ ಕೋಣಂದೂರಿನ ಮುಖ್ಯರಸ್ತೆಯನ್ನು ವಿಸ್ತರಣೆ ಮಾಡಬೇಕು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಿದೆ. ನಾಲ್ಕು ದೊಡ್ಡ ಮರಗಳಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಪಕ್ಷಿಗಳು ಇರುಳಿನಲ್ಲಿ ತಂಗುತ್ತವೆ. ಕಾಗೆ, ಬೆಳ್ಳಕ್ಕಿ, ಗಿಳಿಗಳಿಗೆ ಈ ಮರಗಳು ಆಶ್ರಯ ತಾಣಗಳು. ಶಿವಮೊಗ್ಗ ಮತ್ತು ತೀರ್ಥಹಳ್ಳಿಯ ಪರಿಸರಪ್ರೇಮಿಗಳು ಮರಗಳನ್ನು ಉಳಿಸಿಕೊಳ್ಳಬೇಕು ಎಂದು ಪಣ ತೊಟ್ಟರು. ಆದರೆ, ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿ ಅರಣ್ಯ ಇಲಾಖೆ ಇರಲಿಲ್ಲ; ಹೆದ್ದಾರಿ ಪ್ರಾಧಿಕಾರವೂ ಕಾಳಜಿ ತೋರಲಿಲ್ಲ. ಮರ ಕಡಿಯಲು ಅರಣ್ಯ ಇಲಾಖೆ ಅನುಮತಿ ನೀಡಿತು. ಆದರೆ, ಪರಿಸರಪ್ರೇಮಿಗಳು ಪಟ್ಟು ಬಿಡಲಿಲ್ಲ. ರಾತ್ರೋರಾತ್ರಿ ಹೋರಾಟ ಶುರುವಾಯಿತು. ಅರಣ್ಯ ಇಲಾಖೆಯ ಮುಖ್ಯಸ್ಥರಿಗೆ ಸರಣಿ ಮನವಿಗಳು ಸಲ್ಲಿಕೆಯಾದವು. ಬೆಳಗಾಗುವಷ್ಟರಲ್ಲಿ ಹೋರಾಟಕ್ಕೆ ಗೆಲುವು ದೊರೆತು, ಮರಗಳನ್ನು ಕಡಿಯಲು ನೀಡಿದ ಅನುಮತಿಯನ್ನು ಅರಣ್ಯ ಇಲಾಖೆಯು ಹಿಂದಕ್ಕೆ ತೆಗೆದುಕೊಂಡಿತು.



ವರಾಹಿ, ಶರಾವತಿ, ಕಾಳಿ, ಕಾವೇರಿ ನದಿ ಬಳಸಿಕೊಂಡು ರಾಜ್ಯದಲ್ಲಿ ಆರು ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ರಾಜ್ಯ ಸರ್ಕಾರ ಯೋಜಿಸಿದೆ. ಇದೇ ರೀತಿಯ ಒಟ್ಟು 52 ಯೋಜನೆಗಳನ್ನು ದೇಶದ ವಿವಿಧೆಡೆ ಜಾರಿ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. 2070ರ ಹೊತ್ತಿಗೆ ಭಾರತವು ಇಂಗಾಲ ಹೊರಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸಲು ಬದ್ಧವಾಗಿದೆ ಎಂದು ಘೋಷಿಸಿಕೊಂಡಿದೆ. ಈ ಗುರಿ ತಲುಪಲು ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆ ನಿಲ್ಲಿಸಬೇಕಾಗುತ್ತದೆ. ಅದಕ್ಕಾಗಿ ಪಂಪ್ಡ್ ಸ್ಟೋರೇಜ್ ಯೋಜನೆ ಸೂಕ್ತ ಎನ್ನುವುದು ವಿದ್ಯುತ್ ಉತ್ಪಾದಕರ ವಾದ. ಆದರೆ, ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೊಳಿಸುವಾಗ ಸಾವಿರಾರು ಎಕರೆ ಪ್ರಾಥಮಿಕ ಅರಣ್ಯ ನಾಶವಾಗುತ್ತದೆ. ಕಾಡುಗಳು ಈಗಾಗಲೇ ಬಹಳಷ್ಟು ಇಂಗಾಲವನ್ನು ತಮ್ಮ ಒಡಲಲ್ಲಿ ಇರಿಸಿಕೊಂಡಿವೆ. ಇನ್ನೂ ಸಾವಿರಾರು ವರ್ಷಗಳ ಕಾಲ ಇಂಗಾಲವನ್ನು ಹೀರಿಕೊಳ್ಳುವ ಕೆಲಸವನ್ನು ಅವು ಮಾಡುತ್ತವೆ. ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಪರಿಸರಸ್ನೇಹಿ ಎಂದು ಸುಳ್ಳು ಸುಳ್ಳೇ ಬಿಂಬಿಸಲಾಗುತ್ತಿದೆ. ಪಶ್ಚಿಮಘಟ್ಟಗಳಲ್ಲಿ ಅರಣ್ಯ ನಾಶ ಮಾಡಿ, ಬೇರೆಡೆ ಕಾಡು ಬೆಳೆಸುತ್ತೇವೆ ಎನ್ನುವುದೂ ಅತಾರ್ಕಿಕ. ಇಂಥ ಪ್ರಯತ್ನಗಳು ಇದುವರೆಗೂ ಎಲ್ಲೂ ಯಶಸ್ವಿಯಾದ ಉದಾಹರಣೆಗಳಿಲ್ಲ.

ಪಶ್ಚಿಮಘಟ್ಟಗಳಿರಲಿ ಅಥವಾ ಹಿಮಾಲಯವಿರಲಿ, ಅಲ್ಲಿರುವ ಪ್ರತಿ ಮರವೂ ನೈಸರ್ಗಿಕ ಸೇವೆ ನೀಡುವ ಯಂತ್ರದಂತೆ ಕೆಲಸ ಮಾಡುತ್ತದೆ. ಜೀವವೈವಿಧ್ಯದ ನೆಲೆಗಳನ್ನು ನಾಶ ಮಾಡುವುದು ಭೂಬಿಸಿಗೆ ನೇರವಾಗಿ ಕಾರಣವಾಗುತ್ತದೆ. ಪಾವಗಡದಲ್ಲಿ ರೈತರ ಕೃಷಿ ಜಮೀನುಗಳನ್ನು ಭೋಗ್ಯಕ್ಕೆ ಪಡೆದು ಸೌರ ವಿದ್ಯುತ್ ಫಲಕಗಳನ್ನು ಅಳವಡಿಸಲಾಗಿದೆ. ಇದರ ಬದಲಿಗೆ ಅಗ್ರಿವೋಲ್ಟಾಯಿಕ್ಸ್ ಮಾದರಿಯನ್ನು ಅನುಸರಿಸಬಹುದಿತ್ತು, ಕೇಂದ್ರೀಕೃತ ಸೌರ ವಿದ್ಯುತ್ ಉತ್ಪಾದನೆ ಮಾದರಿಗಿಂತ, ವಿಕೇಂದ್ರೀಕೃತ ಮಾದರಿಯನ್ನು ವ್ಯಾಪಕಗೊಳಿಸಿದಲ್ಲಿ 2070ಕ್ಕೂ ಮೊದಲೇ ನಾವು ಇಂಗಾಲ ಕಕ್ಕುವಿಕೆಯನ್ನು ಶೂನ್ಯಕ್ಕೆ ಇಳಿಸಬಹುದು.

ತಮಿಳುನಾಡಿನ ಪೊದಕುಡಿ ಹಳ್ಳಿಯವರು ಚಿಟ್ಟು ಮಡಿವಾಳ ಉಳಿಸಲು ತೋರಿದ ಕಾಳಜಿ ನಮ್ಮ ಅಧಿಕಾರಸ್ಥರಿಗೂ ಬರಲಿ, ಅಭಿವೃದ್ಧಿಯ ವ್ಯಾಖ್ಯಾನ ಬದಲಾಗಲಿ.

ಚುರುಮುರಿ



ಹರಕೆಯ ಕುರಿಗಳು

• ಸುಮಂಗಲಾ

‘ಈ ಸಲ ಕಪ್ ನಮ್ದೇ ಅಂತ ಕುಣೀತಿದ್ದಿರಿ... ಕಪ್ ಜೊತಿಗಿ ಕಪ್ಪುಚುಕ್ಕೆನೂ ಸಿಕ್ತು ಬಿಡು’ ಎಂದು ಬೆಕ್ಕಣ್ಣ ಹಂಗಿಸಿತು.

‘ಅದೇ ಮತ್ತೆ... ಈಗ ಒಬ್ಬರ ಮ್ಯಾಲೆ ಇನ್ನೊಬ್ಬರು ತಪ್ಪು ಹೊರೆಸತಾರೆ. ಯಾರನ್ನು ಅಮಾನತು ಮಾಡಿದ್ರೇನು, ಯಾರು ರಾಜೀನಾಮೆ ಕೊಟ್ಟರೇನು... ಹೋದ ಪ್ರಾಣ ಮಾತ್ರ ಬರಂಗಿಲ್ಲ’ ಎಂದೆ.

‘ಯಾರದೋ ಅಹಂಕಾರದ ತಪ್ಪು ನಿರ್ಧಾರಕ್ಕೆ ಇನ್ನಾರೋ ಹರಕೆಯ ಕುರಿ ಆಗತಾರೆ. ಕಪ್ ನಮ್ದೇ ಅಂತ ಕುಣಿಯೋದ್ರ ಜೊತಿಗಿ ಪ್ರಾಣನೂ ನಮ್ದೇ, ಜವಾಬ್ದಾರಿನೂ ನಮ್ದೇ ಅಂತ ಅಭಿಮಾನಿಗಳು ಯೋಚನೆ ಮಾಡಬೇಕಿತ್ತು’ ಎಂದು ಬೆಕ್ಕಣ್ಣ ಲೊಚಗುಟ್ಟಿತು.

‘ಅದ್ಸರಿ... ಆ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯವರು ಒಂದೇ ದಿನದ ಸಂಭ್ರಮಾಚರಣೆಗೆ ಸುಮಾರು ₹15 ಕೋಟಿ ಖರ್ಚು ಮಾಡ್ಯಾರಂತೆ. ಅಷ್ಟಕೊಂದು ರೊಕ್ಕ ಎದಕ್ಕೆ ಖರ್ಚು ಮಾಡಿರತಾರೆ?’ ಎಂದೆ ನಾನು ಕೋಪದಿಂದ.

‘ಕ್ರೀಡಾಂಗಣದ ಹೊರಗೆ ಕಾಲ್ತುಳಿತ, ಒಳಗೆ ಸಂಭ್ರಮಾಚರಣೆ! ಅವ್ರಿಗಿ ರೊಕ್ಕ, ಮಂದಿ ಪ್ರಾಣ ಎರಡೂ ಲೆಕ್ಕಕ್ಕಿಲ್ಲ. ಆರ್‌ಸಿಬಿ ಮಾಜಿ ಮಾಲೀಕ ಮಲ್ಯ ಆವಾಗ ನಾ ₹476 ಕೋಟಿ ಬಿಡ್ ಮಾಡಿ ಆರ್‌ಸಿಬಿ ಟೀಮ್ ಕಟ್ಟಿದ್ದೆ... ನಮ್ ಹುಡುಗ್ರು ಕಪ್ ಬೆಂಗ್ಳೂರಿಗೆ ತಂದಿದನ್ನು ಕಣ್ಣು ತುಂಬಿಕೊಳ್ಳೋ ಭಾಗ್ಯನೂ ನನಗಿಲ್ಲ ಅಂತ ಲಂಡನ್‌ವಳಗೆ ಕುಂತು ಕಣ್ಣೀರು ಮಿಡಿದಾನೆ’ ಎಂದಿತು ಬೆಕ್ಕಣ್ಣ.

‘ಇದೇ ನೆವದಾಗೆ ನಾಕು ತಾಸಿನ ಪಾಡ್‌ಕಾಸ್ಟ್ ರಿಲೀಸ್ ಮಾಡ್ಯಾನೆ. ನಾ ಕಳ್ಳನೂ ಅಲ್ಲ, ಸುಳ್ಳನೂ ಅಲ್ಲ, ವಂಚಕನಂತೂ ಅಲ್ಲವೇ ಅಲ್ಲ. ನಾ ಎಲ್ಲಿಗೂ ಓಡಿಯೂ ಹೋಗಿಲ್ಲ. ಕೆಲಸದ ಮ್ಯಾಲೆ ಲಂಡನ್ನಿಗೆ ಬಂದಂವ ಇಲ್ಲೇ ಉಳದೀನಿ ಅಂತ ವಾದ ಮಾಡ್ಯಾನೆ’.

‘ಹೂಂ ಮತ್ತೆ... ಈ ಕಲಿಯುಗದಾಗೆ ಕಳ್ಳ, ಸುಳ್ಳ, ವಂಚಕ, ಮಾನವೀಯತೆ, ಅಭಿಮಾನದಂತಹ ಪದಗಳ ಅರ್ಥವೇ ಬದಲಾಗೈತಿ. ಹೊಸ ಶಬ್ದಕೋಶ ರಚಿಸಬೇಕು’ ಎಂದು ಬೆಕ್ಕಣ್ಣ ತಲೆ ಮೇಲೆ ಕೈ ಹೊತ್ತಿತು.

ಸಂಗತ

ಕುಲಪಂಚಾಯಿತಿ: ಬೇಕು ನಿಯಂತ್ರಣ

ಕಾನೂನಿನ ಕಣ್ಣಿಗೆ ಮಣ್ಣೆರಚಿ ಕುಲಪಂಚಾಯಿತಿಗಳಿಂದ ಬಾಲ್ಯವಿವಾಹಕ್ಕೆ ಕುಮ್ಮಕ್ಕು

• ಸಿ.ಎಸ್. ದ್ವಾರಕಾನಾಥ್

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ರೆಡ್ಡಿಹಳ್ಳಿ ಗೊಲ್ಲರಹಟ್ಟಿಯಲ್ಲಿ ಬಾಲ್ಯವಿವಾಹದ ಪ್ರಯತ್ನ ನಡೆದಿದೆ. ಅಸಹಾಯಕ ಬಾಲಕಿ ‘ದಯವಿಟ್ಟು ನನ್ನನ್ನು ಕಾಪಾಡಿ... ಈ ಮದುವೆ ಬೇಡ’ ಎಂದು ನೆಲದ ಮೇಲೆ ಬಿದ್ದು ಹೊರಳಾಡಿ ಪ್ರತಿಭಟಿಸುತ್ತಿದ್ದರೂ ಬಿಡದೆ, ಬಾಲಕಿಯ ಕುಟುಂಬದವರು ಮತ್ತು ಬಂಧುಗಳು ಬಲವಂತವಾಗಿ ತಾಳಿ ಕಟ್ಟಿಸುವ ಪ್ರಯತ್ನ ಮಾಡಿದ್ದಾರೆ. ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಎಂಟನೇ ತರಗತಿ ವಿದ್ಯಾರ್ಥಿನಿಗೆ ಮದುವೆ ಮಾಡಲು ಮುಂದಾಗಿ, ಆಕೆ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿರುವ ಬಗ್ಗೆ ‘ಪ್ರಜಾವಾಣಿ’ ವರದಿ ಮಾಡಿದೆ.

ಬಾಲ್ಯವಿವಾಹಗಳನ್ನು ತಡೆಗಟ್ಟಲು ‘ಬಾಲ್ಯವಿವಾಹ ನಿಷೇಧ ಕಾಯ್ದೆ’ ಜಾರಿಯಲ್ಲಿದೆ. ಈ ಕಾಯ್ದೆಯಡಿ ಬಾಲ್ಯ ವಿವಾಹವು ಜಾಮೀನುರಹಿತ ಅಪರಾಧ. ಮಕ್ಕಳನ್ನು ಮದುವೆಯಾಗುವ ಯಾವುದೇ ವಯಸ್ಕ ವ್ಯಕ್ತಿ, ಬಾಲ್ಯ ವಿವಾಹವನ್ನು ಏರ್ಪಡಿಸುವ, ನೆರವೇರಿಸುವ ಮತ್ತು ಕುಮ್ಮಕ್ಕು ನೀಡುವ ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ಕಾಯ್ದೆಯಡಿ ತಪ್ಪಿತಸ್ಥರಾಗುತ್ತಾರೆ. ಮಗುವನ್ನು ಹೆತ್ತವರು, ಪೋಷಕರು ಅಥವಾ ಸಂರಕ್ಷಕರು ಮಾತ್ರವಲ್ಲದೆ ಬಾಲ್ಯವಿವಾಹವನ್ನು ತಡೆಯಲು ವಿಫಲರಾದವರು, ಬಾಲ್ಯವಿವಾಹದಲ್ಲಿ ಭಾಗ ವಹಿಸುವವರೂ ತಪ್ಪಿತಸ್ಥರಾಗುತ್ತಾರೆ.


ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ 8,998 ಬಾಲ್ಯವಿವಾಹಗಳನ್ನು ತಡೆಯಲಾಗಿದೆ. ಬಾಲ್ಯವಿವಾಹ ನೆರವೇರಿಸಲು ಮುಂದಾಗಿದ್ದ 1,303 ಜನರ ವಿರುದ್ಧ ದೂರು ದಾಖಲಾಗಿದೆ. ಈ ಪೈಕಿ 8 ಜನರಿಗೆ ಶಿಕ್ಷೆಯಾಗಿದೆ. ಇಷ್ಟಾದರೂ ಬಾಲ್ಯವಿವಾಹಗಳು ನಡೆಯುತ್ತಲೇ ಇವೆ.

ಬಾಲ್ಯವಿವಾಹಗಳು ಹೆಚ್ಚು ನಡೆಯುತ್ತಿರುವುದು ಅಲೆಮಾರಿ ಮತ್ತು ಆದಿವಾಸಿ ಬುಡಕಟ್ಟುಗಳಲ್ಲಿ. ಇದಕ್ಕೆ ಮೂಲ ಕಾರಣ ಕುಲಪಂಚಾಯಿತಿಗಳು. ಕಾನೂನಿನ ಭಯವಿಲ್ಲದೆ ಬಾಲ್ಯವಿವಾಹಗಳನ್ನು ಪೋಷಿಸುತ್ತಿರುವ ಕುಲಪಂಚಾಯಿತಿಗಳು, ತಮ್ಮ ಪ್ರಯತ್ನಕ್ಕೆ ಅಡ್ಡ ಬಂದವರನ್ನು ಕುಲದಿಂದ ಹೊರಗಿಡುತ್ತಿವೆ ಹಾಗೂ ಲಕ್ಷಾಂತರ ರೂಪಾಯಿ ದಂಡ ಹಾಕುತ್ತಿವೆ. ಅಸಹಾಯಕರಿಂದ ವಸೂಲಿ ಮಾಡಿದ ಹಣವನ್ನು ಕುಲಪಂಚಾಯಿತಿದಾರರು ಮೋಜು ಮಾಡಿ ಉಡಾಯಿಸುತ್ತಿದ್ದಾರೆ! ಈ ಕುರಿತ ರಾಯಚೂರು, ಬಾಗಲಕೋಟೆ, ಗದಗ, ಗೋಕಾಕ್‌ನಿಂದ ಹಿಡಿದು ಬೆಂಗಳೂರು ಬಳಿ ಇರುವ ಆನೇಕಲ್, ರಾಜರಾಜೇಶ್ವರಿ ನಗರದವರೆಗೂ ಅನೇಕ ಪ್ರಕರಣಗಳು ಬೆಳಕಿಗೆ ಬರುತ್ತಿವೆ.

ಅಲೆಮಾರಿ ಆದಿವಾಸಿ ಬುಡಕಟ್ಟುಗಳಲ್ಲಿ ಮೊದಲಿನಿಂದಲೂ ‘ಕುಲಪಂಚಾಯಿತಿ’, ‘ಕುಲಸಭಾ’ಗಳು ಅಸ್ತಿತ್ವದಲ್ಲಿವೆ. ನ್ಯಾಯಾಲಯಗಳು ಇಲ್ಲದ ಕಾಲದಲ್ಲಿ ಕುಲಪಂಚಾಯಿತಿಗಳು ಕುಲಸ್ಥರ ನಡುವಿನ ಜಗಳ, ವೈಷಮ್ಯಗಳ ವಿಚಾರಣೆ ಮಾಡಿ ನ್ಯಾಯದಾನ ನೀಡುತ್ತಿದ್ದವು. ತಪ್ಪಿತಸ್ಥರಿಗೆ ನ್ಯಾಯಬದ್ಧವಾಗಿ ದಂಡ ಹಾಕುತ್ತಿದ್ದವು. ಈ ಕುಲಪಂಚಾಯಿತಿಗಳ ಹಿರಿಯರು ನೈತಿಕತೆ ಕಾಪಾಡಿಕೊಂಡಿರುತ್ತಿದ್ದರು.

ಸ್ವಾತಂತ್ರ್ಯಾನಂತರ ಕುಲಪಂಚಾಯಿತಿಗಳು ನಿಧಾನವಾಗಿ ಅಸ್ತಿತ್ವ ಕಳೆದುಕೊಂಡು, ಅದರ ಜಾಗದಲ್ಲಿ ಭಾರತೀಯ ಕಾನೂನುಗಳು ಅಸ್ತಿತ್ವಕ್ಕೆ ಬಂದವು. ಕಾನೂನುಬದ್ಧವಾಗಿಯೂ ಕುಲಪಂಚಾಯಿತಿಗಳನ್ನು ರದ್ದುಪಡಿಸಲಾಯಿತು. ಆದರೆ, ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕುಲಪಂಚಾಯಿತಿಗಳನ್ನು ಗುಪ್ತವಾಗಿ ನಡೆಸುತ್ತ, ಅಸಹಾಯಕ ಮತ್ತು ಮುಗ್ಧ ಅಲೆಮಾರಿ ಆದಿವಾಸಿಗಳನ್ನು ಶೋಷಿಸತೊಡಗಿವೆ. ಆ ಸುಲಿಗೆ ಇನ್ನೂ ನಿಂತಿಲ್ಲ!

ಇತ್ತೀಚೆಗೆ ಕುಲಪಂಚಾಯಿತಿದಾರರೆಂಬ ಸುಲಿಗೆದಾರರ ಕಾಟ ವಿಪರೀತವಾಗುತ್ತಿದೆ. ಈ ಕುಲಪಂಚಾಯಿತಿಗಳ ಕುಮ್ಮಕ್ಕಿನಿಂದಲೇ ಬಾಲ್ಯವಿವಾಹಗಳು ನಿರಾತಂಕವಾಗಿ ನಡೆಯುತ್ತಿವೆ. ಸುಡುಗಾಡುಸಿದ್ದರು, ಕಾಡುಗೊಲ್ಲರು, ಬುಡ್ಗಜಂಗಮರು, ಬುಡಬುಡಕಿ, ಹಕ್ಕಿಪಿಕ್ಕಿ, ಸಿಂದೊಳ್ಳು, ಶಿಳ್ಳೇಕ್ಯಾತರು, ಗಂಟಿಚೋರ್, ದಕ್ಕಲಿಗ, ಕೋಲೆಬಸವ ಮುಂತಾದ ಸಮುದಾಯಗಳಲ್ಲಿ ಕುಲಪಂಚಾಯಿತಿ ಪದ್ಧತಿ ಇನ್ನೂ ಆಚರಣೆಯಲ್ಲಿದೆ.



ಎರಡು ವರ್ಷದ ಹಿಂದೆ ಗೋಕಾಕ್ ಬಳಿಯ ಘಟಪ್ರಭಾ ಪ್ರದೇಶದಲ್ಲಿ ನೆಲಸಿರುವ ಸುಡುಗಾಡುಸಿದ್ದರು ಲಕ್ಷಾಂತರ ರೂಪಾಯಿ ದಂಡ ಕಟ್ಟಲಾರದೆ, ಕುಲಪಂಚಾಯಿತಿಗಳ ಗೂಂಡಾಗಳಿಂದ ತೀವ್ರ ಹಲ್ಲೆಗೊಳಗಾಗಿ ಬೆಳಗಾವಿಯ ಆಸ್ಪತ್ರೆಯಲ್ಲಿ ಸಾಲು ಸಾಲಾಗಿ ಮಲಗಿದ್ದರು. ಹಲ್ಲೆಯಿಂದ ತಪ್ಪಿಸಿಕೊಂಡವರು ರಕ್ಷಣೆಗಾಗಿ ಬೆಂಗಳೂರಿನ ಕಡೆ ಓಡಿ ಬಂದಿದ್ದರು. ಈ ಕುರಿತು ಸ್ಥಳೀಯ ಪೊಲೀಸರಿಗೆ ದೂರು ನೀಡಿದರೂ ಪ್ರಯೋಜನವಾಗಲಿಲ್ಲ. ಕಡೆಗೆ ‘ಅಲೆಮಾರಿ ಬುಡಕಟ್ಟು ಮಹಾಸಭಾ’ ಮೂಲಕ ಮಾನವ ಹಕ್ಕುಗಳ ಆಯೋಗಕ್ಕೆ ಮೊರೆ ಹೋದಾಗ ಒಂದಷ್ಟು ಸಾಂತ್ವನ ಸಿಕ್ಕಿತು.

ಮಾನ್ವಿಯಲ್ಲಿ ಕುಲಪಂಚಾಯಿತಿದಾರರ ದೌರ್ಜನ್ಯಕ್ಕೆ ಸಿಕ್ಕ ಬುಡ್ಗಜಂಗಮ ಸಮುದಾಯದ ಸೋಮಣ್ಣ ಮೋತಿ ಕುಟುಂಬ ದಿಟ್ಟತನದಿಂದ ಮಾನ್ವಿ ಠಾಣೆಯಲ್ಲಿ ಎಫ್ಐಆರ್ ಮಾಡಿಸಿದರೂ ಪ್ರಯೋಜನವಾಗಲಿಲ್ಲ. ಗುಲ್ಬರ್ಗಾ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಹಾಕಿ ನಿರ್ದೇಶನ ಪಡೆದರೂ ಇಂದಿಗೂ ಕುಲಪಂಚಾಯಿತಿದಾರರ ದೌರ್ಜನ್ಯ ನಿಂತಿಲ್ಲ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳ ಬಿಸಿ ಕುಲಪಂಚಾಯಿತಿಗಳಿಗೆ ತಟ್ಟಲ್ಲ.

ಈ ಎರಡು ತಿಂಗಳಲ್ಲಿ ಬೆಂಗಳೂರಿನ ರಾಜರಾಜೇಶ್ವರಿ ನಗರದ ಬಂಗಾರಪ್ಪ ಲೇಔಟ್‌ನಲ್ಲಿ ಕನಿಷ್ಠ ಹತ್ತು ಬಾಲ್ಯವಿವಾಹಗಳು ಕುಲಪಂಚಾಯಿತಿದಾರರ ಸಮ್ಮುಖದಲ್ಲೇ ನಡೆದಿವೆ. ಇದರ ಬಗ್ಗೆ ದೂರು ನೀಡಿದ ಪರಿಣಾಮ, ಒಂದು ಜೋಡಿ ಬಾಲವಧು ವರರನ್ನು ಮಕ್ಕಳ ರಕ್ಷಣಾ ಕೇಂದ್ರದಲ್ಲಿ ಇರಿಸಿದ್ದಾರೆ. ಆದರೆ, ದೂರು ನೀಡಿದ ತಮಟಂ ಶ್ರೀನಿವಾಸ್ ಎನ್ನುವ ದೂರುದಾರನಿಗೆ ಕುಲಪಂಚಾಯಿತಿದಾರರು ₹50 ಸಾವಿರ ದಂಡ ಹಾಕಿದ್ದಾರೆ.

‘ಬಾಲ್ಯವಿವಾಹ ಸಹಿಸಲ್ಲ’ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ, ಬಾಲ್ಯವಿವಾಹಗಳನ್ನು ಪೋಷಿಸುತ್ತಿರುವ ಕುಲಪಂಚಾಯಿತಿಗಳನ್ನು ನಿಯಂತ್ರಿಸಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದು ದುರದೃಷ್ಟಕರ.

ವಾಚಕರ ವಾಣಿ

ಸೋಜಿಗದ ಸಂಗತಿ

ಮಡಿಕೇರಿಯಲ್ಲಿ ನಡೆದ ಸಂವಾದದಲ್ಲಿ ಅನುವಾದಕಿ ದೀಪಾ ಭಾಸ್ತಿ ಅವರು ಅನೇಕ ಭಾರತೀಯ ಭಾಷಿಕರಿಂದ ‘ಹಾರ್ಟ್ ಲ್ಯಾಂಪ್’ (ಮೂಲ: ಬಾನು ಮುಷ್ತಾಕ್ ಅವರ ‘ಎದೆಯ ಹಣತೆ’) ಕೃತಿಯನ್ನು ತಮ್ಮ ಭಾಷೆಗಳಿಗೆ ಅನುವಾದಿಸಲು ಕೋರಿಕೆ ಬರುತ್ತಿದೆ. ಮಲಯಾಳ, ಅಸ್ಸಾಮಿ ಮತ್ತು ಒಡಿಶಾ ಭಾಷೆಗೆ ಅನುವಾದಿಸಲು ಅನುಮತಿ ನೀಡಿರುವೆ (ಪ್ರ.ವಾ., ಜೂನ್ 9) ಎಂದು ಹೇಳಿದ್ದನ್ನು ಓದಿ ಅಚ್ಚರಿಯಾಯಿತು. ಇದುವರೆಗೆ ಕನ್ನಡದ ನೂರಾರು ಪುಸ್ತಕಗಳು ನೇರವಾಗಿ ಮಲಯಾಳ ಭಾಷೆಗೆ ಅನುವಾದಗೊಂಡಿವೆ. ಅವು ಯಾವುವೂ ಇಂಗ್ಲಿಷ್ ಮೂಲಕ ಹೋಗಿಲ್ಲ.

ಭಾರತದ ಇತರ ರಾಜ್ಯಗಳಲ್ಲೂ ಕನ್ನಡದಿಂದ ನೇರವಾಗಿ ಆ ರಾಜ್ಯದ ಭಾಷೆಗೆ ಅನುವಾದಿಸಬಲ್ಲ ಕನ್ನಡಿಗರಿದ್ದಾರೆ. ಬುಕರ್ ಪ್ರಶಸ್ತಿಯು ಬಾನು ಮುಷ್ತಾಕ್ ಅವರ ಕಥೆಗಳಿಗೆ ಹೆಚ್ಚಿನ ಜನಪ್ರಿಯತೆ ತಂದುಕೊಟ್ಟಿರುವುದು ನಿಜವಾದರೂ ಅವರ ಕೃತಿಯನ್ನು ಇತರ ಭಾರತೀಯ ಭಾಷೆಗಳಿಗೆ ಅನುವಾದಿಸಲು ಇಂಗ್ಲಿಷ್ ಅನುವಾದಕರ ಅನುಮತಿ ಪಡೆದು ಆ ಭಾಷೆಯ ಮೂಲಕ, ತಮ್ಮ ಭಾಷೆಗಳಿಗೆ ತರುವ ಸ್ಥಿತಿ ಬಂದಿರುವುದು ಒಂದು ದುರಂತವೇ ಸರಿ!

ಲಕ್ಷ್ಮಿ ಚಂದ್ರಶೇಖರ್, ಬೆಂಗಳೂರು

ಪೊಲೀಸರ ಆತ್ಮಸ್ಥೈರ್ಯ ಕುಗ್ಗಿಸುವುದು ಬೇಡ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಸಂಭ್ರಮಾಚರಣೆ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಅಮಾಯಕರು ಜೀವ ಕಳೆದುಕೊಂಡಿದ್ದಾರೆ. ಹಲವು ಮಂದಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಬೆಂಗಳೂರಿನ ಪೊಲೀಸ್ ಕಮಿಷನರ್ ಸೇರಿ ಕೆಲವು ಅಧಿಕಾರಿಗಳ ವಿರುದ್ಧ ಅಮಾನತು ಅಸ್ತ್ರ ಪ್ರಯೋಗಿಸಿದೆ. ಇದಕ್ಕೆ ಬಹಳಷ್ಟು ಟೀಕೆಗಳು ವ್ಯಕ್ತವಾಗುತ್ತಿವೆ. ಪೊಲೀಸ್ ಇಲಾಖೆಯಲ್ಲೂ ಅಸಮಾಧಾನದ ಹೊಗೆ ಎದ್ದಿದೆ.

ವಿಜಯಿಯಾದ ಆರ್‌ಸಿಬಿ ತಂಡಕ್ಕೆ ಸರ್ಕಾರದಿಂದಲೇ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಹೀಗಿದ್ದರೂ ಪೊಲೀಸರನ್ನಷ್ಟೇ ಹೊಣೆ ಮಾಡುವುದು ಎಷ್ಟು ಸರಿ. ಮುಖ್ಯಮಂತ್ರಿಯವರ ನಿರ್ಧಾರವು ಪೊಲೀಸರ ಆತ್ಮಸ್ಥೈರ್ಯವನ್ನು ಕುಗ್ಗಿಸಲಿದೆ. ಅವರನ್ನಷ್ಟೇ ಬಲಿಪಶು ಮಾಡುವುದು ಸರಿಯಲ್ಲ. ಕೂಡಲೇ, ಅಮಾನತು ಆದೇಶವನ್ನು ಹಿಂಪಡೆಯುವುದು ಉತ್ತಮ.

ಕೆ.ವಿ. ವಾಸು, ಮೈಸೂರು

ಅಚ್ಚರಿ ತಂದ ಪ್ರಧಾನಿ ಮೌನ

ಬುಕರ್ ಪ್ರಶಸ್ತಿಗೆ ಭಾಜನರಾದ ಲೇಖಕಿ ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿ ಅವರಿಗೆ ದೇಶದ ಅನೇಕ ಗಣ್ಯರು ಶುಭಾಶಯ ಕೋರಿ ಅವರ ಸಾಧನೆಗೆ ಮೆಚ್ಚುಗೆ ಸೂಚಿಸಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು, ಭಾರತ ಹಾಗೂ ಕರ್ನಾಟಕಕ್ಕೆ ಹೆಮ್ಮೆ ತಂದಿರುವ ಈ ಇಬ್ಬರಿಗೂ ಪತ್ರ ಬರೆದು ಅಭಿನಂದನೆ ಸಲ್ಲಿಸಿಲ್ಲ. ಕೊನೆಯ ಪಕ್ಷ ತಮ್ಮ ‘ಎಕ್ಸ್’ ಖಾತೆ ಮೂಲಕವೂ ಶುಭ ಕೋರಲಿಲ್ಲ.

ದೇಶದ ಯಾವುದೇ ಪ್ರಜೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಣನೀಯ ಸಾಧನೆಗೈದ ವೇಳೆ ಪ್ರಧಾನಿ ಅವರು, ಖುದ್ದಾಗಿ ದೂರವಾಣಿ ಕರೆ ಮಾಡಿ ಅಭಿನಂದಿಸಿದ್ದಾರೆ. ಕ್ರೀಡೆಯಲ್ಲಿ ಸೋತಾಗಲೂ ಕರೆ ಮಾಡಿ ಆತ್ಮವಿಶ್ವಾಸ ತುಂಬಿರುವ ನಿದರ್ಶನವಿದೆ. ಅವರ ಈ ನಡೆಯು ಅಭಿನಂದನಾರ್ಹ.

ಸದ್ಯ ಮೋದಿ ಅವರು ನಾರಿಶಕ್ತಿ ಅಭಿಯಾನದ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದಾರೆ. ಆದರೆ, ಬುಕರ್ ಪ್ರಶಸ್ತಿ ಪಡೆಯುವ ಮೂಲಕ ಜಾಗತಿಕ ಮಟ್ಟದಲ್ಲಿ ಭಾರತದ ಕೀರ್ತಿ ಪತಾಕೆ ಹಾರಿಸಿದ ಈ ಮಹಿಳೆಯರ ಸಾಧನೆಯನ್ನು ಶ್ಲಾಘಿಸುವ ವಿಷಯದಲ್ಲಿ ಪ್ರಧಾನಿ ಅವರು ಮೌನ ತಳೆದಿರುವುದು ಏಕೆ ಎಂಬುದು ಅರ್ಥವಾಗುತ್ತಿಲ್ಲ.

ಸುರೇಂದ್ರ ಪೈ, ಭಟ್ಕಳ

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಸುಧಾರಣೆ ಕಾಣಲಿ...

‘ಅಭಿವೃದ್ಧಿ, ಜಿಡಿಪಿ ಮತ್ತು ಜನಹಿತ’ ಕುರಿತ (ವಿಶ್ಲೇಷಣೆ, ಜೂನ್ 9) ಲೇಖನವು ದೇಶದ ಒಟ್ಟು ಆಂತರಿಕ ಉತ್ಪಾದನೆ ಬಗೆಗಿನ ವಾಸ್ತವಾಂಶವನ್ನು ತೆರೆದಿಟ್ಟಿದೆ. ಈ ವರ್ಷದ ಅಂತ್ಯಕ್ಕೆ ಭಾರತವು ಜಪಾನ್ ದೇಶವನ್ನು ಹಿಂದಿಕ್ಕಿ ಜಾಗತಿಕ ಮಟ್ಟದಲ್ಲಿ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ವರದಿ ಹೇಳಿದೆ.

ಆದರೆ ಶಿಕ್ಷಣ, ತಲಾ ಆದಾಯ, ಪೌಷ್ಟಿಕತೆ ಆಧಾರದ ಮೇಲೆ ಲೆಕ್ಕ ಹಾಕುವ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತವು 130ನೇ ಸ್ಥಾನದಲ್ಲಿರುವುದು ಬೇಸರ ತಂದಿದೆ. ಜಿಡಿಪಿ ಗಾತ್ರ ಹೆಚ್ಚಾದ ಮಾತ್ರಕ್ಕೆ ದೇಶದ ಜನಸಾಮಾನ್ಯರ ಜೀವನಮಟ್ಟ ಸುಧಾರಿಸುವುದಿಲ್ಲ. ಸಂಪತ್ತು ಶ್ರೀಮಂತರ ಬಳಿ ಕ್ರೋಡೀಕರಣವಾಗುತ್ತಲೇ ಇದೆ.

ಭಾರತವು ಆರ್ಥಿಕತೆ ಸ್ಥಾನದಲ್ಲಿ ಹಂತ ಹಂತವಾಗಿ ಮೇಲಕ್ಕೇರಿದರೆ ಸಾಲದು. ಶಿಕ್ಷಣ, ನಿರುದ್ಯೋಗ, ಅಪೌಷ್ಟಿಕತೆ, ಬಡತನ ನಿರ್ಮೂಲನೆಗೆ ಒತ್ತು ನೀಡಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲೂ ಸುಧಾರಣೆ ಕಾಯ್ದುಕೊಳ್ಳಬೇಕಿದೆ.

ಶಾಂತಕುಮಾರ್, ಸರ್ಜಾಪುರ

ಪೂರ್ಣಾವಧಿ ಅಧಿಕಾರಿ ನೇಮಿಸಿ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಪೂರ್ಣಾವಧಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಇಲ್ಲ. ಇದರಿಂದ ಮಂಡಳಿಯ ಕೆಲಸಗಳು ಸರಾಗವಾಗಿ ಆಗದೆ ಜನರು ಪರದಾಡುವಂತಾಗಿದೆ. ಸದ್ಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯ ನಿರ್ವಹಣಾಧಿಕಾರಿಗೆ ಹೆಚ್ಚುವರಿಯಾಗಿ ವಕ್ಫ್ ಮಂಡಳಿಯ ಉಸ್ತುವಾರಿಯನ್ನು ನೀಡಲಾಗಿದೆ.

ಮತ್ತೊಂದೆಡೆ ಮಂಡಳಿಯ ಸಭೆಗಳು ನಿಯಮಿತವಾಗಿ ನಡೆಯುತ್ತಿಲ್ಲ. ರಾಜ್ಯ ಸರ್ಕಾರ ಈ ಬಗ್ಗೆ ಗಮನಹರಿಸಿ ಪೂರ್ಣಾವಧಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ನೇಮಕಕ್ಕೆ ಕ್ರಮಕೈಗೊಳ್ಳಬೇಕಿದೆ.

ಅಬ್ದುಲ ರಝಾಕ ಡಿ. ಟಪಾಲ, ಕೆರೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅಡಿಕೆ ಹಾಳೆ ತಟ್ಟೆಗೆ ಅಮೆರಿಕ ನಿರ್ಬಂಧ

ತಯಾರಿಕೆ ಸ್ಥಗಿತ ಬದುಕಿಗೆ ಹೊಡೆತ

ಪರಿಸರಸ್ನೇಹಿ ಎಂದು ಕರೆಯಲಾಗುತ್ತಿದ್ದ ಅಡಿಕೆ ಹಾಳೆ ತಟ್ಟೆ, ಲೋಟಗಳ ತಯಾರಿಕಾ ಉದ್ಯಮಕ್ಕೆ ಈಗ ಸಂಕಷ್ಟ ಎದುರಾಗಿದೆ. ಅಮೆರಿಕದ ಆಹಾರ ಮತ್ತು ಔಷಧ ಸಂಸ್ಥೆಯು ಅಡಿಕೆ ಹಾಳೆಯಿಂದ ಮಾಡಿದ ತಟ್ಟೆ ಸೇರಿದಂತೆ ಇನ್ನಿತರ ಉತ್ಪನ್ನಗಳ ಆಮದಿಗೆ ನಿರ್ಬಂಧ ವಿಧಿಸಿದೆ. ಇದರಿಂದ ಕರ್ನಾಟಕದ ಕರಾವಳಿ, ಮಲೆನಾಡು ಜಿಲ್ಲೆಗಳ ಸಾವಿರಾರು ರೈತರ ಆದಾಯಕ್ಕೆ ಪೆಟ್ಟು ಬಿದ್ದಿದೆ. ಅಲ್ಲದೇ, ಸಾವಿರಾರು ಸಣ್ಣ ಉದ್ಯಮಿಗಳು, ಕಾರ್ಮಿಕರಿಗೆ ಕೋಟ್ಯಂತರ ರೂಪಾಯಿ ನಷ್ಟ ಉಂಟಾಗುತ್ತಿದೆ. ಇವರೆಲ್ಲರೂ ಈಗ ತಮಗೊದಗಿರುವ ಸಂಕಷ್ಟ ನಿವಾರಣೆಗಾಗಿ ಕೇಂದ್ರ ಸರ್ಕಾರದತ್ತ ನೋಡುತ್ತಿದ್ದಾರೆ



ಪ್ರಜಾವಾಣಿ ವಾರ್ತೆ

ಏಕಬಳಕೆಯ ಅಡಿಕೆ ಹಾಳೆಯ ತಟ್ಟೆ ಹಾಗೂ ಲೋಟಗಳನ್ನು ಪರಿಸರ ಸಂರಕ್ಷಣೆಯ ದೃಷ್ಟಿಯಿಂದಲೂ, ಜನರ ಆರೋಗ್ಯದ ದೃಷ್ಟಿಯಿಂದಲೂ ಪ್ಲಾಸ್ಟಿಕ್‌ಗೆ ಅತ್ಯುತ್ತಮ ಪರ್ಯಾಯ ಎಂದೇ ಪರಿಗಣಿಸಲಾಗುತ್ತಿದೆ. ಬಳಸಿ ಬಿಸಾಡಿದ ನಂತರ ಮಣ್ಣಿನಲ್ಲಿ ಕೊಳೆತು ಗೊಬ್ಬರವಾಗುತ್ತಿದ್ದ ಇವುಗಳ ಬಳಕೆ ದೇಶದಲ್ಲಿ ಹೆಚ್ಚುತ್ತಿದ್ದು, ವಿದೇಶಗಳಲ್ಲೂ ಜನಪ್ರಿಯವಾಗಿವೆ. ಕರ್ನಾಟಕದ ದಾವಣಗೆರೆ, ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ತುಮಕೂರು ಜಿಲ್ಲೆಗಳ ಸಾವಿರಾರು ಮಂದಿ ಅಡಿಕೆ ಹಾಳೆಗಳಿಂದ ತಟ್ಟೆ, ಲೋಟ, ಬಟ್ಟಲುಗಳನ್ನು ತಯಾರಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಕೆಲವರು ಇದನ್ನು ಉದ್ಯಮ ಮಾಡಿಕೊಂಡಿದ್ದರೆ, ಅನೇಕ ಯುವಕ, ಯುವತಿಯರು ಇದನ್ನು ಗೃಹ ಕೈಗಾರಿಕೆಯನ್ನಾಗಿಯೂ ಮಾಡಿಕೊಂಡಿದ್ದಾರೆ. ಆದರೆ, ಅಮೆರಿಕ ಸರ್ಕಾರದ ಒಂದು ನಿರ್ಧಾರ ಈ ಉದ್ಯಮದ ಬುಡವನ್ನು ಅಲುಗಾಡಿಸುತ್ತಿದೆ.

ಅಮೆರಿಕದ ಆರೋಗ್ಯ ಇಲಾಖೆಯ ಅಡಿಯಲ್ಲಿ ಬರುವ ಆಹಾರ ಮತ್ತು ಔಷಧ ಸಂಸ್ಥೆಯು (ಎಫ್‌ಡಿಎ) ಅಡಿಕೆ ಹಾಳೆಗಳಿಂದ ಮಾಡಿದ ತಟ್ಟೆ, ಲೋಟ, ಬಟ್ಟಲುಗಳನ್ನು ನಿರ್ಬಂಧಿಸಿದೆ. ಈ ಕುರಿತು ಮೇ 8ರಂದು ಆಮದುದಾರರು, ವಿತರಕರು ಮತ್ತು ಚಿಲ್ಲರೆ ಮಾರಾಟಗಾರರಿಗೆ ಎಚ್ಚರಿಕೆ ರವಾನಿಸಿದೆ. ಇದರಿಂದಾಗಿ ಭಾರತದ, ಅದರಲ್ಲೂ ಮುಖ್ಯವಾಗಿ ಕರ್ನಾಟಕದ ಸಾವಿರಾರು ಜನರ ಆದಾಯಕ್ಕೆ ಪೆಟ್ಟು ಬಿದ್ದಿದೆ.

‘ಅಡಿಕೆ ಹಾಳೆಗಳಿಂದ ಮಾಡಿದ ತಟ್ಟೆ, ಲೋಟಗಳು ನಿರ್ದಿಷ್ಟ ಸಂದರ್ಭಗಳಲ್ಲಿ ವಿಷಕಾರಿ ರಾಸಾಯನಿಕಗಳನ್ನು (ಆಲ್ಕಲಾಯ್ಡ್‌ಗಳು) ಬಿಡುಗಡೆ ಮಾಡುತ್ತವೆ. ಅವು ಆಹಾರ, ಪಾನೀಯದೊಂದಿಗೆ ಬೆರೆತು, ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಕ್ಯಾನ್ಸರ್ ಸೇರಿದಂತೆ ಹಲವು ರೀತಿಯ ಕಾಯಿಲೆಗಳಿಗೆ ಕಾರಣವಾಗುತ್ತವೆ ಎನ್ನುವುದು ವಿಜ್ಞಾನಿಗಳ ಅಧ್ಯಯನದಿಂದ ತಿಳಿದುಬಂದಿದೆ. ಅವು ಕಾನೂನಿನ ಸುರಕ್ಷಾ ಮಾನದಂಡಗಳಿಗೆ (ಜಿಆರ್‌ಎಎಸ್) ತಕ್ಕಂತೆ ಇಲ್ಲ. ಹೀಗಾಗಿ ಅವುಗಳನ್ನು ಅಮೆರಿಕದಲ್ಲಿ ಮಾರಾಟ ಮಾಡಲು ಅವಕಾಶ ಇರುವುದಿಲ್ಲ’ ಎಂದು ಎಫ್‌ಡಿಎ ಪ್ರಕಟಿಸಿದೆ.

ರಾಜ್ಯದ ಅಡಿಕೆ ತಟ್ಟೆ, ಲೋಟಗಳಿಗೆ ಅಮೆರಿಕ ಉತ್ತಮ ಮಾರುಕಟ್ಟೆಯಾಗಿತ್ತು. ಅಮೆರಿಕದ ಹಲವು ಕಂಪನಿಗಳು ಕರ್ನಾಟಕದಿಂದ ಪ್ರತಿವರ್ಷ ಕೋಟ್ಯಂತರ ತಟ್ಟೆ, ಲೋಟ, ಬಟ್ಟಲುಗಳನ್ನು ತರಿಸಿಕೊಳ್ಳುತ್ತಿದ್ದವು. ಅವುಗಳ ಗುಣಮಟ್ಟದ ಬಗ್ಗೆ ಅಲ್ಲಿನ ಗ್ರಾಹಕರಿಂದಲೂ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ ಎಂದೇ ಕಂಪನಿಗಳು ಸಂತಸ ವ್ಯಕ್ತಪಡಿಸಿದ್ದವು. ಆದರೆ, ಈಗ ಪರಿಸ್ಥಿತಿ ಬದಲಾಗಿದ್ದು, ಅಡಿಕೆ ತಟ್ಟೆಗಳು ಅನಾರೋಗ್ಯಕಾರಿ ಎನ್ನುತ್ತಿದೆ ಅಮೆರಿಕ.


ಇದರಿಂದಾಗಿ ಅಮೆರಿಕಕ್ಕೆ ಮಾಡಲಾಗುತ್ತಿದ್ದ ರಫ್ತು ನಿಂತು ಹೋಗಿದೆ. ಹಾಳೆ ತಟ್ಟೆ ತಯಾರಕರು ದೇಶೀಯ ಮತ್ತು ಸ್ಥಳೀಯ ಮಾರುಕಟ್ಟೆಯನ್ನೇ ಅವಲಂಬಿಸಬೇಕಾಗಿದೆ. ದೊಡ್ಡ ಪ್ರಮಾಣದಲ್ಲಿ ಹಾಳೆ ತಟ್ಟೆ ತಯಾರಿಸುತ್ತಿದ್ದ ಘಟಕಗಳು ಉತ್ಪಾದನೆಯನ್ನು ಗಣನೀಯ ಪ್ರಮಾಣದಲ್ಲಿ ಇಳಿಸಿವೆ. ಮನೆಗಳಲ್ಲೇ ಸಣ್ಣ ಪ್ರಮಾಣದಲ್ಲಿ ತಯಾರಿಸುತ್ತಿದ್ದವರು ಬೇಡಿಕೆ ಇಲ್ಲದೆ ತಟ್ಟೆ, ಲೋಟಗಳ ತಯಾರಿಕೆಯನ್ನು ಸ್ಥಗಿತಗೊಳಿಸಿದ್ದಾರೆ. ಸಾವಿರಾರು ಕುಶಲ ಕಾರ್ಮಿಕರಿಗೆ ಕೆಲಸ ಇಲ್ಲದಂತಾಗುವ ಆತಂಕ ಬಂದೊದಗಿದೆ. ಅಡಿಕೆ ಬೆಳೆಗಾರರು ಕೂಡ ಹಾಳೆಗಳನ್ನು ಮಾರಾಟ ಮಾಡಿ ಆದಾಯಗಳಿಸುತ್ತಿದ್ದರು, ಅದಕ್ಕೂ ಈಗ ಕುತ್ತು ಬಂದಿದೆ.

ಪೂರಕ ಮಾಹಿತಿ ವಿವಿಧ ಬ್ಯೂರೊಗಳಿಂದ

₹3,500 ಕೋಟಿ	₹2,500 ಕೋಟಿ	₹7,000 ಕೋಟಿ	600
ಜಾಗತಿಕವಾಗಿ ಅಡಿಕೆ ಹಾಳೆಯ ತಟ್ಟೆ ಹಾಗೂ ಇತರ ಉತ್ಪನ್ನಗಳ ಮಾರುಕಟ್ಟೆ ಮೌಲ್ಯ	ಅಡಿಕೆ ಹಾಳೆ ತಟ್ಟೆ ಹಾಗೂ ಇತರ ಉತ್ಪನ್ನಗಳ ಮಾರುಕಟ್ಟೆ ಮೌಲ್ಯದಲ್ಲಿ ಭಾರತದ ಪಾಲು	2030ರ ವೇಳೆಗೆ ಅಡಿಕೆ ಹಾಳೆ ತಟ್ಟೆ ಹಾಗೂ ಇತರ ಉತ್ಪನ್ನಗಳ ಜಾಗತಿಕ ಮಾರುಕಟ್ಟೆ ಮೌಲ್ಯ	ಕರ್ನಾಟಕದಲ್ಲಿ ಹಾಳೆ ತಟ್ಟೆ ತಯಾರಿಕೆಯಲ್ಲಿ ತೊಡಗಿರುವ ಉದ್ಯಮಿಗಳು



ನವ ಮಂಗಳೂರು ಬಂದರಿನಿಂದ ಹಾಳೆ ತಟ್ಟೆ, ಇತರ ಉತ್ಪನ್ನಗಳ ರಫ್ತು



ಸಿಪಿಸಿಆರ್‌ಐನಿಂದ ಸಂಶೋಧನೆ



ಅಡಿಕೆ ಕ್ಯಾನ್ಸರ್‌ಕಾರಕವಲ್ಲ ಎಂಬುದನ್ನು ದೃಢಪಡಿಸುವ ನಿಟ್ಟಿನಲ್ಲಿ ಸಂಶೋಧನೆ ಅಗತ್ಯವೆಂದು ಕ್ಯಾಂಪ್ಕೊ ಹಾಗೂ ಅಡಿಕೆ ವಹಿವಾಟು ನಡೆಸುವ ರಾಜ್ಯದ ಇತರ ಸಹಕಾರ ಸಂಸ್ಥೆಗಳು, ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದವು. ಇದರ ಫಲವಾಗಿ ಕೇಂದ್ರ ಸರ್ಕಾರವು ಸಂಶೋಧನಾ ಕಾರ್ಯಕ್ಕೆ ₹9.30 ಕೋಟಿ ಬಿಡುಗಡೆ ಮಾಡಿದ್ದು, ಈ ಸಂಬಂಧ ರೂಪುರೇಷೆ ಸಿದ್ಧಪಡಿಸಲು ಕಾಸರಗೋಡು ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರದಲ್ಲಿ (ಸಿಪಿಸಿಆರ್‌ಐ) ಮೇ 30ರಂದು ಸಂಘ-ಸಂಸ್ಥೆಗಳು, ರೈತರು, ವಿಜ್ಞಾನಿಗಳ ಸಭೆ ಕರೆಯಲಾಗಿತ್ತು. ಈ ಸಭೆಯಲ್ಲಿ ಅಮೆರಿಕವು ಅಡಿಕೆ ಹಾಳೆ ತಟ್ಟೆ ಆಮದು ಮೇಲೆ ನಿಷೇಧ ಹೇರಿರುವ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಜೊತೆಗೆ ಈ ಬಗ್ಗೆ ಸಂಶೋಧನೆ ನಡೆಸುವಂತೆ ಮನವಿಯನ್ನೂ ಸಲ್ಲಿಸಲಾಗಿದೆ. ಇದಕ್ಕೆ ಸ್ಪಂದಿಸಿರುವ ಸಿಪಿಸಿಆರ್‌ಐ ನಿರ್ದೇಶಕ ಕೆ.ಬಾಲಚಂದ್ರ ಹೆಬ್ಬಾರ್ ಅವರು ಅಡಿಕೆ ಜೊತೆಗೆ ಹಾಳೆ ತಟ್ಟೆಯ ಬಗ್ಗೆಯೂ ಸಂಶೋಧನೆ ನಡೆಸುವುದಾಗಿ ತಿಳಿಸಿದ್ದಾರೆ

ಕಿಶೋರ್ ಕುಮಾರ್ ಕೊಡ್ಗಿ, ಕ್ಯಾಂಪ್ಕೊ ಅಧ್ಯಕ್ಷ

ಕೋರ್ಟ್‌ ಕದ ತಟ್ಟಲು ಸಿದ್ಧತೆ



ಭಾರತದ ಅಡಿಕೆ ಹಾಳೆ ತಟ್ಟೆ ಖರೀದಿಸುವ ಅಮೆರಿಕದ ಸಂಸ್ಥೆಗಳು ಈ ಸಂಬಂಧ ವಕೀಲರನ್ನು ನೇಮಿಸಿ, ನ್ಯಾಯಾಲಯದ ಮೆಟ್ಟಿಲೇರಲು ಸಿದ್ಧತೆ ನಡೆಸಿವೆ. ಅದಕ್ಕೆ ಅಗತ್ಯವಿರುವ ಪರೀಕ್ಷಾ ವರದಿಗಳು, ಸಿಎಫ್‌ಟಿಆರ್‌ಐ, ಅನೇಕ ಸಂಸ್ಥೆಗಳ ಸಂಶೋಧನಾ ಪ್ರಬಂಧಗಳು ಹಾಗೂ ಪೂರಕ ದಾಖಲೆಗಳನ್ನು ನಾವು ಅವರಿಗೆ ಒದಗಿಸಲಿದ್ದೇವೆ. ಅಡಿಕೆ ತಟ್ಟೆ ಉತ್ಪಾದಕ ಸಂಸ್ಥೆಗಳ ಪ್ರಮುಖರು ತಂಡ ರಚಿಸಿಕೊಂಡು ಈ ಕಾರ್ಯದಲ್ಲಿ ನಿರತರಾಗಿದ್ದೇವೆ

ಅವಿನಾಶ್ ರಾವ್, ಅಗ್ರಿಲೀಫ್ ಎಕ್ಸ್‌ಪೋರ್ಟ್ ಪ್ರೈ. ಲಿ.ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ, ಬೆಳ್ತಂಗಡಿ

ಅಪಪ್ರಚಾರ ಕೊನೆಗೊಳಿಸಬೇಕು



ಅಡಿಕೆ ಹಾಳೆ ತಟ್ಟೆಗಳ ನಿಷೇಧ ಕ್ರಮವು ಶತಮಾನದಿಂದ ಒಪ್ಪಿತ ಆಹಾರ ವ್ಯವಸ್ಥೆ ಹಾಗೂ ಅಡಿಕೆ ಬೆಳೆಗಾರರ ಆತ್ಮಾಭಿಮಾನದ ಮೇಲಿನ ದಾಳಿಯಾಗಿದೆ. ಅಡಿಕೆ ಹಾಳೆ ತಟ್ಟೆ, ಲೋಟ, ಬಟ್ಟಲುಗಳ ಬಳಕೆಯಿಂದ ಆಹಾರ ಮಲಿನವಾಗಿ ಆರೋಗ್ಯಕ್ಕೆ ಮಾರಕವಾಗುತ್ತದೆ ಎಂಬುದರ ಬಗ್ಗೆ ಅಮೆರಿಕದಿಂದ ವೈಜ್ಞಾನಿಕ ಪುರಾವೆ ಪಡೆಯಬೇಕು. ದೇಶದ ಪ್ರತಿಷ್ಠಿತ ಆಹಾರ, ಆರೋಗ್ಯ, ಕೃಷಿ ವಿಚಾರಗಳ ಮೇಲೆ ಉನ್ನತ ಸಂಶೋಧನೆ ನಡೆಸುತ್ತಿರುವ ಸಂಸ್ಥೆಗಳ ನೆರವಿನಿಂದ ಅಡಿಕೆಯ ಮೇಲಿನ ಈ ಅಪಪ್ರಚಾರಕ್ಕೆ ಪೂರ್ಣವಿರಾಮ ಹಾಕಬೇಕು

ಟಿ.ಎನ್.ಪ್ರಕಾಶ ಕಮ್ಮರಡಿ, ರಾಜ್ಯ ಕೃಷಿ ಬೆಲೆ ಆಯೋಗ ಮಾಜಿ ಅಧ್ಯಕ್ಷ

ಪ್ರಧಾನಿಗೆ ಮನವಿ

ಅಮೆರಿಕದ ನಿರ್ಧಾರವು ಕರ್ನಾಟಕದ ಅಡಿಕೆ ತಟ್ಟೆ ತಯಾರಿಕಾ ಉದ್ಯಮದ ಮೇಲೆ ಗಂಭೀರವಾದ ಪರಿಣಾಮ ಬೀರಲಿದ್ದು, ಈ ವಿಚಾರದಲ್ಲಿ ಮಧ್ಯಪ್ರವೇಶ ಮಾಡಬೇಕು ಎಂದು ಅಡಿಕೆ ಬೆಳೆಯುವ ಪ್ರದೇಶದ ವಿಜ್ಞಾನಿಗಳು, ಕೃಷಿ ತಜ್ಞರು, ವೈದ್ಯರು ಸೇರಿದಂತೆ ವಿವಿಧ ಕ್ಷೇತ್ರಗಳ ಪರಿಣತರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರವನ್ನೂ ಬರೆದಿದ್ದಾರೆ.

ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಅವರು ಈ ಪತ್ರವನ್ನು ಬರೆದಿದ್ದು, 100 ಮಂದಿ ತಜ್ಞರು ಇದಕ್ಕೆ ಸಹಿ ಹಾಕಿದ್ದಾರೆ.

ಪತ್ರದಲ್ಲಿನ ಮನವಿಗಳು

- ಅಮೆರಿಕ ಹೇರಿರುವ ನಿರ್ಬಂಧ ತೆರವಿಗೆ ರಾಜತಾಂತ್ರಿಕ ಮತ್ತು ನಿಯಂತ್ರಣ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕು
- ಏಕಪಕ್ಷೀಯವಾಗಿ ತೆಗೆದುಕೊಂಡಿರುವ ನಿರ್ಧಾರದ ಸಂಬಂಧ ಅಮೆರಿಕ ಸರ್ಕಾರದಿಂದ ಸ್ಪಷ್ಟನೆಯನ್ನು ಕೇಳಬೇಕು
- ಹಾಳೆಗಳ ಉಪ ಉತ್ಪನ್ನಗಳಲ್ಲಿ ಇರಬಹುದಾದ ಆಲ್ಕಲಾಯ್ಡ್‌ಗಳ ಸ್ವೀಕಾರಾರ್ಹ ಪ್ರಮಾಣವನ್ನು ವ್ಯಾಖ್ಯಾನಿಸುವಂತೆ ಅಮೆರಿಕವನ್ನು ಒತ್ತಾಯಿಸಬೇಕು
- ಅಮೆರಿಕ ನಿಗದಿಪಡಿಸಿರುವ ಮಾನದಂಡಗಳನ್ನು ಪೂರೈಸುವುದಕ್ಕಾಗಿ ಭಾರತದ ತಯಾರಕರಿಗೆ ತಾಂತ್ರಿಕ, ನಿಯಂತ್ರಣ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಗೆ ನೆರವು ನೀಡಬೇಕು
- ಅಡಿಕೆ ಸೇವನೆ ಮತ್ತು ಅದರ ಉಪ ಉತ್ಪನ್ನಗಳ ಸುರಕ್ಷತೆಯ ಬಗ್ಗೆ ಕೇಳಿ ಬರುತ್ತಿರುವ ಆರೋಪಗಳನ್ನು ತಳ್ಳಿ ಹಾಕುವುದಕ್ಕಾಗಿ ಕಾಸರಗೋಡಿನಲ್ಲಿರುವ ಸಿಪಿಸಿಆರ್‌ಐ, ಮೈಸೂರಿನಲ್ಲಿರುವ ಸಿಎಫ್‌ಟಿಆರ್‌ಐ ಮತ್ತು ನವದೆಹಲಿಯ ಐಸಿಎಂಆರ್‌ನಂತಹ ಸಂಸ್ಥೆಗಳಿಂದ ವೈಜ್ಞಾನಿಕ ಪರಿಶೀಲನೆ ಮತ್ತು ಹೊಸ ಸಂಶೋಧನೆ ನಡೆಸಲು ಕ್ರಮ ಕೈಗೊಳ್ಳಬೇಕು

ಸಂಕಷ್ಟಕ್ಕೆ ಸಿಲುಕಿದ ಉದ್ಯಮ

ದಾವಣಗೆರೆ: ಅಡಿಕೆ ಹಾಳೆಯ ತಟ್ಟೆ, ಲೋಟಗಳಿಗೆ ಅಮೆರಿಕ ನಿರ್ಬಂಧ ಹೇರಿದ ಬೆನ್ನಲ್ಲೇ ಮಾರುಕಟ್ಟೆಯಲ್ಲಿ ಅವುಗಳಿಗೆ ಬೇಡಿಕೆ ಕುಸಿದಿದೆ. ಉತ್ಪಾದನಾ ಘಟಕಗಳಲ್ಲಿ ಕೆಲವು ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ.

ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ಹರಿಹರ ಹಾಗೂ ದಾವಣಗೆರೆ ತಾಲ್ಲೂಕಿನಲ್ಲಿ ಅಡಿಕೆ ಪ್ರಮುಖ ತೋಟಗಾರಿಕಾ ಬೆಳೆ. ಚನ್ನಗಿರಿ ಹಾಗೂ ದಾವಣಗೆರೆಯಲ್ಲಿ ಅಡಿಕೆ ಹಾಳೆಯಿಂದ ತಟ್ಟೆ, ಲೋಟಗಳನ್ನು ಉತ್ಪಾದಿಸುವ ಘಟಕಗಳಿವೆ. ಇಲ್ಲಿನ ಉತ್ಪನ್ನಗಳು ಸ್ಥಳೀಯ ಮಾರುಕಟ್ಟೆಯನ್ನು ಅವಲಂಬಿಸಿವೆ. ರಫ್ತಿನ ಮೇಲೆ ನಿರ್ಬಂಧ ವಿಧಿಸುತ್ತಿದ್ದಂತೆ ಸ್ಥಳೀಯ ಮಾರುಕಟ್ಟೆಗೆ ಪೂರೈಕೆ ಹೆಚ್ಚಾಗಿದ್ದು, ಬೇಡಿಕೆ ಕುಸಿದಿದೆ.

‘ತಮಿಳುನಾಡಿನ ಕೊಯಮತ್ತೂರಿನಿಂದ ₹4.30 ಲಕ್ಷಕ್ಕೆ ಯಂತ್ರ ಖರೀದಿಸಿ ತಂದು ಎರಡು ವರ್ಷಗಳಿಂದ ಅಡಿಕೆ ಹಾಳೆಯ ತಟ್ಟೆ ಮಾಡುತ್ತಿದ್ದೆ. ಇತ್ತೀಚೆಗೆ ಮಾರುಕಟ್ಟೆಯ ಸಮಸ್ಯೆ, ಕಾರ್ಮಿಕರ ಕೊರತೆಯ ಕಾರಣಕ್ಕೆ ಘಟಕವನ್ನು ಸ್ಥಗಿತಗೊಳಿಸಿದ್ದೇನೆ’ ಎನ್ನುತ್ತಾರೆ ಚನ್ನಗಿರಿ ತಾಲ್ಲೂಕಿನ ಮೆದುಗೊಂಡನಹಳ್ಳಿಯ ಲೋಕೇಶ್.

ಕಾರ್ಮಿಕರ ಬದುಕು ಡೋಲಾಯಮಾನ: ಶಿವಮೊಗ್ಗದಲ್ಲೂ ಇದೇ ಸ್ಥಿತಿ. ಜಿಲ್ಲೆಯಲ್ಲಿ ಅಂದಾಜು 2,000 ಅಡಿಕೆ ಹಾಳೆ ತಟ್ಟೆ ತಯಾರಿಕಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಅಮೆರಿಕದ ನಿರ್ಧಾರದಿಂದ ಸಾವಿರಾರು ಕುಟುಂಬಗಳು ಈಗ ಸಂಕಷ್ಟಕ್ಕೆ ಸಿಲುಕಲಿವೆ.

ವಿವಿಧ ದೇಶಗಳಿಗೆ ಶಿವಮೊಗ್ಗದಿಂದಲೇ ಅತಿ ಹೆಚ್ಚು ಅಡಿಕೆ ಹಾಳೆ ತಟ್ಟೆಗಳನ್ನು ರಫ್ತು ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಅಂದಾಜು 70,000 ನೇರ ಕಾರ್ಮಿಕರಿದ್ದಾರೆ. ಒಟ್ಟಾರೆ 1 ಲಕ್ಷಕ್ಕೂ ಹೆಚ್ಚು ಮಂದಿ ಈ ವೃತ್ತಿ ನಂಬಿಕೊಂಡು ಜೀವನ ನಡೆಸುತ್ತಿದ್ದಾರೆ. ಇವರೆಲ್ಲರ ಬದುಕು ಈಗ ಡೋಲಾಯಮಾನವಾಗಿದೆ.

‘ಶಿವಮೊಗ್ಗ, ಭದ್ರಾವತಿ ಹಾಗೂ ಹೊಳೆಹೊನ್ನೂರು ಭಾಗದಿಂದ ದಕ್ಷಿಣ ಭಾರತದ ವಿವಿಧೆಡೆ ಅಡಿಕೆ ಹಾಳೆಯ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತಿದೆ. ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿ ವಹಿವಾಟು ನಡೆಯುತ್ತಿದೆ. ಕೆಲವರು ತಮಿಳುನಾಡಿನಿಂದ ಲಕ್ಷಾಂತರ ರೂಪಾಯಿ ವೆಚ್ಚದ ಯಂತ್ರಗಳನ್ನು ಖರೀದಿಸಿ ತಂದು ಸಣ್ಣ ಪ್ರಮಾಣದಲ್ಲಿ ಉದ್ದಿಮೆ ಆರಂಭಿಸಿದ್ದಾರೆ. ಅವರ ಬದುಕು ಈಗ ಅಕ್ಷರಶಃ ಬೀದಿಗೆ ಬರುವಂತಾಗಿದೆ. ಕೇಂದ್ರ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಈ ಸಮಸ್ಯೆಯನ್ನು ಪರಿಹರಿಸಬೇಕು’ ಎಂದು ಶಿವಮೊಗ್ಗ ಅಡಿಕೆ ಹಾಳೆ ತಟ್ಟೆ ತಯಾರಕರ ಮತ್ತು ಮಾರಾಟಗಾರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕನಸು ಮಂಜುನಾಥ ಆಗ್ರಹಿಸಿದರು.

ದರ ಇಳಿಕೆಗೆ ದಲ್ಲಾಳಿಗಳ ಯತ್ನ

ಶಿರಸಿ: ಅಮೆರಿಕವು ಅಡಿಕೆ ಹಾಳೆಯ ತಟ್ಟೆ, ಲೋಟಗಳ ಆಮದಿಗೆ ನಿಷೇಧ ಹೇರಿರುವ ಬೆನ್ನಲ್ಲೇ, ಸ್ಥಳೀಯ ಉದ್ದಿಮೆದಾರರಿಂದ ಖರೀದಿಸಲಾಗುವ ಉತ್ಪನ್ನಗಳ ದರವನ್ನು ಇಳಿಸಲು ದಲ್ಲಾಳಿಗಳು ಯತ್ನಿಸುತ್ತಿದ್ದಾರೆ.



‘ಶಿರಸಿ ಸೇರಿ ಉತ್ತರ ಕನ್ನಡ ಜಿಲ್ಲೆಯ ಅಡಿಕೆ ಹಾಳೆ ತಟ್ಟೆಗಳು ವಿದೇಶಕ್ಕೆ ರಫ್ತು ಆಗುವುದಿಲ್ಲ. ಸ್ಥಳೀಯ ಮಾರುಕಟ್ಟೆ ಅವಲಂಬಿಸಿವೆ. ಹೀಗಾಗಿ ನಿಷೇಧದ ಬಿಸಿ ಪ್ರಸ್ತುತ ಸ್ಥಳೀಯ ಉದ್ದಿಮೆಗೆ ತಟ್ಟಿಲ್ಲ. ಆದರೆ, ಸ್ಥಳೀಯ ದಲ್ಲಾಳಿಗಳು ಈ ವಿಷಯವನ್ನೇ ಮುಂದಿಟ್ಟು ಅಡಿಕೆ ತಟ್ಟೆ, ಲೋಟಗಳ ದರ ಇಳಿಕೆಗೆ ಪ್ರಯತ್ನ ನಡೆಸಿದ್ದಾರೆ. ಅಡಿಕೆ ಹಾಳೆ ಆರೋಗ್ಯ ಗುಣಮಟ್ಟದ ನೆಪವೊಡ್ಡಿ, ದರ ಪರಿಷ್ಕರಣೆಗೆ ಒತ್ತಾಯಿಸಿದ್ದಾರೆ’ ಎಂದು ಶಿರಸಿಯ ‘ವಿನಾಯಕ ಅರೇಕಾ ಲೀಫ್ ಕಪ್ಸ್’ ಮಾಲೀಕ ಮಂಜುನಾಥ ಹೆಗಡೆ ತಿಳಿಸಿದರು.

ತಾಲ್ಲೂಕಿನ ಅಂಬಳಿಕೆಯಲ್ಲಿ ‘ಜೈ ಮಾರುತಿ ಸ್ವಸಹಾಯ ಸಂಘ’ ನಡೆಸುವ ಅಡಿಕೆ ಹಾಳೆ ತಟ್ಟೆ ತಯಾರಿಕಾ ಕೇಂದ್ರದಲ್ಲಿ ವರ್ಷಕ್ಕೆ 1 ಲಕ್ಷ ತಟ್ಟೆಗಳು ತಯಾರಾಗುತ್ತವೆ. ಎಲ್ಲವೂ ಸ್ಥಳೀಯ ಮಾರುಕಟ್ಟೆ ಅವಲಂಬಿಸಿವೆ.

‘ಅಡಿಕೆಯ ಆರೋಗ್ಯ ಅಂಶ ಅರಿತಿರುವ ಗ್ರಾಹಕರು ಇರುವವರೆಗೂ ಅಡಿಕೆ ತಟ್ಟೆ ಸೇರಿ ವಿವಿಧ ಉತ್ಪನ್ನಗಳಿಗೆ ಬೇಡಿಕೆ ಇಳಿಕೆಯಾಗದು. ಆದರೆ, ಅಡಿಕೆ ಉತ್ಪನ್ನಗಳ ಮೇಲೆ ಕ್ಯಾನ್ಸರ್‌ಕಾರಕ ಹಣೆಪಟ್ಟಿ ಹಚ್ಚುವ ಕೆಲಸ ಮುಂದುವರಿಯಬಾರದು. ಒಂದು ವೇಳೆ ಮುಂದುವರಿದರೆ, ಸ್ಥಳೀಯ ಮಾರುಕಟ್ಟೆ ಮೇಲೂ ದೀರ್ಘಾವಧಿವರೆಗೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆಯಿದೆ’ ಎಂದು ಸಂಘದ ಪದಾಧಿಕಾರಿ ಸವಿತಾ ನಾಯ್ಕ ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

2026ರ ಮಾರ್ಚ್ ಬಳಿಕ ₹500 ಮುಖಬೆಲೆಯ ನೋಟುಗಳ ಬಳಕೆಯನ್ನು ಸ್ಥಗಿತಗೊಳಿಸುವ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲ ಬ್ಯಾಂಕುಗಳಿಗೆ ನಿರ್ದೇಶನ ನೀಡಿದೆ ಎಂದು ಪ್ರತಿಪಾದಿಸುವ ಪೋಸ್ಟ್ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ವಾರಗಳಿಂದ ಹರಿದಾಡುತ್ತಿದೆ. ಸೆಪ್ಟೆಂಬರ್ ಹೊತ್ತಿಗೆ ಶೇ 75ರಷ್ಟು ಎಟಿಎಂಗಳಲ್ಲಿ ₹100 ಮತ್ತು ₹200 ಮುಖಬೆಲೆಯ ನೋಟುಗಳನ್ನು ಮಾತ್ರ ಲಭ್ಯವಾಗಲಿವೆ. ಮುಂದಿನ ಮಾರ್ಚ್ ಹೊತ್ತಿಗೆ ಶೇ 90ರಷ್ಟು ಎಟಿಎಂಗಳಲ್ಲಿ ₹100 ಮತ್ತು ₹200ರ ಮುಖಬೆಲೆಯ ನೋಟುಗಳು ಮಾತ್ರ ಲಭ್ಯವಿರಲಿವೆ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು.

ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಈ ಸಂಬಂಧ ಆರ್‌ಬಿಐ ಹೊರಡಿಸಿರುವ ಅಧಿಕೃತ ಪ್ರಕಟಣೆ ಅಥವಾ ಅಧಿಸೂಚನೆ ಸಿಗಲಿಲ್ಲ. ಮತ್ತಷ್ಟು ಹುಡುಕಿದಾಗ ಏಪ್ರಿಲ್ 28ರಂದು ಆರ್‌ಬಿಐ ಹೊರಡಿಸಿರುವ ಅಧಿಸೂಚನೆಯೊಂದು ಸಿಕ್ಕಿತು. ಜನರ ಅನುಕೂಲಕ್ಕಾಗಿ ₹100 ಮತ್ತು ₹200 ಮುಖಬೆಲೆಯ ನೋಟುಗಳನ್ನು ಪೂರೈಸುವಂತೆ ಅದರಲ್ಲಿ ಆರ್‌ಬಿಐ ಹೇಳಿತ್ತು. ಅದರ ಪ್ರಕಾರ, ಈ ವರ್ಷದ ಸೆ.30ರ ವೇಳೆಗೆ ಶೇ 75ರಷ್ಟು ಎಟಿಎಂಗಳು, ಕನಿಷ್ಠ ಒಂದು ಪೆಟ್ಟಿಗೆಯಿಂದ (ನೋಟುಗಳನ್ನು ಇಡುವ ಪೆಟ್ಟಿಗೆ. ಒಂದು ಎಟಿಎಂನಲ್ಲಿ ನಾಲ್ಕು ಪೆಟ್ಟಿಗೆಗಳಿರುತ್ತವೆ) ₹100 ಇಲ್ಲವೇ ₹200 ಮುಖ ಬೆಲೆಯ ನೋಟುಗಳನ್ನು ಗ್ರಾಹಕರಿಗೆ ವಿತರಿಸಬೇಕು. 2026ರ ಮಾರ್ಚ್ 31ರವರೆಗೆ ಶೇ 90ರಷ್ಟು ಎಟಿಎಂಗಳು ಇದನ್ನು ಅಳವಡಿಸಿಕೊಳ್ಳಬೇಕು. ₹500 ಮುಖ ಬೆಲೆಯ ನೋಟಿನ ಬಳಕೆ ರದ್ದತಿ ಕುರಿತಂತೆ ಆರ್‌ಬಿಐ ಅಧಿಕಾರಿಗಳನ್ನು ಸಂಪರ್ಕಿಸಿದಾಗ, ಪೋಸ್ಟ್‌ನಲ್ಲಿರುವ ಮಾಹಿತಿ ತಪ್ಪು ಎಂದು ಹೇಳಿದರಲ್ಲದೇ, ಈ ಬಗ್ಗೆ ಸ್ಪಷ್ಟನೆ ನೀಡಿ ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ ಮಾಡಿರುವ ಪೋಸ್ಟ್ ಬಗ್ಗೆಯೂ ಮಾಹಿತಿ ನೀಡಿದರು ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ನುಡಿ ಬೆಳಗು



ದೀಪಾ ಹಿರೇಗುತ್ತಿ

ಒಂದು ಕ್ಷಣದ ದುರಾಸೆ!

ಬಹಳ ಹಿಂದೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಹುಡುಗನೊಬ್ಬ ಬಹಳ ಪ್ರಾಮಾಣಿಕನಾಗಿರುತ್ತಾನೆ. ವ್ಯಾಪಾರದಲ್ಲಿನ ಮಾಲೀಕನ ಮೋಸವನ್ನು ವಿರೋಧಿಸುತ್ತಾನೆ. ಪರಿಣಾಮ ಕೆಲಸ ಕಳೆದುಕೊಳ್ಳುತ್ತಾನೆ. ಬೇಸರದಿಂದ ಅರಳಿಕಟ್ಟೆಯ ಮೇಲೆ ಕುಳಿತ. ಅಲ್ಲಿಯೇ ಕುಳಿತಿದ್ದ ವೃದ್ಧನೊಬ್ಬನ ಹತ್ತಿರ ಮೂರು ಭಾರವಾದ ಚೀಲಗಳಿರುತ್ತವೆ. ಪಕ್ಕದೂರಿಗೆ ಹೋಗುವುದಿದೆ, ಭಾರವಾದ ಒಂದು ಚೀಲವನ್ನು ಹೊತ್ತು ತಂದುಕೊಟ್ಟರೆ ಹುಡುಗನಿಗೆ ಮೂರು ಚಿನ್ನದ ನಾಣ್ಯ ಕೊಡುತ್ತೇನೆ ಎನ್ನುತ್ತಾನೆ ವೃದ್ಧ. ವಾಹನಗಳಿಲ್ಲದ ಕಾಲ. ಉದ್ಯೋಗ ಯಾವುದಾದರೇನು ಎಂದು ಹುಡುಗ ಒಪ್ಪುತ್ತಾನೆ.

ಹೋಗುವಾಗ ಒಂದು ಹಳ್ಳ ಅಡ್ಡ ಬಂತು. ‘ಇವೆರಡು ಚೀಲ ಹಿಡಿದುಕೊಂಡು ನಾನು ದಾಟಲಾರೆ, ಇನ್ನೊಂದು ಚೀಲ ಹಿಡಿದುಕೊ, ಮತ್ತೆ ಮೂರು ಚಿನ್ನದ ನಾಣ್ಯ ಕೊಡುತ್ತೇನೆ’ ಎಂದ ವೃದ್ಧ. ಯುವಕ ಇದರಲ್ಲೇನಿದೆ ಎಂದು ಕೇಳಿದ. ‘ಮೊದಲ ಚೀಲದಲ್ಲಿ ತಾಮ್ರದ ನಾಣ್ಯಗಳು, ಇದರಲ್ಲಿ ಬೆಳ್ಳಿಯ ನಾಣ್ಯಗಳು’ ಎಂದ ವೃದ್ಧ. ನಡುನಡುವೆ ವೃದ್ಧ ಈತನನ್ನು ಗಮನಿಸುತ್ತಿದ್ದ. ಆಗೆಲ್ಲ ಯುವಕನಿಗೆ ಕಸಿವಿಸಿಯಾಗುತ್ತಿತ್ತು, ‘ಅಜ್ಜಾ, ನಿನ್ನ ಮೂಟೆಯೊಂದಿಗೆ ನಾನು ಎಲ್ಲಿಯೂ ಹೋಗುವುದಿಲ್ಲ. ನನ್ನ ಪ್ರಾಮಾಣಿಕತೆಯಿಂದಲೇ ನಾನು ಕೆಲಸ ಕಳೆದುಕೊಂಡಿದ್ದು’ ಎಂದ ಸಿಟ್ಟಿನಿಂದ.

ಮತ್ತೂ ಸ್ವಲ್ಪ ದೂರ ಹೋದ ಮೇಲೆ ವೃದ್ಧ ‘ಮಗೂ ನೀನು ಈ ಚೀಲವನ್ನೂ ಹಿಡಿದುಕೋ. ನನಗೆ ಸುಸ್ತಾಯಿತು. ಇನ್ನೂ ಮೂರು ಚಿನ್ನದ ನಾಣ್ಯ ಕೊಡುತ್ತೇನೆ’ ಎಂದ.

ಮೂರು ಚೀಲಗಳನ್ನು ಹಿಡಿದುಕೊಂಡ ಯುವಕನ ಮನಸ್ಸಿನಲ್ಲಿ ಇದ್ದಕ್ಕಿದ್ದಂತೆ, ತಾನೀಗ ಈ ಚೀಲಗಳನ್ನು ತೆಗೆದುಕೊಂಡು ಓಡಿಬಿಟ್ಟರೆ ಏನಾಗುತ್ತದೆ? ಈತ ತನ್ನನ್ನು ಹಿಡಿಯಲು ಸಾಧ್ಯವಿಲ್ಲವಲ್ಲ ಎಂಬ ಯೋಚನೆ ಬಂತು. ಹಾಗಂದುಕೊಂಡವನೇ ಬೇರೇನೂ ಯೋಚಿಸದೇ ಓಡತೊಡಗಿದ. ಬಹಳ ದೂರ ಓಡಿದ ಮೇಲೆ ತಾಮ್ರದ ನಾಣ್ಯಗಳ ಚೀಲವನ್ನು ತೆರೆದು ನೋಡಿದರೆ ಅದರಲ್ಲಿ ಕಲ್ಲುಗಳಿದ್ದವು, ಬೆಳ್ಳಿಯ ನಾಣ್ಯಗಳ ಚೀಲದಲ್ಲೂ ಕಲ್ಲುಗಳೇ! ಇನ್ನೊಂದರಲ್ಲಿ ಚಿನ್ನದ ನಾಣ್ಯಗಳೇ ಇರಬಹುದೆಂದುಕೊಂಡಿದ್ದ. ಅದರಲ್ಲೂ ಕಲ್ಲುಗಳೇ! ಮೂರನೇ ಚೀಲದಲ್ಲಿ ಚೀಟಿಯೊಂದು ಸಿಕ್ಕಿತು.

‘ನಾನು ಈ ದೇಶದ ರಾಜ. ಪ್ರಾಮಾಣಿಕ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಪರೀಕ್ಷೆಯಾಗಿತ್ತಿದು. ನೀನು ಈ ಚೀಲಗಳನ್ನು ತೆಗೆದುಕೊಂಡು ಓಡದಿದ್ದರೆ ಬಹುಶಃ ಮುಂದಿನ ರಾಜನಾಗುತ್ತಿದ್ದಿ’. ಯುವಕ ಬಿಕ್ಕಿಬಿಕ್ಕಿ ಅಳತೊಡಗಿದ.

ನಮ್ಮ ಬದುಕಿನಲ್ಲೂ ಅಷ್ಟೇ; ನಾವು ಸದಾ ಪ್ರಾಮಾಣಿಕರಾಗಿರುತ್ತೇವೆ. ಒಳ್ಳೆಯ ಕೆಲಸಗಳನ್ನೇ ಮಾಡುತ್ತಿರುತ್ತೇವೆ. ಆದರೆ ಒಂದು ದುರ್ಬಲ ಕ್ಷಣದಲ್ಲಿ ಮೋಹಕ್ಕೆ, ದುರಾಸೆಗೆ ಶರಣಾಗಿಬಿಡುತ್ತೇವೆ. ಒಂದು ಹೆಜ್ಜೆ ನಮ್ಮ ವ್ಯಕ್ತಿತ್ವವನ್ನು, ಕೆಲವೊಮ್ಮೆ ಬದುಕನ್ನೇ ನಾಶಮಾಡಿಬಿಡಬಲ್ಲದು. ಹಾಗಾಗಿ ಅಂತಹ ಸಂದರ್ಭ ಬಂದಾಗ ಜೀವನವಿಡೀ ನಡೆದುಬಂದ ದಾರಿಯನ್ನು ಮತ್ತೊಮ್ಮೆ ತಿರುಗಿ ನೋಡಿದರೆ ದುಡುಕಲಾರೆವು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜೂನ್ 10, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಚತುರ್ದಶಿ ಗಂ. 11-36 ನಕ್ಷತ್ರ: ಅನುರಾಧ ಗಂ. 18-02 ಯೋಗ: ಸಿದ್ಧ ಗಂ. 13-45 ಕರಣ: ವಣಜೆ ಗಂ. 11-36, ವೃಷಭ ಮಾಸದ 27 ನೇ ದಿನ. ಮಳೆ ನಕ್ಷತ್ರ : ಮೃಗಶಿರ 1ನೇ ಪಾದ.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-07 **ಸೂರ್ಯಾಸ್ತ :** 06-53
ಮುಸ್ಲಿಂ ದಿನಾಂಕ : 13 ಜುಲ್‌ಹಿಜಾ
ದಿನ ವಿಶೇಷ : ವಟಸಾವಿತ್ರೀ ವ್ರತ, ಅದೃಷ್ಟ ಸಂಖ್ಯೆ : 1, 8

ಮೇಷ: ಮಕ್ಕಳಿಂದ ಅಚ್ಚರಿಯ ಸುದ್ದಿ ಕೇಳುವಿರಿ. ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ. ಅಂದುಕೊಂಡಿರುವ ಕೆಲಸಗಳು ಉತ್ತಮವಾಗಿ ನೆರವೇರುವುದರಿಂದ ನೆಮ್ಮದಿ ಇರುವುದು.

ವೃಷಭ: ಹಿರಿಯರೊಂದಿಗೆ ವ್ಯಾಪಾರದ ವಿಚಾರದಲ್ಲಿ ಗಂಭೀರ ಚರ್ಚೆ ನಡೆಯಲಿದೆ. ವೃತ್ತಿಜೀವನದಲ್ಲಿ ಯಶಸ್ಸು ಕಾಣುವಿರಿ. ಮನೋಬಲ ವೃದ್ಧಿ. ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸುವಿರಿ.

ಮಿಥುನ: ಕೀರ್ತಿ ಎಲ್ಲ ಕಡೆಗೆ ಹರಡಲಿದೆ. ಬಂಧುಮಿತ್ರರು ಆದರದಿಂದ, ಗೌರವದಿಂದ ಕಾಣುತ್ತಾರೆ. ಕುಟುಂಬದಲ್ಲಿ ಶಾಂತಿ ನೆಲೆಸುತ್ತದೆ. ಉದ್ಯೋಗಸ್ಥರಿಗೆ ಬಡ್ತಿ ದೊರೆತು ಉತ್ತಮ ಫಲ ದೊರೆಯಲಿದೆ.

ಕರ್ಕಾಟಕ: ಗೆಳೆಯರೊಂದಿಗೆ ಸಂತೋಷಕೂಟದಲ್ಲಿ ಪಾಲ್ಗೊಳ್ಳುವಿರಿ. ಸಂಗೀತದಲ್ಲಿನ ಆಸಕ್ತಿಗೆ ಮನೆಯವರಿಂದ ಪ್ರೋತ್ಸಾಹ ಸಿಗಲಿದೆ. ದೇಹದಲ್ಲಿ ಉತ್ಸಾಹವಿರುವುದರಿಂದ ಎಲ್ಲ ಕಾರ್ಯಗಳಲ್ಲಿ ಯಶಸ್ಸು ದೊರೆಯುವುದು.

ಸಿಂಹ: ಖಾಸಗಿ ಬದುಕಿನಲ್ಲಿ ಆಸೆಗಳು ಬಹುಮಟ್ಟಿಗೆ ಈಡೇರುವುದರಿಂದ ಹೊಸ ಹುರುಪು ಮೂಡಲಿದೆ. ನ್ಯಾಯವಾದಿಗಳಿಗೆ ವೃತ್ತಿಯಿಂದ ಆದಾಯ ಗಳಿಕೆ ಆಗುವುದು. ರಾಜಕೀಯರಂಗದಲ್ಲಿ ಜನಪ್ರಿಯತೆಯ ಕೊರತೆ ಕಾಣಲಿದೆ.

ಕನ್ಯಾ: ಮನೆಯಲ್ಲಿ ಶುಭಕಾರ್ಯಗಳ ತಯಾರಿ ಉತ್ತಮ ರೀತಿಯಲ್ಲಿ ನಡೆಯುವುದು. ಸಿನಿಮಾರಂಗಕ್ಕೆ ಸೇರಿಕೊಳ್ಳುವ ಬಗ್ಗೆ ಯೋಚಿಸುವವರಿಗೆ ಸುದಿನ. ಕುಲದೇವರ ಆರಾಧನೆಯಿಂದ ಶುಭವಾಗುವುದು.

ತುಲಾ: ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚಿನ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನವನ್ನು ಸಂಪಾದಿಸಿಕೊಳ್ಳುವಂತೆ ಆಗಲಿದೆ. ಉದ್ಯೋಗದಲ್ಲಿ ವೈಯಕ್ತಿಕ ಅನಿಸಿಕೆಯು ಉತ್ತಮ ರೀತಿಯಲ್ಲಿ ಸಹಾಯಕಾರಿ ಆಗುವುದು.

ವೃಶ್ಚಿಕ: ಶ್ರದ್ಧೆ, ತಾಳ್ಮೆಯಿಂದ ಹಾಗೂ ಹಿಂದಿನ ಸೋಲು ಹೇಳಿಕೊಟ್ಟ ಪಾಠದಿಂದ ಕಾರ್ಯಸಿದ್ಧಿಯಾಗುವುದು. ಕೆಲಸವನ್ನು ಹೊರಗುತ್ತಿಗೆ ನೀಡುವ ಆಲೋಚನೆ ಸಮಸ್ಯೆಗೆ ದಾರಿಯಾಗುವುದು.

ಧನು: ವ್ಯಾಪಾರ ವ್ಯವಹಾರಗಳಲ್ಲಿ ನಡೆಯುತ್ತಿದ್ದ ಅವ್ಯವಹಾರಗಳು ಹಿಡಿತಕ್ಕೆ ಬರಲಿವೆ. ಕೊಡು-ಕೊಳ್ಳುವಿಕೆಯಿಂದ ಅಧಿಕ ಲಾಭವಿರುವುದು. ಪ್ರತಿಭೆಗೆ ಅನುಗುಣವಾದ ಉದ್ಯೋಗ ಅವಕಾಶ ದೊರೆತು ಸಂತಸವಾಗಲಿದೆ.

ಮಕರ: ಕಾರ್ಯಕ್ಷೇತ್ರದಲ್ಲಿ ಹಿಡಿತಕ್ಕೆ ಸಿಕ್ಕದೆ ಇರುವ ಕೆಲಸಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುವಿರಿ. ಭೂ ವ್ಯವಹಾರಗಳಲ್ಲಿ ಹಿಮ್ಮುಖ ಚಲನೆ ಬೇಡ.

ಕುಂಭ: ವ್ಯವಹಾರಗಳ ವಿಷಯಕ್ಕೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ಜರೂರಿನಲ್ಲಿ ಚರ್ಚೆ ನಡೆಸಬೇಕಾದ ಪರಿಸ್ಥಿತಿ ಎದುರಾಗಲಿದೆ. ಸಮಾಧಾನದಿಂದ ಚರ್ಚಿಸಿ. ಜಾಹೀರಾತು ಏಜೆನ್ಸಿಯವರಿಗೆ ಅಧಿಕ ಆದಾಯ ಪ್ರಾಪ್ತಿ.

ಮೀನ: ಸ್ವತ್ತು ವಿವಾದಗಳ ಇತ್ಯರ್ಥಕ್ಕೆ ಸೂಕ್ತ ವಾತಾವರಣ ಸೃಷ್ಟಿಯಾಗಲಿದೆ. ಪೂರ್ಣ ಪ್ರಯತ್ನದಿಂದ ಕುಟುಂಬದ ಜಟಿಲ ಸಮಸ್ಯೆಗಳನ್ನು ಪರಿಹರಿಸುವಿರಿ. ಸಮಾಜಸೇವೆಯಲ್ಲಿ ಪುತ್ರರ ಘನತೆ ಹೆಚ್ಚಳವಾಗುವುದು.

ಪದಬಂಧ 6069

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೆಳಗಾಗುತ್ತಲೇ ನೆರೆದ ಸಮೂಹ (3)
4.ಎಲ್ಲರದ್ದೂ ಒಂದೇ ಮತ (3)
6.ದನಕಾಯುವವನು ನೋಡಿದ್ದು ಅಶ್ವದ ಮುಖ (5)
7.ರವಿಕೆಯನ್ನು ಒಣಗಿಸಿದ ಸೂರ್ಯ (2)
9.ಕನ್ನಡ ಮಾತಾಡುವವನಿಗೆ ದೊರೆತ ಸಾಲ (2)
10.ಬಡಿವಾರ ತೋರಿದ್ದು ಏಳು ದಿನ! (2)
11.ಆರ್ಭಟದಲ್ಲಿ ಉಲ್ಟಾ ಹೊಡೆದ ಕ್ರೀಡೆ (2)
16.ನಯವಂತಿಗೆ ತೋರುತ್ತಲೇ ಮೋಸಮಾಡುವವ (5)
17.ನಡುವೆಯೇ ಶುರುವಾದ ಕಂಪನ (3)
18.ರೀತಿಯೊಡಗೂಡುವ ಪದ್ಧತಿ (3)

ಮೇಲಿಂದ ಕೆಳಕ್ಕೆ
1.ಬರದಲ್ಲಿಯೂ ತೋರುತ್ತಿರುವ ಡೌಲು (4)
2.ಗಮನ ನೀಡಿ! ಇದು ಬಲು ಗಂಭೀರ! (3)
3.ವನದ ಬಗ್ಗೆ ಬರೆದ ಪದ್ಯ (3)
4.ನೆನಪು ಮಾಡಿಕೊಂಡು ತೋರಿದ ವಯ್ಯಾರ (3)
5.ತಡವಾಗಿ ಬಂದರೆ ಈ ತಬ್ಬಿಬ್ಬು (4)
8. ಅಂದಗೆಟ್ಟಿದ್ದನ್ನು ಹೀಗೆ ಹೇಳಿ (3)
9.ಕಟ ಕಟ ಶಬ್ದ ಮಾಡುವ ಬಾಗಿಲು (3)
10.ತಾಯಿಯ ಮನೆಯ ತೆರೆದ ಕಿಟಕಿ (4)
12.ಆ ಗುಜು ಗುಜು ನಡೆದದ್ದು ಅಕ್ಕಪಕ್ಕದಲ್ಲೇ! (4)
13.ಪಾನಕಕ್ಕೆ ಬಾಯಿ ಹಾಕಿದ ನಾಯಿ (3)
14.ವಂಗ ದೇಶದಲ್ಲಿರುವ ಸಾಂಬಾರದ್ರವ್ಯ (3)
15.ಮಂಕ ಹೊತ್ತಿರುವ ಬುಟ್ಟಿ (3)

6068ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪಜಯ 3.ಕಂಠೀರವ
5.ಮದುಮಗ 7.ಕಾತರ
8.ಪ್ರತಿಷ್ಠಾಪನೆ 11.ಸಮ್ಮತಿ
12.ವಿತರಕ 15.ಕುರುಕ್ಷೇತ್ರ
16.ಕರಣಿಕ

ಮೇಲಿಂದ ಕೆಳಕ್ಕೆ:
1.ಅರಮನೆ 2.ಜನುಮ
3.ಕಂಬು 4.ವಜೀರ
6.ಗರತಿ 7.ಕಾಮನೆ
8.ಪ್ರಗತಿ 9.ಪದವಿ
10.ಅಕಳಂಕ 11.ಸರಕು
13.ತತ್ವರ 14.ಪತ್ರ

ಸುಡೊಕು 6453

		1		8				5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				7
1		8	5			3		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6452 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ಷೇರುಪೇಟೆ ವಹಿವಾಟು 256

ಹಿಂದಿನ ಅಂತ್ಯ	82,188
ಇಂದಿನ ಅಂತ್ಯ	82,445

ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	25,003
ಇಂದಿನ ಅಂತ್ಯ	25,103
▲	100
ದಿನದ ಗರಿಷ್ಠ	25,160

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹140-515
ದ್ವಿತಳಿ (ಬಿ.ವಿ)	₹340-650

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹193.50
ಆರ್ಎಸ್ಎಸ್-5	₹188.50
ಗುಡ್ ಲಾಟ್	₹178.50

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಬೆಳ್ತಂಗಡಿ	₹16000-17500
ಮಧುಗಿರಿ	₹9000-15500
ತಿಪಟೂರು	₹20000-22356

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟಾ	
ಚಾಲಿ	38869-42998
ಚಿಪ್ಪು	24689-30099
ಕೋಕ	7019-20999
ಫ್ಯಾಕ್ಟರಿ	5701-24479
ಹೊಸಚಾಲಿ	35559-43099
ಸಾಗರ	
ಬಿಳಿಗೋಟು	7786-25899
ಚಾಲಿ	21899-38509
ಕೋಕ	7119-19199
ಕೆಂಪುಗೋಟು	11889-27000
ರಾಶಿ	28000-57599
ಸಿಪ್ಪೆಗೋಟು	6899-18005

ಶಿವಮೊಗ್ಗ	
ಬೆಟ್ಟೆ	53399-59599
ಗೊರಬಲು	16969-30699
ರಾಶಿ	48009-58199
ಸರಕು	58169-71210
ಸಿದ್ದಾಪುರ	
ಬಿಳಿಗೋಟು	25469-31608
ಚಾಲಿ	35469-40200
ಕೋಕ	16789-25689
ಕೆಂಪುಗೋಟು	19019-22869
ರಾಶಿ	41899-45599
ತಟ್ಟಿಬೆಟ್ಟೆ	24689-29100

ಶಿರಸಿ	
ಬೆಟ್ಟೆ	28000-40889
ಬಿಳಿಗೋಟು	15499-31002
ಚಾಲಿ	36099-42612
ಕೆಂಪುಗೋಟು	14299-23000
ರಾಶಿ	44329-48709
ಯಲ್ಲಾಪುರ	
ಬಿಳಿಗೋಟು	17899-30212
ಚಾಲಿ	31569-41360
ಕೋಕ	9299-18212
ಕೆಂಪುಗೋಟು	17399-25899
ರಾಶಿ	38809-52950
ತಟ್ಟಿಬೆಟ್ಟೆ	28705-36780

ಬೆಳ್ಳಿ ದರ ಕೆ.ಜಿ ₹1.08 ಲಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟ ನಲ್ಲಿ ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹1 ಸಾವಿರ ಹೆಚ್ಚಳವಾಗಿ, ₹1,08,100ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹280 ಇಳಿಕೆಯಾಗಿ, ₹97,780 ಆಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ₹250 ಕಡಿಮೆಯಾಗಿ, ₹97,350ರಷ್ಟಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಗೆ ಮತ್ತು ಸೌರವಿದ್ಯುತ್ ಕ್ಷೇತ್ರದಲ್ಲಿ ಬೆಳ್ಳಿ ಬಳಕೆಗೆ ಬೇಡಿಕೆ ಹೆಚ್ಚಾಗಿದೆ. ಅಲ್ಲದೆ, ಪ್ರಮುಖ ಕರೆನ್ಸಿಗಳ ಎದುರು ಡಾಲರ್ ಮೌಲ್ಯ ಇಳಿಕೆ ಮತ್ತು ಹೂಡಿಕೆದಾರರಿಂದ ಹೆಚ್ಚಿದ ಬೇಡಿಕೆಯಿಂದ ಬೆಳ್ಳಿ ಧಾರಣೆಯು ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ 09-06-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7600-7700
ದಪ್ಪ ಗುಜರಾತ್(ಹೊಸ)	7900-8000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1370 (1375)
ಒಂದು ವಾರದ ಡೆಲಿವರಿ	1365 (1370)
ಪಾಮ್ ವಾರದ ಡೆಲಿವರಿ	1148 (1148)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1255)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹95,400 (95,700)

ಬೆಳ್ಳಿ ಕೆ.ಜಿ ₹1,05,500 (1,05,000)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1360 (1365)
ಸೋಯಾ (ರಿಫೈನ್ಡ್)	₹1170 (1175)
ಸೂರ್ಯಕಾಂತಿ (ರಿಫೈನ್ಡ್)	₹1320 (1335)
ಪಾಮೋಲಿನ್	₹1150 (1150)

ವಿನಿಮಯ ದರ

$ ಡಾಲರ್	85.66
£ ಪೌಂಡ್	116.20
€ ಯುರೊ	97.84
¥ ಯೆನ್ (100ಕ್ಕೆ)	59

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,400-1,800
ಮಧ್ಯಮ	₹1,000-1,400
ಸಣ್ಣ	₹500-1,000

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನಿರೀಕ್ಷೆ

‘ಧಾನ್ಯ ಉತ್ಪಾದನೆಯಲ್ಲಿ ದಾಖಲೆ’

ನವದೆಹಲಿ (ಪಿಟಿಐ): ‘2025–26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ದೇಶದಲ್ಲಿ ದಾಖಲೆಯ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಆಗುವ ನಿರೀಕ್ಷೆ ಇದೆ’ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸೋಮವಾರ ಹೇಳಿದ್ದಾರೆ.

ದೇಶದಲ್ಲಿ ಈ ಬಾರಿ ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುವ ಅಂದಾಜಿದೆ. ಇದು ಉತ್ಪಾದನೆ ಹೆಚ್ಚಳಕ್ಕೆ ಸಹಕಾರಿಯಾಗಲಿದೆ ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಸಚಿವರು ಹೇಳಿದ್ದಾರೆ.

ನಕಲಿ ಹಾಗೂ ಕಳಪೆ ಗುಣಮಟ್ಟದ ಕೀಟನಾಶಕಗಳ ಮಾರಾಟವನ್ನು ನಿಯಂತ್ರಿಸಲು ಕಠಿಣ ಕಾನೂನು ಜಾರಿಗೆ ತರಬೇಕು ಎಂದು ಅವರು ಹೇಳಿದರು. ರಸಗೊಬ್ಬರದ ಸಮತೋಲಿತ ಬಳಕೆಯನ್ನು ಖಾತರಿಪಡಿಸಲು ಮಣ್ಣಿನ ಆರೋಗ್ಯ ಕಾರ್ಡ್‌ಗಳನ್ನು ಪರಿಣಾಮಕಾರಿ ಬಳಕೆ ಮಾಡಬೇಕು ಎಂದರು.



ದ್ವಿದಳ ಧಾನ್ಯಗಳು ಮತ್ತು ಎಣ್ಣೆ ಕಾಳುಗಳ ಉತ್ಪಾದನೆಯಲ್ಲಿ ಸುಧಾರಣೆ ಇದೆ. ಆದರೆ, ದೇಶವು ಸ್ವಾವಲಂಬನೆ ಸಾಧಿಸಲು ಮತ್ತು ಆಮದು ತಗ್ಗಿಸಲು ಇನ್ನೂ ಬಹು ದೂರ ಸಾಗಬೇಕಿದೆ

ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಕೃಷಿ ಸಚಿವ

2024–25ರ ಮುಂಗಾರು ಹಂಗಾಮಿನಲ್ಲಿ ಕೃಷಿ ಇಲಾಖೆಯ ಮೂರನೇ ಅಂದಾಜಿನ ಪ್ರಕಾರ, ದೇಶದಲ್ಲಿ 16.80 ಕೋಟಿ ಟನ್ ಆಹಾರ ಧಾನ್ಯ ಉತ್ಪಾದನೆ ಆಗಲಿದೆ. 2014–15ರ ನಂತರದಲ್ಲಿ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ 31ರಷ್ಟು ಹೆಚ್ಚಳವಾಗಿದೆ.

ಮುಖ್ಯಾಂಶಗಳು

- 2024–25ರಲ್ಲಿ 16.80 ಕೋಟಿ ಟನ್ ಆಹಾರ ಧಾನ್ಯ ಉತ್ಪಾದನೆ ನಿರೀಕ್ಷೆ
- ನೈಋತ್ಯ ಮುಂಗಾರು: ಜೂನ್ 12ರಿಂದ 18ರ ನಡುವೆ ಬಲ
- ಮಣ್ಣಿನ ಆರೋಗ್ಯ ಕಾರ್ಡ್ ಪರಿಣಾಮಕಾರಿಯಾಗಿ ಬಳಕೆ ಅಗತ್ಯ

ದೇಶದಾದ್ಯಂತ ನಡೆಯುತ್ತಿರುವ ‘ವಿಕಸಿತ ಕೃಷಿ ಅಭಿಯಾನ’ವು ಕೃಷಿ ಉತ್ಪಾದನೆಗೆ ಹೆಚ್ಚಿನ ಉತ್ತೇಜನ ನೀಡಲಿದೆ. ರೈತರಿಗೆ ಹೊಸ ತಂತ್ರಜ್ಞಾನಗಳ ಕುರಿತು ಅರಿವು ಮೂಡಿಸುತ್ತಿದೆ ಎಂದು ಚೌಹಾಣ್ ಹೇಳಿದ್ದಾರೆ.

‘ಈಗಾಗಲೇ 10 ರಾಜ್ಯಗಳಿಗೆ ಭೇಟಿ ನೀಡಿದ್ದೇನೆ. ಕೆಲವು ಪ್ರದೇಶಗಳಲ್ಲಿನ ತಳಿಗಳು ಕೀಟಗಳಿಗೆ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಂಡಿರುವ ಬಗ್ಗೆ ರೈತರು ಮಾಹಿತಿ ನೀಡಿದ್ದಾರೆ. ಆದರೆ, ಹೆಚ್ಚುತ್ತಿರುವ ನಕಲಿ ಕೀಟನಾಶಕ ಮತ್ತು ಬೆಲೆ ಕುಸಿತದ ಬಗ್ಗೆ ರೈತರು ಆತಂಕ ವ್ಯಕ್ತಪಡಿಸಿದ್ದು, ಹೆಚ್ಚಿನ ರಕ್ಷಣೆ ಬೇಕಿದೆ ಎಂದಿದ್ದಾರೆ’ ಎಂದು ಹೇಳಿದರು.

ಜುಲೈನಿಂದ ಭತ್ತ ಬಿತ್ತನೆ ಶುರುವಾಗಲಿದೆ. ನೈಋತ್ಯ ಮುಂಗಾರು ಜೂನ್ 12ರಿಂದ 18ರ ನಡುವೆ ಬಲ ಪಡೆದುಕೊಳ್ಳಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಅಂದಾಜಿಸಿದೆ ಎಂದು ಚೌಹಾಣ್ ಹೇಳಿದ್ದಾರೆ.

ಮತ್ತೊಂದು ದಾಖಲೆ ಬರೆದ ಉಂಡೆ ಕೊಬ್ಬರಿ

ಕ್ವಿಂಟಲ್ ಕೊಬ್ಬರಿ ₹22 ಸಾವಿರ

ಪ್ರಜಾವಾಣಿ ವಾರ್ತೆ

ತುಮಕೂರು: ಉಂಡೆ ಕೊಬ್ಬರಿ ಬೆಲೆ ದಿನದಿಂದ ದಿನಕ್ಕೆ ಏರಿಕೆ ಆಗುತ್ತಿದೆ. ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಉಂಡೆ ಕೊಬ್ಬರಿ ಬೆಲೆಯು ಕ್ವಿಂಟಲ್ ₹22 ಸಾವಿರದ ಗಡಿ ದಾಟುವ ಮೂಲಕ ಮತ್ತೊಂದು ದಾಖಲೆ ಬರೆದಿದೆ.



ಸೋಮವಾರ ಕ್ವಿಂಟಲ್‌ಗೆ ಗರಿಷ್ಠ ₹22,356, ಕನಿಷ್ಠ ₹20,000, ಮಾದರಿ ₹21,500ಕ್ಕೆ ಉಂಡೆ ಕೊಬ್ಬರಿ ಮಾರಾಟವಾಗಿದೆ. 2,887 ಕ್ವಿಂಟಲ್ (6,714 ಚೀಲ) ಆವಕವಾಗಿತ್ತು.

ಕಳೆದ ಮಾರ್ಚ್ ತಿಂಗಳಲ್ಲಿ ಆರಂಭವಾದ ಬೆಲೆ ಏರಿಕೆ ನಂತರದ ದಿನಗಳಲ್ಲೂ ಅದೇ ಲಯವನ್ನು ಕಾಯ್ದುಕೊಂಡಿದೆ. ಮಾರ್ಚ್ ಅಂತ್ಯದಲ್ಲಿ ಕ್ವಿಂಟಲ್ ₹19 ಸಾವಿರಕ್ಕೆ ಹೆಚ್ಚಳ ಆಗಿತ್ತು. ಕೆಲವು ದಿನಗಳ ಕಾಲ ಅದೇ ಮಟ್ಟವನ್ನು ಕಾಯ್ದುಕೊಂಡು, ಮೇ 26ರಂದು ₹20,900ಕ್ಕೆ ಏರಿಕೆಯಾಗಿ ಸಾರ್ವಕಾಲಿಕ ದಾಖಲೆ ಬರೆದಿತ್ತು. ಮೇ ಅಂತ್ಯಕ್ಕೆ ₹21,809ಕ್ಕೆ ತಲುಪಿತ್ತು. ಈಗ ಬೆಲೆಯು ಕ್ವಿಂಟಲ್‌ಗೆ ₹22 ಸಾವಿರ ದಾಟಿದೆ.

ಈ ಸಮಯದಲ್ಲಿ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಕೊಬ್ಬರಿ ಬರಬೇಕಿತ್ತು. ಆವಕದಲ್ಲಿ ಏರಿಕೆ ಆಗದಿರುವುದು, ಬೇಡಿಕೆ ಹೆಚ್ಚುತ್ತಿರುವುದು ಬೆಲೆ ಏರಿಕೆಗೆ ಕಾರಣವಾಗಿದೆ. ಮುಂದಿನ ದಿನಗಳಲ್ಲಿ ಧಾರಣೆ ಮತ್ತೂ ಏರಿಕೆಯಾಗಲಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

ಎಳನೀರು, ತೆಂಗಿನಕಾಯಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುತ್ತಿದ್ದು, ಕಾಯಿಯನ್ನು ಕೊಬ್ಬರಿಗೆ ದಾಸ್ತಾನು ಮಾಡುವುದು ಕಡಿಮೆಯಾಗಿದೆ. ಅಡಿಕೆಗೂ ಉತ್ತಮ ಬೆಲೆ ಸಿಗುತ್ತಿದ್ದು, ತೆಂಗಿನ ಜಾಗವನ್ನು ಅಡಿಕೆ ಬೆಳೆ ಆವರಿಸಿ ಕೊಳ್ಳುತ್ತಿದೆ. ರೋಗ ಬಾಧೆ ಹಾಗೂ ಇತರ ಕಾರಣಗಳಿಂದ ತೆಂಗಿನ ಬೆಲೆ ಸಂಕಷ್ಟಕ್ಕೆ ಸಿಲುಕಿದ್ದು, ಕೊಬ್ಬರಿ ಇಳುವರಿ ತಗ್ಗಿದೆ.

ಸುದ್ದಿ 2 ನಿಮಿಷ

ಕಿರುಸಾಲ ವಲಯದಲ್ಲಿ ಅಧಿಕ ಬಡ್ಡಿ: ರಾವ್ ಕಳವಳ

ಮುಂಬೈ (ಪಿಟಿಐ): ಅತಿಯಾದ ಸಾಲ, ಹೆಚ್ಚಿನ ಬಡ್ಡಿದರ ಮತ್ತು ಸಾಲ ವಸೂಲಿ ವೇಳೆ ಒರಟಾಗಿ ನಡೆದುಕೊಳ್ಳುವ ವಿಷವರ್ತುಲವು ಕಿರುಸಾಲ ವಲಯದಲ್ಲಿ ಈಗಲೂ ಮುಂದುವರಿದಿದೆ ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಎಂ. ರಾಜೇಶ್ವರ ರಾವ್ ಕಳವಳ ವ್ಯಕ್ತಪಡಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಕಿರುಸಾಲ ವಲಯದ ಕೆಲವು ಅಂಶಗಳ ಬಗ್ಗೆ ಗಮನ ಹರಿಸಬೇಕಿದೆ ಎಂದು ಹೇಳಿದ್ದಾರೆ.

‘ಕಿರುಸಾಲದ ಮೇಲಿನ ಬಡ್ಡಿ ದರವು ಈಚಿನ ಕೆಲವು ತ್ರೈಮಾಸಿಕಗಳಲ್ಲಿ ಕಡಿಮೆ ಆಗಿರುವುದು ಕಂಡುಬಂದಿದೆಯಾದರೂ, ಹೆಚ್ಚಿನ ಬಡ್ಡಿ ದರ ವಿಧಿಸುತ್ತಿರುವುದು ಕೆಲವೆಡೆ ಮುಂದುವರಿದಿದೆ’ ಎಂದು ಅವರು ಹೇಳಿದ್ದಾರೆ.



ಕಿರುಸಾಲ ವಲಯವು ತಾನು ದುರ್ಬಲ ವರ್ಗಗಳ ಸಬಲೀಕರಣದಲ್ಲಿ ವಹಿಸುವ ಪಾತ್ರವನ್ನು ಗುರುತಿಸಿ, ಸಹಾನುಭೂತಿಯ ಹಾಗೂ ಅಭಿವೃದ್ಧಿ ಪರವಾದ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಕರೆ ನೀಡಿದ್ದಾರೆ.

ಸಾಲ ಪಡೆಯುವ ವ್ಯಕ್ತಿಗಳು ಅತಿಯಾದ ಸಾಲದ ಸುಳಿಯಲ್ಲಿ ಸಿಲುಕದಂತೆ ನೋಡಿಕೊಳ್ಳಲು ಕಿರುಸಾಲ ಸಂಸ್ಥೆಗಳು ಸಾಲ ನೀಡುವಾಗ ಹೆಚ್ಚಿನ ಪರಿಶೀಲನೆ ನಡೆಸಬೇಕು ಎಂದು ಸಲಹೆ ನೀಡಿದ್ದಾರೆ.

ಇಂತಹ ಸಂಸ್ಥೆಗಳು ಸಾಲದ ವಸೂಲಿಗೆ ಅನೈತಿಕವಾದ ಹಾಗೂ ಹಿತಕರವಲ್ಲದ ಮಾರ್ಗವನ್ನು ಅನುಸರಿಸಬಾರದು. ಹಣಕಾಸು ಸೇವೆಗಳನ್ನು ಜವಾಬ್ದಾರಿಯುತವಾಗಿ ಹಾಗೂ ಸುಸ್ಥಿರವಾಗಿ ಒದಗಿಸಬೇಕು ಎಂದು ಹೇಳಿದ್ದಾರೆ.

ಜಿಯೊ ಬ್ಲ್ಯಾಕ್‌ರಾಕ್‌ಗೆ ನೇಮಕ

ನವದೆಹಲಿ (ಪಿಟಿಐ): ಅಮೆರಿಕದ ಬ್ಲ್ಯಾಕ್‌ರಾಕ್ ಮತ್ತು ಭಾರತದ ಜಿಯೊ ಫೈನಾನ್ಶಿಯಲ್ ಸರ್ವಿಸಸ್‌ನ ಜಂಟಿ ಸಹಭಾಗಿತ್ವದ ‘ಜಿಯೊ ಬ್ಲ್ಯಾಕ್‌ರಾಕ್ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿ’ಯು ಪ್ರಮುಖ ಹುದ್ದೆಗಳಿಗೆ ನೇಮಕಾತಿ ನಡೆಸಿರುವುದನ್ನು ಘೋಷಿಸಿದೆ.

ಕಳೆದ ತಿಂಗಳು ಸಿದ್ ಸ್ವಾಮಿನಾಥನ್ ಅವರನ್ನು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಗಿ ನೇಮಕ ಮಾಡಿತ್ತು.

ಅಮಿತ್ ಭೋಸಲೆ ಅವರನ್ನು ಚೀಫ್ ರಿಸ್ಕ್ ಆಫೀಸರ್ (ಸಿಆರ್‌ಒ) ಆಗಿ ನೇಮಕ ಮಾಡಿದೆ. ಮುಖ್ಯ ತಂತ್ರಜ್ಞಾನ ಅಧಿಕಾರಿಯಾಗಿ ಅಮೋಲ್ ಪೈ ಮತ್ತು ಉತ್ಪನ್ನಗಳ ವಿಭಾಗದ ಮುಖ್ಯಸ್ಥರಾಗಿ ಬಿರಾಜ ತ್ರಿಪಾಠಿ ಹಾಗೂ ಇತರರನ್ನು ನೇಮಿಸಿದೆ.

ಮ್ಯೂಚುವಲ್ ಫಂಡ್ ವ್ಯವಹಾರದ ಕಾರ್ಯಾಚರಣೆ ಆರಂಭಿಸಲು ಜಿಯೊ ಬ್ಲ್ಯಾಕ್‌ರಾಕ್ ಅಸೆಟ್ ಮ್ಯಾನೇಜ್‌ಮೆಂಟ್‌ಗೆ ಮೇ 26ರಂದು, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅನುಮತಿ ನೀಡಿದೆ.

ಕೇಂದ್ರಕ್ಕೆ ₹8,076 ಕೋಟಿ ಲಾಭಾಂಶ ಪಾವತಿಸಿದ ಎಸ್‌ಬಿಐ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ₹8,076 ಕೋಟಿ ಲಾಭಾಂಶವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸೋಮವಾರ ಪಾವತಿಸಿದೆ. 2023–24ರ ಇದೇ ಅವಧಿಯಲ್ಲಿ ₹6,959 ಕೋಟಿ ಲಾಭಾಂಶ ಪಾವತಿಸಲಾಗಿತ್ತು.

ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಸೆಟ್ಟಿ ಅವರು ಲಾಭಾಂಶದ ಚೆಕ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಹಸ್ತಾಂತರಿಸಿದರು ಎಂದು ಹಣಕಾಸು ಸಚಿವಾಲಯದ ಕಚೇರಿ ‘ಎಕ್ಸ್’ನಲ್ಲಿ ತಿಳಿಸಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಪ್ರತಿ ಈಕ್ವಿಟಿ ಷೇರಿಗೆ ₹15.90 ಲಾಭಾಂಶ ಘೋಷಿಸಲಾಗಿದೆ. 2023–24ರ ಇದೇ ಅವಧಿಯಲ್ಲಿ ₹13.70 ಲಾಭಾಂಶ ನೀಡಲಾಗಿತ್ತು. 2024–25ರ ಆರ್ಥಿಕ ವರ್ಷದ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 16ರಷ್ಟು ಹೆಚ್ಚಳವಾಗಿದ್ದು, ₹70,901 ಕೋಟಿಯಷ್ಟು ದಾಖಲೆಯ ಲಾಭ ಗಳಿಸಿದೆ.

ಒತ್ತಡದಿಂದ ಟ್ರಂಪ್, ಮಸ್ಕ್ ಮಧ್ಯೆ ಕಲಹ: ಮಸ್ಕ್ ತಂದೆ

ಮಾಸ್ಕೊ (ರಾಯಿಟರ್ಸ್): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉದ್ಯಮಿ ಇಲಾನ್ ಮಸ್ಕ್ ನಡುವಿನ ಸಂಘರ್ಷವು ಕೂಡಲೇ ನಿಲ್ಲಬೇಕು ಎಂದು ಮಸ್ಕ್ ಅವರ ತಂದೆ ಇರೋಲ್ ಮಸ್ಕ್ ಸೋಮವಾರ ಹೇಳಿದರು.

ಟ್ರಂಪ್ ಮತ್ತು ಮಸ್ಕ್ ಅವರು ಕಳೆದ ವಾರ ಸಾಮಾಜಿಕ ಜಾಲತಾಣದ ಮೂಲಕ ಬಹಿರಂಗವಾಗಿ ಪರಸ್ಪರ ಟೀಕಿಸಿಕೊಂಡಿದ್ದರು.

ಅಮೆರಿಕ ಅಧ್ಯಕ್ಷರೊಂದಿಗೆ ಸಂಘರ್ಷಕ್ಕಿಳಿದು ಮಸ್ಕ್ ತಪ್ಪು ಮಾಡಿದರೇ ಎಂಬ ಪ್ರಶ್ನೆಗೆ ಇರೋಲ್ ಅವರು, ‘ಜನರಿಗೆ ಕೆಲವೊಮ್ಮೆ ಕೋಪದ ಭರದಲ್ಲಿ ಯೋಚಿಸಲು ಸಾಧ್ಯವಾಗುವುದಿಲ್ಲ. ಐದು ತಿಂಗಳಿನಿಂದ ತೀವ್ರ ಒತ್ತಡ ಉಂಟಾಗಿದ್ದರಿಂದ ಈ ರೀತಿ ಆಗುತ್ತಿದೆ’ ಎಂದರು.

ಎಲ್ಲವನ್ನೂ ಹೊರಹಾಕಿ, ಅಖಾಡದಲ್ಲಿ ಅವರಿಬ್ಬರೇ ಉಳಿದಿದ್ದರು. ಈಗ ಪರಸ್ಪರ ಕಿತ್ತಾಡಲು ಆರಂಭಿಸಿದ್ದಾರೆ. ಅದು ಕೂಡಲೇ ನಿಲ್ಲಬೇಕು ಎಂದರು.

ಇದು ಅಂತ್ಯಗೊಳ್ಳುವುದು ಹೇಗೆ ಎಂದು ಪ್ರಶ್ನಿಸಿದಾಗ, ‘ಪರಸ್ಪರ ಸಕಾರಾತ್ಮಕ ಹೇಳಿಕೆ ಮೂಲಕ ಶೀಘ್ರದಲ್ಲಿ ಸಂಘರ್ಷ ಕೊನೆಯಾಗಲಿದೆ’ ಎಂದರು.

ದೇಗುಲಗಳಲ್ಲಿ ಪ್ಲಾಸ್ಟಿಕ್ ನಿಷೇಧ

ಒಂದನೇ ಪುಟದಿಂದ...

ತಿರುಪತಿ, ತುಳಜಾಪುರ, ಪಂಢರಪುರ ಮತ್ತು ಇತರ ಕಡೆಗಳಲ್ಲಿ ಇಲಾಖೆ ವತಿಯಿಂದ ವಸತಿ ಭವನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು. ಹೊರ ರಾಜ್ಯಗಳಲ್ಲಿ ಈಗ ಇರುವ ವಸತಿ ಭವನಗಳಲ್ಲಿ ತ್ರಿ ಸ್ಟಾರ್ ಸೌಲಭ್ಯಗಳನ್ನು ಕಲ್ಪಿಸಲು ತೀರ್ಮಾನಿಸಲಾಗಿದೆ. ಕೊಠಡಿಗಳ ಬುಕ್ಕಿಂಗ್‌ಗೆ ಆನ್‌ಲೈನ್ ಮಾಡಲು ವ್ಯವಸ್ಥೆ ಮಾಡಲಾಗುವುದು ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.


ಚಾಮುಂಡೇಶ್ವರಿ, ಹುಲಿಗೆಮ್ಮ, ಮಲೆ ಮಹದೇಶ್ವರ, ಘಾಟಿ ಸುಬ್ರಹ್ಮಣ್ಯ, ರೇಣುಕಾ ಎಲ್ಲಮ್ಮ ದೇವಸ್ಥಾನಗಳ ಅಭಿವೃದ್ಧಿ ಪ್ರಾಧಿಕಾರಗಳ ಮಾಸ್ಟರ್ ಪ್ಲ್ಯಾನ್ ರೂಪಿಸಲಾಗುವುದು. ಚಾಮುಂಡಿ ಬೆಟ್ಟದಲ್ಲಿ ಒತ್ತುವರಿ ಆಗಿದ್ದ 11 ಎಕರೆ ಜಮೀನುನನ್ನು ತೆರವು ಮಾಡಲಾಗಿದೆ. ಉಳಿದ ಜಾಗ ತೆರವು ಮಾಡಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ 15 ಸಾವಿರ ಎಕರೆ ದೇವಸ್ಥಾನಗಳ ಆಸ್ತಿಗಳ ಇಂಡೀಕರಣ ಕಾರ್ಯ ಮುಗಿದಿದೆ. ದೇವಸ್ಥಾನಗಳಿಗೆ ಸೇರಿದ 20 ಸಾವಿರ ಎಕರೆ ಜಮೀನಿಗೆ ಖಾತೆ ಮಾಡಬೇಕಾಗಿದೆ. ಕಾಯ್ದೆಯ ಪ್ರಕಾರ ಮೂರು ತಿಂಗಳ ಒಳಗೆ ದೇವಸ್ಥಾನದ ಆಸ್ತಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲಾಗುವುದು. ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಮುಜರಾಯಿ ದೇವಾಲಯಗಳ ಆಸ್ತಿಗಳ ಪ್ರತ್ಯೇಕ ಸಮೀಕ್ಷೆ ನಡೆಸುವುದರ ಜತೆಗೆ, ದೇವಸ್ಥಾನದ ಹೆಸರಿನಲ್ಲಿ ಖಾತೆ, ಆಸ್ತಿ ಪತ್ರ ದಾಖಲೆಗಳು ಸರಿಯಾಗಿ ಇರದಿದ್ದರೆ ಮೂರು ತಿಂಗಳಲ್ಲಿ ಸರ್ವೆ ಮಾಡಿ ಅಧಿಸೂಚನೆ ಹೊರಡಿಸಲು ಸೂಚನೆ ನೀಡಲಾಗಿದೆ ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಅರ್ಚಕರಿಗೆ ತಸ್ತೀಕ್ ಅನ್ನು ಡಿಬಿಟಿ ಮೂಲಕ ಪಾವತಿಸಲಾಗುತ್ತಿದೆ. ಇದಕ್ಕಾಗಿ ಅರ್ಜಿ ಕರೆಯಲಾಗಿದ್ದು 25,536 ಅರ್ಚಕರ ಪೈಕಿ 14,433 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಉಳಿದವರು ಅರ್ಜಿ ಸಲ್ಲಿಸಿದರೆ ಅವರಿಗೂ ಡಿಬಿಟಿ ಮೂಲಕ ತಸ್ತೀಕ್ ಹಣ ಪಾವತಿ ಮಾಡಲಾಗುವುದು ಎಂದರು.

ಗ್ರೇತಾ ಥನ್‌ಬರ್ಗ್ ಬಂಧನ

ಜೆರುಸಲೇಂ (ಎಪಿ): ಸಮುದ್ರಯಾನದ ಮೂಲಕ ಗಾಜಾಪಟ್ಟಿಗೆ ತೆರಳುತ್ತಿದ್ದ ಹೋರಾಟಗಾರ್ತಿ ಗ್ರೇತಾ ಥನ್‌ಬರ್ಗ್ ಅವರನ್ನು ಇಸ್ರೇಲ್ ಪಡೆಗಳು ಬಂಧಿಸಿವೆ.



ಗ್ರೇತಾ ಥನ್‌ಬರ್ಗ್

ಮಾನವೀಯ ನೆರವಿನ ಸಾಮಗ್ರಿಗಳನ್ನು ಹೊತ್ತು ಚಲಿಸುತ್ತಿದ್ದ ಹಡಗನ್ನು ಸಹ ಸೋಮವಾರ ಮುಂಜಾನೆ ವಶಪಡಿಸಿಕೊಂಡಿವೆ.

ಗಾಜಾಪಟ್ಟಿಯಲ್ಲಿ ಇಸ್ರೇಲ್ ಸೇನಾಪಡೆ ನಡೆಸುತ್ತಿರುವ ಸೇನಾ ಕಾರ್ಯಾಚರಣೆ ವಿರುದ್ಧ ಪ್ರತಿಭಟಿಸಲು ಬೆಂಬಲಿಗರೊಂದಿಗೆ ಗ್ರೇತಾ ತೆರಳುತ್ತಿದ್ದರು.

ಗ್ರೇತಾ ಅವರನ್ನು ಬಂಧಿಸುವುದರ ಜೊತೆಗೆ ಮಾನವೀಯ ನೆರವಿನ ಸಾಮಗ್ರಿಗಳಿದ್ದ ಹಡಗನ್ನು ಇಸ್ರೇಲ್ ವಶಪಡಿಸಿಕೊಂಡಿರುವುದರಿಂದ, ಪ್ಯಾಲೆಸ್ಟೀನ್‌ನ 20 ಲಕ್ಷ ಜನರನ್ನು ಕ್ಷಾಮದ ಅಪಾಯಕ್ಕೆ ತಳ್ಳಿದಂತಾಗಿದೆ.

‘ಹೋರಾಟಗಾರರನ್ನು ಇಸ್ರೇಲ್ ಪಡೆಗಳು ಅಪಹರಿಸಿವೆ’ ಎಂದು ಈ ಸಮುದ್ರಯಾನ ಆಯೋಜಿಸಿದ್ದ ಫ್ರೀಡಂ ಫ್ಲೋಟಿಲ್ಲಾ ಒಕ್ಕೂಟ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಭಾರತ – ಚೀನಾ ನಡುವಿನ ಉದ್ವಿಗ್ನತೆ ತಗ್ಗಿದೆ: ರಷ್ಯಾ

ಮಾಸ್ಕೊ (ಪಿಟಿಐ): ಭಾರತ ಮತ್ತು ಚೀನಾ ನಡುವಿನ ಉದ್ವಿಗ್ನತೆಯು ಗಮನಾರ್ಹವಾಗಿ ಕಡಿಮೆಯಾಗಿದೆ. ಹೀಗಾಗಿ ರಷ್ಯಾ, ಭಾರತ ಹಾಗೂ ಚೀನಾಗಳ (ಆರ್‌ಐಸಿ) ಸ್ಥಗಿತಗೊಂಡಿರುವ ಮಾತುಕತೆಯನ್ನು ಪುನರಾರಂಭಿಸಬಹುದು ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಸೋಮವಾರ ಹೇಳಿದ್ದಾರೆ.



ಸೆರ್ಗಿ ಲಾವ್ರೊವ್

ಇಲ್ಲಿ ‘ಫೋರಂ ಆಫ್ ದಿ ಫ್ಯೂಚರ್–2050’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಆರ್‌ಐಸಿಗಳ ಜಂಟಿ ಕೆಲಸವು ಮರುಸ್ಥಾಪನೆಗೊಂಡರೆ, ಅದು ಯುರೇಷಿಯನ್‌ನ (ಯುರೋಪ್ ಮತ್ತು ಏಷ್ಯಾ) ಸಂಬಂಧದ ಮೊದಲ ಹೆಜ್ಜೆಯಾಗಲಿದೆ’ ಎಂದರು.

‘ಕೆಲವು ವರ್ಷಗಳಿಂದ ನಾವು ವಿದೇಶಾಂಗ ಸಚಿವರ ಮಟ್ಟದಲ್ಲಿ ಸಭೆ ಸೇರಿಲ್ಲ. ಈ ಸಮಸ್ಯೆ ಬಗ್ಗೆ ಚೀನಾದ ಸಹೋದ್ಯೋಗಿ ಹಾಗೂ ಭಾರತದ ವಿದೇಶಾಂಗ ಸಚಿವಾಲಯದ ಮುಖ್ಯಸ್ಥರೊಂದಿಗೆ ಚರ್ಚಿಸುತ್ತಿದ್ದೇವೆ. ಭಾರತ ಮತ್ತು ಚೀನಾ ಗಡಿಯಲ್ಲಿ ಉದ್ವಿಗ್ನತೆ ಕಡಿಮೆಯಾಗಿದೆ ಮತ್ತು ಪರಿಸ್ಥಿತಿ ಸ್ಥಿರವಾಗಿದೆ ಎಂದು ನಾನು ಭಾವಿಸುತ್ತೇನೆ. ಹೀಗಾಗಿ ಮೂರು ದೇಶಗಳು ಮಾತುಕತೆ ಪುನರಾರಂಭಿಸಬಹುದು’ ಎಂದರು.

479 ಡ್ರೋನ್‌ಗಳಿಂದ ರಷ್ಯಾ ದಾಳಿ: ಉಕ್ರೇನ್

ಕೀವ್ (ಎಪಿ): ಉಕ್ರೇನ್ ಮೇಲೆ 479 ಡ್ರೋನ್‌ಗಳಿಂದ ರಷ್ಯಾ ದಾಳಿ ನಡೆಸಿದೆ ಎಂದು ಉಕ್ರೇನ್ ವಾಯುಪಡೆಯು ಸೋಮವಾರ ಹೇಳಿದೆ.

ವಿವಿಧ ರೀತಿಯ 20 ಕ್ಷಿಪಣಿಗಳಿಂದಲೂ ದೇಶದ ವಿವಿಧೆಡೆ ದಾಳಿ ನಡೆಸಲಾಗಿದೆ. ದೇಶದ ಕೇಂದ್ರ ಮತ್ತು ಪಶ್ಚಿಮದ ಪ್ರದೇಶಗಳನ್ನು ಗುರಿಯಾಗಿಸಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಅದು ತಿಳಿಸಿದೆ.

ದೇಶದ ವಾಯು ರಕ್ಷಣಾ ವ್ಯವಸ್ಥೆಯು 277 ಡ್ರೋನ್‌ಗಳು ಮತ್ತು 19 ಕ್ಷಿಪಣಿಗಳನ್ನು ನಾಶ ಮಾಡಿದೆ. ರಷ್ಯಾದ 10 ಡ್ರೋನ್ ಅಥವಾ ಕ್ಷಿಪಣಿಗಳು ಮಾತ್ರ ತಮ್ಮ ಗುರಿಯನ್ನು ತಲುಪಿವೆ ಎಂದು ವಾಯುಪಡೆಯು ಹೇಳಿಕೆಯಲ್ಲಿ ತಿಳಿಸಿದೆ.

ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿ ಮಾತ್ರ ದಾಳಿ ಮಾಡಲಾಗುತ್ತಿದೆ ಎಂದು ರಷ್ಯಾ ಪ್ರತಿಕ್ರಿಯೆ ನೀಡಿದೆ.

ಕರಗಬಲ್ಲ ಪೊಟ್ಟಣದಲ್ಲಿ ನಂದಿನಿ ಹಾಲು

ಒಂದನೇ ಪುಟದಿಂದ...

ವಿದೇಶಿ ತಂತ್ರಜ್ಞಾನ: ‘ಪಾಲಿಥಿನ್ ಹಾಲಿನ ಕವರ್‌ಗಳಿಗೆ ಪರ್ಯಾಯವಾಗಿ ಬಮೂಲ್ ಬಳಸುತ್ತಿರುವ ಬಯೋಡಿಗ್ರೇಡೆಬಲ್ ಪೊಟ್ಟಣಗಳು ವಿದೇಶಿ ತಂತ್ರಜ್ಞಾನ ಆಧರಿಸಿದ್ದು, ಜೋಳದ ಗಂಜಿಯಿಂದ (ಕಾರ್ನ್ ಸ್ಟಾರ್ಚ್) ತಯಾರಾಗಿವೆ. ಸ್ಥಳೀಯ ಕಂಪನಿಯೇ ಕವರ್‌ಗಳನ್ನು ತಯಾರಿಸಿ ಒದಗಿಸಿದೆ’ ಎಂದು ಬಮೂಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಎಸ್. ಟಿ.ಸುರೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಜೂನ್ 5, ವಿಶ್ವ ಪರಿಸರ ದಿನದಿಂದ ಸುಮಾರು 120 ಬಯೋಡಿಗ್ರೇಡೆಬಲ್ ಪ್ಯಾಕೆಟ್‌ಗಳಲ್ಲಿ ಹಾಲು ಪೂರೈಸುತ್ತಿದ್ದೇವೆ. ಸೋರಿಕೆ ಅಥವಾ ಗುಣಮಟ್ಟದ ಸಮಸ್ಯೆಗಳು ವರದಿಯಾಗಿಲ್ಲ’ ಎಂದು ಬಮೂಲ್ ಮಾಜಿ ಅಧ್ಯಕ್ಷ ಎಚ್.ಪಿ. ರಾಜ್‌ಕುಮಾರ್ ಹೇಳಿದರು.

‘ಆರಂಭದಲ್ಲಿ ಒಂದು ತಿಂಗಳವರೆಗೆ ಎರಡು ಲಕ್ಷ ಬಯೋಡಿಗ್ರೇಡೆಬಲ್ ಕವರ್‌ಗಳನ್ನು ಬಳಸಿ ಹಾಲನ್ನು ಪ್ಯಾಕಿಂಗ್ ಮಾಡಲಾಗುತ್ತಿದೆ. ಪ್ರಾಯೋಗಿಕವಾಗಿ ಈ ಕವರ್‌ಗಳು ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ಎಲ್ಲ ಕಡೆ ಬಳಸುವ ಆಲೋಚನೆ ಇದೆ’ ಎಂದು ಸುರೇಶ್ ಮಾಹಿತಿ ನೀಡಿದರು.

‘ಬಮೂಲ್ ನಿತ್ಯ 14 ಲಕ್ಷ ಲೀಟರ್ ಹಾಲು ಮತ್ತು ಮೊಸರು ಮಾರಾಟ ಮಾಡುತ್ತದೆ. ಅದರಲ್ಲಿ 200 ಎಂ.ಎಲ್. ನಿಂದ 1 ಲೀಟರ್‌ವರೆಗೆ ಹಾಲು–ಮೊಸರಿನ ಪ್ಯಾಕಿಂಗ್‌ಗೆ ನಿತ್ಯ ಸುಮಾರು 20 ಲಕ್ಷ ಪ್ಲಾಸ್ಟಿಕ್ ಕವರ್‌ಗಳನ್ನು ಬಳಸುತ್ತಿತ್ತು. ಇಷ್ಟೂ ತ್ಯಾಜ್ಯ ನಿತ್ಯ ಪ್ರಕೃತಿ ಮಡಿಲು ಸೇರುತ್ತಿತ್ತು. ಇನ್ನು ಮುಂದೆ ಅದಕ್ಕೆ ಮುಕ್ತಿ ಸಿಗಲಿದೆ’ ಎಂದು ಬಮೂಲ್ ಮೂಲಗಳು ತಿಳಿಸಿವೆ.

ದೇಶದಲ್ಲೇ ಮೊದಲ ಬಾರಿಗೆ ಬಯೋ ಡಿಗ್ರೇಡೆಬಲ್ ಹಾಲಿನ ಪ್ಯಾಕೆಟ್‌ಗಳನ್ನು ಬಮೂಲ್ ಹೊಸದಾಗಿ ಬಿಡುಗಡೆ ಮಾಡಿದೆ. ಪ್ಲಾಸ್ಟಿಕ್ ಬಳಕೆ ತಡೆಗೆ ಹೆಜ್ಜೆ ಇಟ್ಟಿದೆ

ಡಿ.ಕೆ.ಸುರೇಶ್, ಬಮೂಲ್ ನಿರ್ದೇಶಕ

ಇತ್ತೀಚಿನ ವರ್ಷಗಳಲ್ಲಿ ಡೇರಿ ಉದ್ಯಮದ ಕೆಲವು ಕಂಪನಿಗಳು, ಪ್ಲಾಸ್ಟಿಕ್ ಪೊಟ್ಟಣಗಳನ್ನು ಬದಲಾಯಿಸುವುದು ದುಬಾರಿ ಕೆಲಸ. ಇದು ಪ್ರಾಯೋಗಿಕವಾಗಿ ಅಸಾಧ್ಯ’ ಎಂದು ಹೇಳಿದ್ದವು. ‘ಬೆಲೆ ಕುರಿತು ಯಾವುದೇ ಮಾತುಕತೆ ನಡೆಸಿಲ್ಲ’ ಎಂದು ಹೇಳಿರುವ ಬಮೂಲ್ ಅಧಿಕಾರಿಗಳು, ಶೇ 5ರಷ್ಟು ಬೆಲೆ ಹೆಚ್ಚಾಗಬಹುದು’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಸ್ಕರಿಸುವುದು ಕಷ್ಟವಾಗುತ್ತಿದ್ದು, ಪರ್ಯಾಯ ಪೊಟ್ಟಣಗಳನ್ನು ಬಳಸುವಂತೆ 2018ರಲ್ಲಿ ಕೆಎಂಎಫ್ ಅನ್ನು ಒತ್ತಾಯಿಸಿತ್ತು. ಆದರೆ, ಕೆಎಂಎಫ್ ಪ್ಲಾಸ್ಟಿಕ್ ಪೊಟ್ಟಣದಲ್ಲೇ ಹಾಲು ಪೂರೈಕೆಯನ್ನು ಮುಂದುವರಿಸಿತ್ತು.

ವಿಳಿಂಜಂಗೆ ಬಂತು ಜಗತ್ತಿನ ಅತಿ ದೊಡ್ಡ ಹಡಗು

ಹಡಗಿನ ವಿಶೇಷ

399.9 ಮೀಟರ್ ಉದ್ದ

61.3 ಮೀಟರ್ ಅಗಲ

24,346 ಟಿಇಯು– ಸರಕು ಹೊತ್ತೊಯ್ಯುವ ಸಾಮರ್ಥ್ಯ

ಫಿಫಾ ಫುಟ್‌ಬಾಲ್ ಮೈದಾನಕ್ಕಿಂತ ನಾಲ್ಕು ಪಟ್ಟು ದೊಡ್ಡದು



‘ಎಂಎಸ್‌ಸಿ ಇರಿನಾ’ ಹಡಗು–ಪಿಟಿಐ ಚಿತ್ರ

ತಿರುವನಂತಪುರ (ಪಿಟಿಐ): ಜಗತ್ತಿನ ಅತಿ ದೊಡ್ಡ ಸರಕು ಸಾಗಣೆ ಹಡಗು ‘ಎಂಎಸ್‌ಸಿ ಇರಿನಾ’ ಇಲ್ಲಿನ ವಿಳಿಂಜಂ ಅಂತರರಾಷ್ಟ್ರೀಯ ಬಂದರಿಗೆ ಸೋಮವಾರ ಬೆಳಿಗ್ಗೆ ತಲುಪಿತು ಎಂದು ಬಂದರು ಅಧಿಕಾರಿಗಳು ತಿಳಿಸಿದರು.

ಸಾಂಪ್ರದಾಯಿಕ ಜಲನಮನ ಸಲ್ಲಿಸುವ ಮೂಲಕ ಹಡಗನ್ನು ಬರಮಾಡಿಕೊಳ್ಳಲಾಯಿತು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಈ ಸಂದರ್ಭದಲ್ಲಿ ಹಾಜರಿದ್ದರು.

ಏಷ್ಯಾ ಮತ್ತು ಯುರೋಪ್ ಮಧ್ಯೆ ದೊಡ್ಡ ಪ್ರಮಾಣದ ಸರಕುಗಳ ಸಾಗಣೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಹಡಗನ್ನು ವಿನ್ಯಾಸಗೊಳಿಸಲಾಗಿದೆ. ಈ ಹಡಗು ವ್ಯಾಪಾರ ಮಾರ್ಗಗಳು ಮತ್ತು ಸಾಗಣೆಯ ದಕ್ಷತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಬಂದರು ಪ್ರಕಟಣೆಯಲ್ಲಿ ತಿಳಿಸಿದೆ.

ವಿಳಿಂಜಂ ಬಂದರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮೇ 2ರಂದು ರಾಷ್ಟ್ರಕ್ಕೆ ಸಮರ್ಪಿಸಿದ್ದರು.

ಮೂವರು ದುಷ್ಕರ್ಮಿಗಳ ಬಂಧನ

ಮಧುಚಂದ್ರದಲ್ಲಿ ಪತಿ ಹತ್ಯೆ: ಶರಣಾದ ಪತ್ನಿ

ಲಖನೌ (ಪಿಟಿಐ): ಮಧುಚಂದ್ರದ ಸಮಯದಲ್ಲೇ ಹಂತಕರಿಗೆ ಸುಪಾರಿ ನೀಡಿ ಪತಿಯನ್ನೇ ಕೊಲೆ ಮಾಡಿಸಿದ್ದ ಪತ್ನಿಯು ಉತ್ತರ ಪ್ರದೇಶದ ಗಾಜಿಪುರ ಪೊಲೀಸರಿಗೆ ಶರಣಾಗಿದ್ದಾಳೆ.

ಹತ್ಯೆಗೆ ಸಂಬಂಧಿಸಿದಂತೆ ಲಲಿತ್‌ಪುರದ ಆಕಾಶ್ ರಜಪೂತ್ ಮತ್ತು ಇಂದೋರ್‌ನ ಇಬ್ಬರು ದುಷ್ಕರ್ಮಿಗಳನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಇಂದೋರ್‌ನ ಸಾರಿಗೆ ಉದ್ಯಮಿ ರಾಜ ರಘುವಂಶಿ, ಸೋನಮ್ ಅವರನ್ನು ಮೇ 11ರಂದು ವಿವಾಹವಾಗಿದ್ದರು. ಮಧುಚಂದ್ರಕ್ಕಾಗಿ ಮೇಘಾಲಯಕ್ಕೆ ತೆರಳಿದ್ದರು. ಮೇ 23ರಂದು ದಂಪತಿ ನಾಪತ್ತೆಯಾಗಿದ್ದರು. ಜೂನ್ 2ರಂದು ರಘುವಂಶಿ ಅವರ ಶವ ಶಿಲ್ಲಾಂಗ್ ಸಮೀಪದ ಜಲಪಾತದ ಕಮರಿಯಲ್ಲಿ ಸಿಕ್ಕಿತ್ತು. ಸೋನಮ್‌ಗಾಗಿ ಪೊಲೀಸರು ಶೋಧ ಮುಂದುವರಿಸಿದ್ದರು.



ಸೋನಮ್–ರಾಜ ರಘುವಂಶಿ

ಪತಿಯನ್ನು ಕೊಲ್ಲುವಂತೆ ಸೋನಮ್ ಸುಪಾರಿ ನೀಡಿದ್ದರು ಎಂದು ಬಂಧಿತರು ತಪ್ಪೊಪ್ಪಿಕೊಂಡಿದ್ದಾರೆ ಎಂದು ಮೇಘಾಲಯದ ಪೊಲೀಸ್ ಮಹಾನಿರ್ದೇಶಕ ಐ. ನಾನ್ರಾಂಗ್ ತಿಳಿಸಿದ್ದಾರೆ.

ಲಾಸ್ ಏಂಜಲೀಸ್‌ನಲ್ಲಿ ಬಿಗುವಿನ ವಾತಾವರಣ

ಲಾಸ್ ಏಂಜಲೀಸ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕಾನೂನು ಸುವ್ಯವಸ್ಥೆ ಕಾಪಾಡಲು ನ್ಯಾಷನಲ್ ಗಾರ್ಡ್ಸ್‌ನ ಸಿಬ್ಬಂದಿಯನ್ನು ನಿಯೋಜಿಸಿದ ಬೆನ್ನಲ್ಲೇ, ಲಾಸ್ ಏಂಜಲೀಸ್‌ನಲ್ಲಿ ಭಾನುವಾರ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಟ್ರಂಪ್ ಕ್ರಮ ವಿರೋಧಿಸಿ ಸಾವಿರಾರು ಪ್ರತಿಭಟನಕಾರರು ಬೀದಿಗಿಳಿದು ಆಕ್ರೋಶ ವ್ಯಕ್ತಪಡಿಸಿದರು.

ವಲಸೆ ಅಧಿಕಾರಿಗಳು ಕೈಗೊಂಡಿರುವ ಶೋಧ ಕಾರ್ಯಾಚರಣೆ ವಿರೋಧಿಸಿ ಲಾಸ್ ಏಂಜಲೀಸ್‌ನಲ್ಲಿ ಸತತ ಮೂರನೇ ದಿನವೂ ಪ್ರತಿಭಟನೆ ನಡೆಯಿತು.





ಒಬ್ಬ ನಟನಾಗಿ ನನ್ನನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ನಾಲ್ಕು ತಿಂಗಳು ಈ ಸೆಟ್‌ಗಾಗಿ ಶ್ರಮ ಹಾಕಲಾಗಿದೆ. ಕಳೆದ 32 ದಿನದಿಂದ ಇಲ್ಲಿ ಚಿತ್ರೀಕರಣ ನಡೆದಿದೆ. ದಿನಕ್ಕೆ ನಾಲ್ಕು ಕ್ಯಾಮೆರಾಗಳಲ್ಲಿ ಶೂಟಿಂಗ್ ನಡೆಯುತ್ತಿದೆ. ನನ್ನ ಮಗನೂ ಇದರಲ್ಲಿ ನಟಿಸಿದ್ದಾನೆ. 'ಪಿನಾಕ'ನಾಗಿ ಬಹಳ ರೋಮಾಂಚನವಾಗಿದೆ. ಇದು ನನ್ನ ಸಿನಿಪಯಣದಲ್ಲೇ ಭಿನ್ನವಾದ ಸಿನಿಮಾ ಆಗುತ್ತದೆ ಎನ್ನುವ ವಿಶ್ವಾಸವಿದೆ.

–ಗಣೇಶ್, ನಟ

ಪಿನಾಕನ ಸೆಟ್‌ನೊಳಗಿಂದ...

'ಕೃಷ್ಣಂ ಪ್ರಣಯ ಸಖಿ' ಬೆನ್ನಲ್ಲೇ ನಟ ಗಣೇಶ್ ಒಪ್ಪಿಕೊಂಡಿದ್ದ 'ಪಿನಾಕ' ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ. ಬಿ.ಧನಂಜಯ್ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಚಿತ್ರದ ಶೂಟಿಂಗ್ ನೆಲಮಂಗಲದ ಸಮೀಪ ನಡೆಯುತ್ತಿದೆ.

ಚಿತ್ರಕ್ಕಾಗಿ ಆರು ಎಕರೆ ಪ್ರದೇಶದಲ್ಲಿ ದೊಡ್ಡ ಸೆಟ್ ಹಾಕಲಾಗಿದ್ದು, 500 ವರ್ಷಗಳ ಹಿಂದಿನ ದೇವಗಿರಿ ಎಂಬ ಸಾಮ್ರಾಜ್ಯವನ್ನು ಸೃಷ್ಟಿಸಲಾಗಿದೆ. ಸೆಟ್ ಬಳಸಿ ಒಂದು ನಗರವನ್ನೇ ನಿರ್ಮಿಸಲಾಗಿದ್ದು, ಮಧ್ಯದಲ್ಲೊಂದು ಅರ್ಧ-ನಾರೀಶ್ವರನ ಪ್ರತಿಮೆಯನ್ನು ನಿಲ್ಲಿಸಲಾಗಿದೆ. ಇನ್ನೂ 15 ದಿನ ಇದೇ ಸೆಟ್‌ನಲ್ಲಿ ಚಿತ್ರೀಕರಣ ನಡೆಯಲಿದ್ದು, ಚಿತ್ರದಲ್ಲಿ ಸೆಟ್ ಮಹತ್ವದ ಪಾತ್ರ ವಹಿಸುವುದರಿಂದ ಚಿತ್ರತಂಡವು ಸೆಟ್ ಚಿತ್ರಗಳನ್ನು ಗೌಪ್ಯವಾಗಿಟ್ಟಿದೆ.

'ಪಿನಾಕ' ಎಂದರೆ ಶಿವನ ತ್ರಿಶೂಲ. ಇದನ್ನೇ ಶೀರ್ಷಿಕೆಯನ್ನಾಗಿ ಇಡಲಾಗಿದ್ದು, ಗಣೇಶ್ ಈ ಚಿತ್ರದಲ್ಲಿ 'ಕ್ಷುದ್ರ' ಹಾಗೂ 'ರುದ್ರ' ಎಂಬ ಎರಡು ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಚಿತ್ರತಂಡ ಸುದ್ದಿಗೋಷ್ಠಿ ಮೂಲಕ ಚಿತ್ರದ ವಿವರಣೆ ನೀಡಿತು.



ಧನಂಜಯ್

'ಇದು ನನ್ನ ಚೊಚ್ಚಲ ಸಿನಿಮಾ' ಎಂದು ಮಾತು ಆರಂಭಿಸಿದ ನಿರ್ದೇಶಕ ಧನಂಜಯ್, 'ಇದೀಗ ಎರಡನೇ ಹಂತದ ಚಿತ್ರೀಕರಣ ನಡೆಸುತ್ತಿದ್ದೇವೆ. ಈ ಹಂತದಲ್ಲಿ ಹೆಚ್ಚಿನ ಗ್ರಾಫಿಕ್ಸ್ ಇದೆ. ಹೀಗಾಗಿ ಶೂಟಿಂಗ್ ಜೊತೆ ಜೊತೆಗೇ ಹೈದರಾಬಾದ್‌ನಲ್ಲಿ ಸಿಜಿ ಕೆಲಸಗಳೂ ನಡೆಯುತ್ತಿವೆ. ಮಳೆ ಗಾಳಿಯ ನಡುವೆ ಕಳೆದ ಒಂದು ತಿಂಗಳಿನಿಂದ ಚಿತ್ರೀಕರಣ ಮಾಡುತ್ತಿದ್ದೇವೆ. ಇದೊಂದು ಕಾಲ್ಪನಿಕ ಕಥೆ. ಪ್ರತಿನಿತ್ಯ 800–900 ಜೂನಿಯರ್ ಆರ್ಟಿಸ್ಟ್‌ಗಳು ಸೆಟ್‌ನಲ್ಲಿದ್ದರು. ಸಂತೋಷ್ ಪಾಂಚಾಲ ಎಂಬುವವರು ಈ ಸೆಟ್‌ಗಳನ್ನು ಹಾಕಿದ್ದು, ಸುಮಾರು ನಾಲ್ಕೈದು ತಿಂಗಳ ಕಾಲ ಸೆಟ್ ನಿರ್ಮಾಣಕ್ಕೆ ಸಮಯ ತೆಗೆದುಕೊಂಡಿದ್ದೆವು. 'ಪಿನಾಕ' ಎಂದರೆ ಒಬ್ಬ ರಕ್ಷಕ. ಇದೊಂದು ಕಾವಲುಗಾರ ಪರಂಪರೆಯ ಕುರಿತಾದ ಚಿತ್ರ. ಮುಂದಿನ ವರ್ಷ ಈ ಚಿತ್ರ ತೆರೆಗೆ ಬರಲಿದೆ. ಇದು ಒತ್ತಡದಿಂದ ಮಾಡುವ ಕೆಲಸವಲ್ಲ. ಪ್ರತಿಯೊಂದು ದೃಶ್ಯಗಳನ್ನು ಸೂಕ್ಷ್ಮವಾಗಿ ಹೆಣೆಯುತ್ತಿದ್ದೇನೆ. ನಯನ್ ಸಾರಿಕಾ ಹಾಗೂ ಅರ್ಚನಾ ಅಯ್ಯರ್ ಚಿತ್ರದ ನಾಯಕಿಯರು. ನಾನು ಗಣೇಶ್ ಅವರಿಗೆ ನೃತ್ಯ ನಿರ್ದೇಶಕನಾಗಿ ಕೆಲಸ ಮಾಡಿದ್ದು, ಹೀಗಾಗಿ ಸಿನಿಮಾದಲ್ಲಿ ನಿರ್ದೇಶನ ಮಾಡುವುದು ಸುಲಭವಾಗಿದೆ' ಎಂದರು.

ತೆಲುಗು, ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿ ಹಲವು ಚಿತ್ರಗಳನ್ನು ನಿರ್ಮಿಸಿರುವ ಟಿ.ಜಿ.ವಿಶ್ವಪ್ರಸಾದ್ ಸಾರಥ್ಯದ ಪೀಪಲ್ ಮೀಡಿಯಾ ಫ್ಯಾಕ್ಟರಿ ಈ ಸಿನಿಮಾ ನಿರ್ಮಾಣ ಮಾಡುತ್ತಿದೆ. ಚಿತ್ರದಲ್ಲಿ ರಾಜಗುರುವಿನ ಪಾತ್ರಕ್ಕೆ ನಟ ಶ್ರೀನಿವಾಸಮೂರ್ತಿ ಬಣ್ಣ ಹಚ್ಚಿದ್ದಾರೆ. ನಟರಾದ ಹೊನ್ನವಳ್ಳಿ ಕೃಷ್ಣ, ರವೀಂದ್ರನಾಥ್ ತಾರಾಬಳಗದಲ್ಲಿದ್ದಾರೆ. ಕರಮ್ ಚಾವ್ಲಾ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಯುವನ 'ಬ್ಯಾಂಗಲ್ ಬಂಗಾರಿ'

'ರತ್ನನ್ ಪ್ರಪಂಚ' ಖ್ಯಾತಿಯ ರೋಹಿತ್ ಪದಕಿ ನಿರ್ದೇಶನದ, ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಸಿನಿಮಾ ಜುಲೈ 18 ರಂದು ತೆರೆಕಾಣಲಿದ್ದು, ಚಿತ್ರದ ಎರಡನೇ ಹಾಡು ಬಿಡುಗಡೆಯಾಗಿದೆ.

'ಬ್ಯಾಂಗಲ್ ಬಂಗಾರಿ' ಹಾಡಿನಲ್ಲಿ ನಟ ಯುವ ರಾಜ್‌ಕುಮಾರ್ ಹಾಗೂ ನಟಿ ಸಂಜನಾ ಆನಂದ್ ಹೆಜ್ಜೆ ಹಾಕಿದ್ದಾರೆ. ತನ್ನ ಇಷ್ಟದ ಹುಡುಗಿಯನ್ನು 'ಬ್ಯಾಂಗಲ್ ಬಂಗಾರಿ'ಯೆಂದು ಕರೆಯುತ್ತಾ ನಾಯಕ ಕುಣಿದು ಕುಪ್ಪಳಿಸಿರುವ ಹಾಡು ಇದಾಗಿದೆ. ಹಾಡಿಗೆ ನಾಗಾರ್ಜುನ್ ಶರ್ಮಾ ಸಾಹಿತ್ಯ ಬರೆದಿದ್ದು, ಮುರಳಿ ಮಾಸ್ಟರ್ ನೃತ್ಯ ಸಂಯೋಜನೆ ಮಾಡಿದ್ದಾರೆ. ಚರಣ್ ರಾಜ್ ಸಂಗೀತ ನೀಡಿರುವ ಹಾಡಿಗೆ ಅಂತೋನಿ ದಾಸನ್ ದನಿಯಾಗಿದ್ದಾರೆ. ಈಗಾಗಲೇ ಟೈಟಲ್ ಟ್ರ್ಯಾಕ್ ಹಾಗೂ ಟೀಸರ್ ಮೂಲಕ ಕುತೂಹಲ ಹೆಚ್ಚಿಸಿರುವ ಈ ಚಿತ್ರದಲ್ಲಿ ಯುವ ರಾಜ್‌ಕುಮಾರ್ ರಗಡ್ ಪಾತ್ರದಲ್ಲಿದ್ದಾರೆ. ಬೆಂಗಳೂರು ಭೂಗತ ಜಗತ್ತಿನ ಕಥೆಯನ್ನು ಹೊಂದಿರುವ ಈ ಸಿನಿಮಾದಲ್ಲಿ ಸಂಪದ ಹಾಗೂ 'ಸಲಗ' ಸಿನಿಮಾ ಖ್ಯಾತಿಯ ಸಂಜನಾ ಆನಂದ್ ನಾಯಕಿಯರಾಗಿ ನಟಿಸಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೊಸ್ ಹಾಗೂ ಜಯಣ್ಣ ಕಂಬೈನ್ಸ್ ಬ್ಯಾನರ್‌ಗಳ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ಅತುಲ್ ಕುಲಕರ್ಣಿ, ಡೆಡ್ಲಿ ಆದಿತ್ಯ ಸೇರಿದಂತೆ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ.



ಯುವ, ಸಂಜನಾ



ಎಡಗೈಗೆ ಕಿಚ್ಚನ ಸಾಥ್

ನಟ ದಿಗಂತ್ ನಟನೆಯ 'ಎಡಗೈಯೇ ಅಪಘಾತಕ್ಕೆ ಕಾರಣ' ಸಿನಿಮಾ ಜೂನ್ 13ರಂದು ತೆರೆಕಾಣುತ್ತಿದ್ದು, ಚಿತ್ರದ ಟ್ರೇಲರ್ ಅನ್ನು ಇತ್ತೀಚೆಗೆ ನಟ ಕಿಚ್ಚ ಸುದೀಪ್ ಬಿಡುಗಡೆಗೊಳಿಸಿದರು.

ಭಿನ್ನವಾದ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಸಮರ್ಥ್ ಬಿ. ಕಡಕೊಳ್ ಆ್ಯಕ್ಷನ್ ಕಟ್ ಹೇಳಿದ್ದು, ಸಿನಿಮಾದ ಶೀರ್ಷಿಕೆ ಹೇಳುವಂತೆಯೇ ಎಡಗೈ ಬಳಸುವವರ ಕಷ್ಟಗಳ ಸುತ್ತ ಚಿತ್ರದ ಕಥೆಯಿದೆ. ಟ್ರೇಲರ್ ಅನ್ನು ಭಿನ್ನವಾಗಿ ಪ್ರಸ್ತುತಪಡಿಸಲಾಗಿದ್ದು, ಡಾರ್ಕ್ ಕಾಮಿಡಿ ಜಾನರ್‌ನಲ್ಲಿ ಚಿತ್ರದ ಕಥಾಹಂದರವಿದೆ. ಸಿನಿಮಾದಲ್ಲಿ ದಿಗಂತ್ ಜೊತೆ ನಿಧಿ ಸುಬ್ಬಯ್ಯ ಮತ್ತು ಧನು ಹರ್ಷ ನಟಿಸಿದ್ದು, 'ಪಂಚರಂಗಿ' ಸಿನಿಮಾ ಬಳಿಕ ದಿಗಂತ್ ಮತ್ತು ನಿಧಿ ಸುಬ್ಬಯ್ಯ ಮತ್ತೆ ಒಟ್ಟಿಗೆ ಕಾಣಿಸಿಕೊಂಡಿದ್ದಾರೆ. 'ಲೋಹಿತ್ ರಾಜೇಶ್' ಎಂಬ ಪಾತ್ರದಲ್ಲಿ ದಿಗಂತ್ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ.

'ಜಗತ್ತಿನಲ್ಲಿ ಶೇಕಡ 10ರಷ್ಟು ಎಡಗೈ ಬಳಸುವವರಿದ್ದೂ, ಇಡೀ ಜಗತ್ತಿನ ವಸ್ತುಗಳೆಲ್ಲವೂ ಬಲಗೈಯವರಿಗಾಗಿ ವಿನ್ಯಾಸಗೊಂಡಿವೆ. ಇಂತಹ ಸ್ಥಿತಿಯಲ್ಲಿ ಬಲವಂತವಾಗಿ ಬಲಗೈ ಬಳಸಲು ಹೋದಾಗ ನಡೆಯುವ ಘಟನೆಗಳೇ ಚಿತ್ರದ ಕಥೆ' ಎಂದಿದೆ ಚಿತ್ರತಂಡ. ಇಲ್ಲಿ ದಿಗಂತ್‌ಗೆ ಜೋಡಿ ಯಾರು ಎನ್ನುವುದನ್ನು ಕುತೂಹಲವನ್ನು ಟ್ರೇಲರ್‌ನಲ್ಲಿ ಬಿಟ್ಟುಕೊಟ್ಟಿಲ್ಲ. ಚಿತ್ರಕ್ಕೆ 'ಬ್ಲಿಂಕ್' ಮತ್ತು 'ಶಾಖಾಹಾರಿ' ಸಿನಿಮಾದ ನಿರ್ಮಾಪಕರು ಕೈ ಜೋಡಿಸಿದ್ದಾರೆ. ಇದು ಸಮರ್ಥ್ ಅವರ ನಿರ್ದೇಶನದ ಚೊಚ್ಚಲ ಚಿತ್ರವಾಗಿದೆ.

ಜಿಎಸ್‌ಟಿ ಹಾಕಲು ಸಜ್ಜಾದ ಸೃಜನ್

ನಟ ಸೃಜನ್ ಲೋಕೇಶ್ ನಿರ್ದೇಶನದ ಚೊಚ್ಚಲ ಸಿನಿಮಾ 'ಜಿಎಸ್‌ಟಿ' ಸದ್ಯದಲ್ಲೇ ತೆರೆಗೆ ಬರಲಿದೆ ಎಂದು ಚಿತ್ರತಂಡ ತಿಳಿಸಿದೆ.

ಸುಮಾರು ಎರಡು ವರ್ಷಗಳ ಹಿಂದೆ ಸೆಟ್ಟೇರಿದ್ದ ಈ ಸಿನಿಮಾವನ್ನು ಸಂದೇಶ್ ಪ್ರೊಡಕ್ಷನ್ಸ್‌ನಡಿ ಸಂದೇಶ್ ನಾಗರಾಜ್ ನಿರ್ಮಾಣ ಮಾಡಿದ್ದಾರೆ. ನಿರ್ದೇಶನದ ಜೊತೆಗೆ ನಾಯಕನಾಗಿಯೂ ಸೃಜನ್ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಚಿತ್ರಕ್ಕೆ ಸೆನ್ಸಾರ್ ಮಂಡಳಿಯು 'ಯು/ಎ' ಪ್ರಮಾಣಪತ್ರ ನೀಡಿದೆ. ಚಿತ್ರದ ನಿರ್ಮಾಣದ ಜೊತೆಗೆ ನಿರ್ಮಾಪಕ ಸಂದೇಶ್ ಅವರು ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿ ಗಿರಿಜಾ ಲೋಕೇಶ್ ಹಾಗೂ ಸೃಜನ್ ಅವರ ಪುತ್ರ ಸುಕೃತ್ ಅಭಿನಯಿಸಿದ್ದಾರೆ. ತಮ್ಮ ನಿರ್ದೇಶನದ ಮೊದಲ ಚಿತ್ರದಲ್ಲೇ ಸೃಜನ್ ತಮ್ಮ ತಾಯಿ ಹಾಗೂ ಮಗನಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಮನರಂಜನೆಯೇ ಪ್ರಧಾನವಾಗಿರುವ ಈ ಚಿತ್ರಕ್ಕೆ 'ಘೋಸ್ಟ್ ಇನ್ ಟ್ರಬಲ್' ಎಂಬ ಅಡಿಬರಹವಿದೆ.

ಸೃಜನ್ ಲೋಕೇಶ್‌ಗೆ ನಾಯಕಿಯಾಗಿ ರಜನಿ ಭಾರದ್ವಾಜ್ ನಟಿಸಿದ್ದಾರೆ. ಪ್ರಮೋದ್ ಶೆಟ್ಟಿ, ಶೋಭರಾಜ್, ಶರತ್ ಲೋಹಿತಾಶ್ವ, ನಿವೇದಿತಾ, ಅರವಿಂದ್ ರಾವ್, ತಬಲ ನಾಣಿ, ರವಿಶಂಕರ್ ಗೌಡ, ವಿನೋದ್ ಗೊಬ್ಬರಗಾಲ ಮುಂತಾದವರು ಈ ಸಿನಿಮಾದ ತಾರಾಬಳಗದಲ್ಲಿದ್ದಾರೆ. ಚಂದನ್ ಶೆಟ್ಟಿ ಸಂಗೀತ ನಿರ್ದೇಶನ ಹಾಗೂ ಗುಂಡ್ಲುಪೇಟೆ ಸುರೇಶ್ ಅವರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ರಾಜಶೇಖರ್ ಸಂಭಾಷಣೆ ಬರೆದಿದ್ದಾರೆ.



ಜಿಎಸ್‌ಟಿ
ಸೃಜನ್, ರಜನಿ

ಎರಡು ದಶಕಗಳ ಕಾಲ ಪಾರಮ್ಯ ಮೆರೆದಿದ್ದ ಜೊಕೊವಿಚ್, ನಡಾಲ್, ಫೆಡರರ್

ಅಲ್ಕರಾಜ್–ಸಿನ್ನರ್ ಯುಗಾರಂಭ

ಪ್ಯಾರಿಸ್ (ಎಎಫ್‌ಪಿ): ಯುವ ತಾರೆಗಳಾದ ಕಾರ್ಲೋಸ್ ಅಲ್ಕರಾಜ್ ಮತ್ತು ಯಾನಿಕ್ ಸಿನ್ನರ್ ಅವರು ಭಾನುವಾರ ಗ್ರ್ಯಾನ್‌ಸ್ಲಾಮ್ ಫೈನಲ್‌ಗಳ ಇತಿಹಾಸದಲ್ಲೇ ಸಾರ್ವಕಾಲಿಕ ಶ್ರೇಷ್ಠ ಪಂದ್ಯವೊಂದನ್ನು ಆಡಿದರು. ಆ ಮೂಲಕ ಮುಂಬರುವ ವರ್ಷಗಳಲ್ಲಿ ಪುರುಷರ ಟೆನಿಸ್ ಕ್ಷೇತ್ರವನ್ನು ಆಳುವ ಎರಡು ಪ್ರಬಲ ಶಕ್ತಿಗಳು ತಾವಾಗಬಹುದು ಎಂಬುದನ್ನು ತೋರಿದರು.


22 ವರ್ಷ ವಯಸ್ಸಿನ ಅಲ್ಕರಾಜ್ ಮತ್ತು 23 ವರ್ಷ ವಯಸ್ಸಿನ ಸಿನ್ನರ್ ನಡುವಣ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆದ ಫೈನಲ್ ತೀವ್ರ ಸಂಚಲನ ಮೂಡಿಸಿದ ಪಂದ್ಯ ಎಂಬುದು ನಿಸ್ಸಂಶಯ.

ಸ್ಪೇನ್‌ನ ಅಲ್ಕರಾಜ್ ಮತ್ತು ಇಟಲಿಯ ಸಿನ್ನರ್ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಫೈನಲ್‌ನಲ್ಲಿ ಎದುರಾಳಿಗಳಾಗಿದ್ದರು. ಪಂದ್ಯವೂ ನಿರಾಸೆ ಮೂಡಿಸಲಿಲ್ಲ; ಮೇಲುಗೈನ ಏರಿಳಿತ, ತಿರುವುಗಳು, ನಾಟಕೀಯ ಕ್ಷಣ, ಆರಂಭದಿಂದ ಕೊನೆಯವರೆಗೆ ಅದ್ಭುತ ಹೊಡೆತಗಳು... ಹೀಗೆ ರೋಚಕತೆ ಸಾಕಷ್ಟು ಇತ್ತು.

'ನಾನು ಈವರೆಗೆ ಆಡಿದ ಅತಿ ರೋಮಾಂಚನಕಾರಿ ಪಂದ್ಯಗಳಲ್ಲಿ ಇದೂ ಒಂದು ಎಂಬುದರಲ್ಲಿ ಅನುಮಾನವೇ ಇಲ್ಲ' ಎಂದು ಅಲ್ಕರಾಜ್ ಸುದೀರ್ಘ ಫೈನಲ್ ನಂತರ ಬಣ್ಣಿಸಿದರು. ಈ ಪಂದ್ಯ ದಾಖಲೆಯ 5 ಗಂಟೆ 29 ನಿಮಿಷ ನಡೆಯಿತು.

ಅಲ್ಕರಾಜ್ ಈ ಪಂದ್ಯದಲ್ಲಿ 4-6, 6-7 (4–7), 6–4, 7–6 (7–3), 7–6 (10–2)ರಿಂದ ಗೆಲುವು ಸಾಧಿಸಿದರು. ಅವರು, ಮೂರು ಬಾರಿ ಸೋಲಿನ ಸುಳಿಯಿಂದ (ಮ್ಯಾಚ್ ಪಾಯಿಂಟ್ ರಕ್ಷಿಸಿ) ಪಾರಾಗುವಲ್ಲಿ ಯಶಸ್ವಿ ಆದರು.

'ನಾನೂ ರಫೆಲ್ ನಡಾಲ್ ಅವರ ಹಾಗೆ 22 ವರ್ಷ, ಒಂದು ತಿಂಗಳು ಮೂರು ದಿನ ಇರುವಂತೆ ಐದನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದೆ. ಇದು ದೈವಲೀಲೆಯೇನೊ' ಎಂದು ಸ್ಪೇನ್‌ನವರೇ ಆದ ಅಲ್ಕರಾಜ್ ಬಣ್ಣಿಸಿದರು. ನಡಾಲ್, ಅಲ್ಕರಾಜ್‌ಗೆ ಅಚ್ಚುಮೆಚ್ಚಿನ ಆಟಗಾರ.



ಸಿಂಗಲ್ಸ್ ಟ್ರೋಫಿ ಗೆದ್ದ ಕಾರ್ಲೋಸ್ ಅಲ್ಕರಾಜ್ ಪಂದ್ಯದ ಸಮಯ ತೋರಿಸಿದರು 'ಎಕ್ಸ್' ಚಿತ್ರ

ನಡಾಲ್ ಅವರ ಐದನೇ ಪ್ರಮುಖ ಪ್ರಶಸ್ತಿ ಬಂದಿದ್ದು 2008ರ ವಿಂಬಲ್ಡನ್‌ನಲ್ಲಿ. ರೋಜರ್ ಫೆಡರರ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದ ಆ ಫೈನಲ್ ಕೂಡ ಗ್ರ್ಯಾನ್‌ಸ್ಲಾಮ್ ಇತಿಹಾಸದ ಸ್ಮರಣೀಯ ಪಂದ್ಯಗಳಲ್ಲಿ ಒಂದು.

ಸಿನ್ನರ್ ವಿರುದ್ಧ ತಮ್ಮ ಗೆಲುವಿಗೆ ಹೆಚ್ಚಿನ ತೂಕ ನೀಡಲು ಅಲ್ಕರಾಜ್ ಹಿಂಜರಿದರು. 2012ರ ಆಸ್ಟ್ರೇಲಿಯಾ ಓಪನ್‌ನಲ್ಲಿ ನಡಾಲ್ ವಿರುದ್ಧ ನೊವಾಕ್ ಜೊಕೊವಿಚ್ ಸಾಧಿಸಿದ ಗೆಲುವು ಹೆಚ್ಚು ಮೌಲ್ಯಯುತವಾದುದು ಎಂಬ ಅಭಿಪ್ರಾಯಪಟ್ಟರು.

'ಜನರು ನಮ್ಮ ಪಂದ್ಯಕ್ಕೆ ಹೆಚ್ಚಿನ ಮೌಲ್ಯ ನೀಡಿದರೆ, ಅದು ನನಗೆ ಸಲ್ಲುವ ಅತಿದೊಡ್ಡ ಗೌರವ' ಎಂದು ಅಲ್ಕರಾಜ್ ಹೇಳಿದರು. 'ಆದರೆ ಗ್ರ್ಯಾಂಡ್‌ಸ್ಲಾಮ್ ಮತ್ತು ರೋಲ್ಯಾಂಡ್ ಗ್ಯಾರೋಸ್ ಇತಿಹಾಸದಲ್ಲಿ ನಮ್ಮ ಪಂದ್ಯಕ್ಕೆ ಉನ್ನತ ಸ್ಥಾನ ನೀಡಿದ್ದರಿಂದ ಸಂತಸವಾಗಿದೆ' ಎಂದರು.

ಈ ಹಿಂದೆ ಜೊಕೊವಿಚ್, ನಡಾಲ್ ಮತ್ತು ಫೆಡರರ್ ನಡುವಣ ಪೈಪೋಟಿ ಸುಮಾರು ಎರಡು ದಶಕಗಳ ಕಾಲ ಮುಂದುವರಿದಿತ್ತು. ಆದರೆ, 'ಭಿನ್ನ ತಲೆಮಾರುಗಳ ಹೋಲಿಕೆ ಮಾಡುವುದು ಕಷ್ಟ. ಆದರೆ ತಾವೂ ಅದರ ಭಾಗವಾಗಿರುವುದು ಹೆಮ್ಮೆ ಮೂಡಿಸುತ್ತದೆ' ಎಂದು ಸಿನ್ನರ್ ಪ್ರತಿಕ್ರಿಯಿಸಿದರು.

ಮೂವರು ವಿಜೇತರು– ಫೆಡರರ್: ಈ ಅಸಾಧಾರಣ ಆಟಕ್ಕೆ ಇವರಿಬ್ಬರನ್ನು ಅಭಿನಂದಿಸಿದವರಲ್ಲಿ ಫೆಡರರ್ ಮತ್ತು ನಡಾಲ್ ಮೊದಲಿಗರಾಗಿದ್ದರು.

'ಪ್ಯಾರಿಸ್‌ನಲ್ಲಿ ಇಂದು ಮೂವರು ವಿಜೇತರಾದರು. ಕಾರ್ಲೋಸ್ ಅಲ್ಕರಾಜ್, ಯಾನಿಕ್ ಸಿನ್ನರ್ ಮತ್ತು ಟೆನಿಸ್ ಎಂಬ ಸುಂದರ ಆಟ. ಎಂಥಾ ಪಂದ್ಯ!' ಎಂದು ಟೆನ್ನಿಸ್ ದಿಗ್ಗಜ ರೋಜರ್ ಫೆಡರರ್ ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ.

ಫೆಡರರ್ ಮತ್ತು ನಡಾಲ್ ನಿವೃತ್ತರಾಗಿದ್ದು, ಜೊಕೊವಿಚ್‌ಗೆ ಈಗ 38 ವರ್ಷ ವಯಸ್ಸು. ಈ 'ಮೂವರು ಮಹಾತಾರೆಗಳು' ಸೃಷ್ಟಿಸಿರುವ ನಿರ್ವಾತವನ್ನು ಯಾರು ತುಂಬುತ್ತಾರೆ ಎಂಬ ಪ್ರಶ್ನೆಗೆ ಉತ್ತರ ದೊರಕಿದೆ.

'ಆಟವನ್ನು ಹೊಸ ಮಟ್ಟಕ್ಕೆ ಏರಿಸಿರುವ ಇವರಿಬ್ಬರ ಪೈಪೋಟಿಯನ್ನು ಸವಿಯುವ ಅವಕಾಶ ನಮಗೆ ದೊರಕಿರುವುದನ್ನು ನಂಬಲಾಗುತ್ತಿಲ್ಲ' ಎಂದು ಏಳು ಗ್ರ್ಯಾನ್‌ಸ್ಲಾಮ್ ವಿಜೇತ ಮ್ಯಾಟ್ಸ್ ವಿಲಾಂಡರ್ ಹೇಳಿದ್ದಾರೆ. ರಫಾ, ರೋಜರ್ ಮತ್ತು ನೊವಾಕ್ ನಂತರ ಇಷ್ಟು ಬೇಗ ಈ ಮಟ್ಟದ ಆಟಗಾರರು ಬರಬಹುದೆಂದು ಯೋಚಿಸಿರಲಿಲ್ಲ ಎಂದಿದ್ದಾರೆ.

ಅಲ್ಕರಾಜ್ ಮತ್ತು ಸಿನ್ನರ್ ಮೊದಲ ಮುಖಾಮುಖಿ 2021ರ ಪ್ಯಾರಿಸ್ ಮಾಸ್ಟರ್ಸ್‌ನಲ್ಲಿ ಆಗಿತ್ತು. ಅಲ್ಕರಾಜ್ 12 ಮುಖಾಮುಖಿಗಳಲ್ಲಿ ಕೊನೆಯ ಐದು ಸೇರಿ ಎಂಟು ಬಾರಿ ಜಯಿಸಿದ್ದಾರೆ. ಆದರೆ ಈ ಇಬ್ಬರೂ ಉತ್ತುಂಗಕ್ಕೇರುವ ಮೊದಲೇ ಟೆನಿಸ್‌ಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ

ಈ ಹಿಂದೆ ಈ ಕ್ಲೇ ಅಂಕಣದಲ್ಲಿ ಅತಿ ಸುದೀರ್ಘ ಪಂದ್ಯದಲ್ಲಿ (1982ರಲ್ಲಿ ಗಿಲೆರ್ಮೊ ವಿಲಾಸ್ ವಿರುದ್ಧ 4 ಗಂಟೆ 42 ನಿಮಿಷ) ಆಡಿದ ಹೆಗ್ಗಳಿಕೆ ಈ ವಿಲಾಂಡರ್ ಅವರದ್ದು.

ಭಾರತಕ್ಕೆ ಸತತ ಎರಡನೇ ಸೋಲು

ಎಫ್‌ಐಎಚ್ ಪ್ರೊ ಲೀಗ್ ಹಾಕಿ: ನೆದರ್ಲೆಂಡ್ಸ್‌ಗೆ 3–2 ಗೆಲುವು

ಆಮ್‌ಸ್ಟಲ್ವೀನ್ (ನೆದರ್ಲೆಂಡ್ಸ್) (ಪಿಟಿಐ): ಭಾರತ ಪುರುಷರ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್‌ನ ಯುರೋಪಿಯನ್ ಲೆಗ್‌ನಲ್ಲಿ ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ವಿರುದ್ಧ ಸತತ ಎರಡನೇ ಸೋಲು ಅನುಭವಿಸಿತು.

ಹರ್ಮನ್‌ಪ್ರೀತ್ ಸಿಂಗ್ ಬಳಗವು ಸೋಮವಾರ ನಡೆದ ರೋಚಕ ಪಂದ್ಯದಲ್ಲಿ 2–3 ಗೋಲುಗಳಿಂದ ಆತಿಥೇಯ ತಂಡಕ್ಕೆ ಮಣಿಯಿತು. ಭಾರತ ಗಳಿಸಿದ್ದ ಒಟ್ಟು ಒಂಬತ್ತು ಪೆನಾಲ್ಟಿ ಕಾರ್ನರ್‌ಗಳಲ್ಲಿ ಎಂಟನ್ನು ಕೈಚೆಲ್ಲಿದ್ದು ದುಬಾರಿ ಆಯಿತು. ಇದೇ ತಂಡದ ವಿರುದ್ಧ ಶನಿವಾರ ಭಾರತ 1–2 ಗೋಲುಗಳಿಂದ ಮುಗ್ಗರಿಸಿತ್ತು.

ಭಾರತ ಪರ 100ನೇ ಪಂದ್ಯ ಆಡಿದ ಅಭಿಷೇಕ್ 20ನೇ ನಿಮಿಷದಲ್ಲಿ ಗೋಲು ಗಳಿಸಿದರೆ, ಜುಗ್ರಾಜ್ ಸಿಂಗ್ 54ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿದರು.

ನೆದರ್ಲೆಂಡ್ಸ್ ಪರ ವ್ಯಾನ್ ಡ್ಯಾಮ್ ಥಿಜ್ಸ್ (24ನೇ), ಟಿಜೆಪ್ ಹೋಡೆಮೇಕರ್ಸ್ (33ನೇ) ಮತ್ತು ಜಿಪ್ ಯಾನ್ಸೆನ್ (57ನೇ) ಗೋಲು ದಾಖಲಿಸಿದರು.

ಭಾರತ ತಂಡವು ಆರನೇ ನಿಮಿಷದಲ್ಲೇ ಗೋಲು ಅವಕಾಶ ಪಡೆದಿತ್ತು. ಆದರೆ, ಅಭಿಷೇಕ್ ಹೊಡೆತ ಗುರಿ ತಪ್ಪಿತು. 18ನೇ ನಿಮಿಷದಲ್ಲಿ ಭಾರತ ಮೊದಲ ಪೆನಾಲ್ಟಿ ಕಾರ್ನರ್ ಅವಕಾಶ ಗಳಿಸಿತು. ಈ ಅವಕಾಶವನ್ನು ಹರ್ಮನ್‌ಪ್ರೀತ್ ಕೈಚೆಲ್ಲಿದರು. ಅದಾದ ಎರಡು ನಿಮಿಷದಲ್ಲಿ ಶಿಲಾನಂದ್ ಲಾಕ್ರ ಕೊಟ್ಟ ಪಾಸ್‌ನ ನೆರವಿನಿಂದ ಅಭಿಷೇಕ್ ಚೆಂಡನ್ನು ಗುರಿ ಸೇರಿಸಿ ಭಾರತಕ್ಕೆ ಆರಂಭಿಕ ಮೇಲುಗೈ ಒದಗಿಸಿದರು.

ಈ ಸಂಭ್ರಮ ಹೆಚ್ಚು ಹೊತ್ತು ಇರಲಿಲ್ಲ. ನಾಲ್ಕು ನಿಮಿಷಗಳ ನಂತರದಲ್ಲಿ ಥಿಯೆರ್ರಿ ಬ್ರಿಂಕ್‌ಮನ್ ಅವರ ಪಾಸ್‌ನಿಂದ ಬಂದ ಚೆಂಡು ಭಾರತದ ಆಟಗಾರರೊಬ್ಬರ ಸ್ಟಿಕ್‌ಗೆ ಬಡಿದು ಗೋಲು ಪೆಟ್ಟಿಗೆಯ ಮುಂದೆ ಸಾಗಿದಾಗ ವ್ಯಾನ್ ಅವರು ಸರಿಯಾದ ಸ್ಥಳಕ್ಕೆ ಸೇರಿಸಿದರು. ಹೀಗಾಗಿ, ಮಧ್ಯಂತರದ ವೇಳೆಗೆ ಸ್ಕೋರ್ 1–1 ಸಮಬಲಗೊಂಡಿತು.

ಮೂರನೇ ಕ್ವಾರ್ಟರ್‌ನ ಮೂರನೇ ನಿಮಿಷದಲ್ಲಿ ಟಿಜೆಪ್ ಗೋಲು ಗಳಿಸಿ, ಡಚ್ ತಂಡಕ್ಕೆ ಮುನ್ನಡೆ ಒದಗಿಸಿದರು. ಡೆರ್ಕ್ ಡಿ ವಿಲ್ಡರ್ ಅವರ ಪಾಸ್ ಅನ್ನು ಅಚ್ಚುಕಟ್ಟಾಗಿ ಗುರಿಯತ್ತ ತಿರುಗಿಸಿದರು. ಅದಾದ ಕೆಲವು ನಿಮಿಷಗಳ ನಂತರ ಆತಿಥೇಯ ತಂಡಕ್ಕೆ ಮೊದಲ ಪೆನಾಲ್ಟಿ ಕಾರ್ನರ್ ಸಿಕ್ಕಿತು. ಆದರೆ, ಭಾರತ ಅದನ್ನು ಸಮರ್ಥವಾಗಿ ತಡೆಯಿತು.



ಭಾರತದ ಆಟಗಾರ ಅಭಿಷೇಕ್ ಪಿಟಿಐ ಸಂಗ್ರಹ ಚಿತ್ರ

ನಂತರದಲ್ಲಿ ಭಾರತ ತಂಡವು ಸತತ ಆರು ಪೆನಾಲ್ಟಿ ಕಾರ್ನರ್‌ಗಳನ್ನು ಗಳಿಸಿತು. ಹರ್ಮನ್‌ಪ್ರೀತ್ ಮತ್ತು ಜುಗ್ರಾಜ್ ಸಿಂಗ್ ಅವುಗಳಲ್ಲಿ ಯಾವುದನ್ನೂ ಗೋಲಾಗಿ ಪರಿವರ್ತಿಸುವಲ್ಲಿ ವಿಫಲರಾದರು.

54ನೇ ನಿಮಿಷದಲ್ಲಿ ಭಾರತಕ್ಕೆ ಇನ್ನೆರಡು ಪೆನಾಲ್ಟಿ ಕಾರ್ನರ್‌ಗಳು ದೊರೆತವು. ಅದರಲ್ಲಿ ಎರಡನೆಯದನ್ನು ಜುಗ್ರಾಜ್ ಗೋಲಾಗಿ ಪರಿವರ್ತಿಸಿದ್ದರಿಂದ ಮತ್ತೆ ಸ್ಕೋರ್ ಸಮಬಲಗೊಂಡಿತು. ಆದರೆ, ಪಂದ್ಯ ಮುಕ್ತಾಯಕ್ಕೆ ಮೂರು ನಿಮಿಷ ಇರುವಂತೆ ಡಚ್ ಆಟಗಾರ ಯಾನ್ಸೆನ್, ಪೆನಾಲ್ಟಿ ಕಾರ್ನರ್‌ನಲ್ಲಿ ಕೈಚಳಕ ತೋರಿ, ಗೆಲುವಿನ ರೂವಾರಿಯಾದರು.

ಭಾರತ ತಂಡವು ಬುಧವಾರ ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ. ಹರ್ಮನ್‌ಪ್ರೀತ್ ಬಳಗ 10 ಪಂದ್ಯಗಳಲ್ಲಿ 15 ಅಂಕ ಗಳಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ನೆದರ್ಲೆಂಡ್ಸ್ ಅಷ್ಟೇ ಪಂದ್ಯಗಳಿಂದ 20 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ.

ಎಟಿಪಿ ರ್‍ಯಾಂಕಿಂಗ್: ಸಿನ್ನರ್ ಅಗ್ರಸ್ಥಾನ ಅಬಾಧಿತ

ಪ್ಯಾರಿಸ್ (ಎಎಫ್‌ಪಿ): ಇಟಲಿಯ ಟೆನಿಸ್ ಆಟಗಾರ ಯಾನಿಕ್ ಸಿನ್ನರ್ ಅವರು ಫ್ರೆಂಚ್ ಓಪನ್ ಫೈನಲ್‌ನಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ವಿರುದ್ಧ ಪರಾಭವಗೊಂಡರೂ ಸೋಮವಾರ ಪ್ರಕಟಗೊಂಡ ಎಟಿಪಿ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.



ಯಾನಿಕ್ ಸಿನ್ನರ್

ಕಳೆದ ವರ್ಷ ಸೆಮಿಫೈನಲ್‌ನಲ್ಲಿ ಅಲ್ಕರಾಜ್ ವಿರುದ್ಧ ಸೋತಿದ್ದ ಸಿನ್ನರ್, ಈ ಬಾರಿ ಫೈನಲ್ ತಲುಪಿದ್ದಕ್ಕಾಗಿ 500 ಅಂಕ ಗಳಿಸಿದರು. ಒಟ್ಟು 10,880 ಪಾಯಿಂಟ್ಸ್ ಗಳೊಂದಿಗೆ ಮೊದಲ ಸ್ಥಾನವನ್ನು ಬಲಪಡಿಸಿಕೊಂಡರು.

ಸತತ ಎರಡನೇ ವರ್ಷ ಪ್ರಶಸ್ತಿ ಗೆದ್ದ ಅಲ್ಕರಾಜ್ (8,850 ಅಂಕ) ಸ್ಥಾನದಲ್ಲೂ ಯಾವುದೇ ಬದಲಾವಣೆಯಾಗಿಲ್ಲ. ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ (6,385) ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

65ನೇ ಸ್ಥಾನಕ್ಕೆ ಜಿಗಿದ ಲೋಯಿಸ್: ವೈಲ್ಡ್‌ಕಾರ್ಡ್ ಪ್ರವೇಶ ಪಡೆದು ಫ್ರೆಂಚ್ ಓಪನ್‌ನಲ್ಲಿ ಅನಿರೀಕ್ಷಿತವಾಗಿ ಸೆಮಿಫೈನಲ್ ತಲುಪಿದ್ದ ಫ್ರಾನ್ಸ್‌ನ ಲೋಯಿಸ್ ವಸ್ಸೂನ್ ಅವರು ಡಬ್ಲ್ಯುಟಿಎ ರ್‍ಯಾಂಕಿಂಗ್‌ನಲ್ಲಿ 296 ಸ್ಥಾನಗಳ ಬಡ್ತಿ ಪಡೆದಿದ್ದಾರೆ.

361ನೇ ರ್‍ಯಾಂಕ್‌ನಲ್ಲಿದ್ದ ಲೋಯಿಸ್ ಅವರು ಮೂರನೇ ಶ್ರೇಯಾಂಕದ ಜೆಸಿಕಾ ಪೆಗುಲಾ ಮತ್ತು ಆರನೇ ಶ್ರೇಯಾಂಕದ ಮಿರಾ ಆ್ಯಂಡ್ರೀವಾ ಅವರಿಗೆ ಆಘಾತ ನೀಡಿ ನಾಲ್ಕರ ಘಟ್ಟ ಪ್ರವೇಶಿಸಿದ್ದರು. ಹೀಗಾಗಿ, 22 ವರ್ಷ ವಯಸ್ಸಿನ ಆಟಗಾರ್ತಿ ವೃತ್ತಿಜೀವನದಲ್ಲೇ ಅತ್ಯುತ್ತಮ 65ನೇ ಸ್ಥಾನವನ್ನು ತಲುಪಿದ್ದಾರೆ.

ಬೆಲರೂಸ್‌ನ ಅರಿನಾ ಸಬಲೆಂಕಾ (11,553) ಫ್ರೆಂಚ್ ಓಪನ್ ಫೈನಲ್‌ನಲ್ಲಿ ಸೋತರೂ ಅವರ ಅಗ್ರಸ್ಥಾನ ಅಬಾಧಿತವಾಗಿದೆ. ಪ್ರಶಸ್ತಿ ಗೆದ್ದ ಅಮೆರಿಕದ ಕೊಕೊ ಗಾಫ್ (8,083) ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಟಿಎನ್‌ಪಿಎಲ್: ಅನುಚಿತ ವರ್ತನೆ ತೋರಿದ ಅಶ್ವಿನ್

ಕೊಯಮತ್ತೂರು (ಪಿಟಿಐ): ತಮಿಳುನಾಡು ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಸಂಶಯಾಸ್ಪದ ಎಲ್‌ಬಿ ತೀರ್ಪಿಗೆ ರವಿಚಂದ್ರನ್ ಅಶ್ವಿನ್ ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಮಾಜಿ ಅಂತರರಾಷ್ಟ್ರೀಯ ಆಟಗಾರನ ಈ ನಡೆಗೆ ಜಾಲತಾಣಗಳಲ್ಲಿ ಟೀಕೆಗಳು ವ್ಯಕ್ತವಾಗಿವೆ.

ದಿಂಡಿಗಲ್ ಡ್ರಾಗನ್ಸ್ ಮತ್ತು ಐಡ್ರೀಮ್ ತಿರುಪ್ಪೂರ್ ತಮಿಳಗನ್ಸ್ ನಡುವಣ ಪಂದ್ಯದಲ್ಲಿ ಅಶ್ವಿನ್ ಡ್ರಾಗನ್ಸ್ ತಂಡ ಮುನ್ನಡೆಸುತ್ತಿದ್ದರು.

ಎಡಗೈ ಸ್ಪಿನ್ನರ್ ಸಾಯಿಕಿಶೋರ್ ಎಸೆದ ಐದನೇ ಓವರಿನ ಐದನೇ ಎಸೆತದಲ್ಲಿ ಅಶ್ವಿನ್ ಅವರು ಪ್ಯಾಡಲ್ ಸ್ವೀಪ್‌ಗೆ ಯತ್ನಿಸಿದ ವೇಳೆ ಚೆಂಡು ಪ್ಯಾಡ್‌ಗೆ ಬಡಿಯಿತು. ಅವರು ತಕ್ಷಣ ರನ್ನಿಗೆ ಓಡಿದರು. ಬೌಲರ್ ಮನವಿ ಸಲ್ಲಿಸಿದಾಗ ಅಂಪೈರ್ ವೆಂಕಟೇಶನ್ ಕೃತಿಕಾ ನೀಡಿದ ಔಟ್ ತೀರ್ಪಿಗೆ ಅವರು ಅಸಹನೆ ವ್ಯಕ್ತಪಡಿಸಿದರು.



ಆರ್. ಅಶ್ವಿನ್

ಅಶ್ವಿನ್ 10 ಎಸೆತಗಳಲ್ಲಿ 18 ರನ್ ಬಾರಿಸಿದ್ದರು. ಡ್ರಾಗನ್ಸ್ ತಂಡದ ಡಿಆರ್‌ಎಸ್ ಕೋಟಾ ಮುಗಿದಿತ್ತು. ರಿಪ್ಲೇಯಲ್ಲಿ ಚೆಂಡು ಲೆಗ್‌ಸ್ಟಂಪ್‌ನ ಆಚೆ ಬಿದ್ದಂತೆ ಕಂಡಿತ್ತು.

ಹಿಂತಿರುಗುವ ದಾರಿಯಲ್ಲಿ ಅಶ್ವಿನ್ ಅವರು ಕೃತಿಕಾ ಅವರನ್ನು ದುರುಗುಟ್ಟಿ ನೋಡಿ ಪ್ರಶ್ನಿಸಿದರು. ಬೌಂಡರಿ ಗೆರೆ ದಾಟಿದ ತಕ್ಷಣ ಗ್ಲೌಸ್‌ಗಳನ್ನು ಕಳಚಿ ನೆಲಕ್ಕೆ ಒಗೆದರು. ಅಶ್ವಿನ್ ಅವರ ತಂಡ 9 ವಿಕೆಟ್‌ಗಳಿಂದ ಸೋತಿತು.

ಕಾಲ್ತುಳಿತ ಪ್ರಕರಣ: ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ತಪ್ಪಿದ ಅವಕಾಶ?

ದಕ್ಷಿಣ ಆಫ್ರಿಕಾ 'ಎ' ವಿರುದ್ಧದ ಪಂದ್ಯ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸಿ ದಕ್ಷಿಣ ಆಫ್ರಿಕಾ 'ಎ' ವಿರುದ್ಧ ಬೆಂಗಳೂರಿನಲ್ಲಿ ನವೆಂಬರ್‌ನಲ್ಲಿ ನಿಗದಿಯಾಗಿದ್ದ ಮೂರು ಏಕದಿನ ಪಂದ್ಯಗಳನ್ನು ಬಿಸಿಸಿಐ ಸೋಮವಾರ ರಾಜಕೋಟ್‌ಗೆ ಸ್ಥಳಾಂತರಿಸಿದೆ. ಇತ್ತೀಚೆಗೆ ಆರ್‌ಸಿಬಿ ವಿಜಯೋತ್ಸವ ವೇಳೆ ನಡೆದ ಕಾಲ್ತುಳಿತದ ಪ್ರಕರಣ ಈ ನಿರ್ಧಾರದ ಹಿಂದೆ ಪ್ರಮುಖ ಪಾತ್ರ ವಹಿಸಿದೆ ಎನ್ನಲಾಗಿದೆ.

ಜೂನ್ 4ರಂದು ಐಪಿಎಲ್ ಕಪ್ ಗೆಲುವಿನ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಆವರಣದ ಬಳಿ ಕಾಲ್ತುಳಿತದಿಂದ 11 ಮಂದಿ ಸಾವಿಗೀಡಾಗಿದ್ದರು.

ಬೆಂಗಳೂರಿನಲ್ಲಿ ನವೆಂಬರ್ 13, 16 ಮತ್ತು 19ರಂದು ನಿಗದಿಯಾಗಿದ್ದ ಪಂದ್ಯಗಳು, ಪರಿಷ್ಕೃತ ವೇಳಾಪಟ್ಟಿಯಂತೆ ಅದೇ ದಿನ ಸೌರಾಷ್ಟ್ರ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿವೆ.

ಆದರೆ ಪಂದ್ಯಗಳ ಸ್ಥಳಾಂತರ ನಿರ್ಧಾರದ ಹಿಂದೆ ಕಾಲ್ತುಳಿತ ಪ್ರಕರಣದ ಪಾತ್ರವಿಲ್ಲ ಎಂದು ಕೆಎಸ್‌ಸಿಎ ಅಧ್ಯಕ್ಷ ರಘುರಾಮ ಭಟ್ ತಿಳಿಸಿದರು. 'ಈ ತೀರ್ಮಾನದ ಹಿಂದೆ ಕಾಲ್ತುಳಿತ ಪ್ರಕರಣದ ಪಾತ್ರವಿಲ್ಲ. ಬೆಂಗಳೂರು ಮಾತ್ರ ಪಂದ್ಯ ಕಳೆದುಕೊಂಡಿಲ್ಲ. ಬೇರೆ ಕಡೆ ನಿಗದಿಯಾಗಿದ್ದ ಕೆಲವು ಪಂದ್ಯಗಳನ್ನೂ ಸ್ಥಳಾಂತರಿಸಲಾಗಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಬೆಂಗಳೂರಿನಲ್ಲಿ ಸೆಪ್ಟೆಂಬರ್ 30ರಂದು ಮಹಿಳಾ ಏಕದಿನ ವಿಶ್ವಕಪ್ ಪಂದ್ಯ ನಡೆಯಬೇಕಿದ್ದು, ಕಾಲ್ತುಳಿತ ತನಿಖೆ ಪ್ರಕ್ರಿಯೆಯು ಈ ಪಂದ್ಯದ ಮೇಲೂ ಪರಿಣಾಮ ಬೀರಬಹುದೇ ಎಂಬ ಪ್ರಶ್ನೆಗೆ, ಅದು ಇನ್ನೂ ಸಾಕಷ್ಟು ದೂರವಿದೆ ಎಂದರು.

ಬಿಸಿಸಿಐ ಜನರಲ್ ಮ್ಯಾನೇಜರ್ ಅಬೇ ಕುರುವಿಲ್ಲಾ ಅವರನ್ನು ಸಂಪರ್ಕಿಸಿದಾಗ, ಅವರು ಈ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದರು. 'ಸ್ಥಳಗಳ ಬದಲಾವಣೆ ಬಗ್ಗೆ ಮಾತನಾಡಲು ನಾನು ಅಧಿಕೃತ ವ್ಯಕ್ತಿಯಲ್ಲ' ಎಂದರು.

ಪ್ರಕರಣಕ್ಕೆ ಸಂಬಂಧಿಸಿ ಕೆಎಸ್‌ಸಿಎ ಆಡಳಿತ ಮಂಡಳಿಯ ವಹಿಸಿರುವ ಪಾತ್ರದ ಬಗ್ಗೆ ಮಂಡಳಿಗೆ ಸಮಾಧಾನವಿಲ್ಲ. ಇದು ಸಹ ದಂಡಿಸುವ ಕ್ರಮವೇ ಎಂದು ಮೂಲಗಳು ತಿಳಿಸಿವೆ. ಈಗಿನ ಆಡಳಿತ ಮಂಡಳಿಯ ಅಧಿಕಾರಾವಧಿ ಸೆ. 30ಕ್ಕೆ ಮುಗಿಯಲಿದ್ದು, ಅಷ್ಟರೊಳಗೆ ಈಗಿನ ಸಮಿತಿ ಮಹಿಳಾ ವಿಶ್ವಕಪ್‌ಗೆ ಚಿನ್ನಸ್ವಾಮಿ ಕ್ರೀಡಾಂಗಣವನ್ನು ಹೇಗೆ ಅಣಿಗೊಳಿಸುತ್ತದೆ ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

ಆದರೆ ದಕ್ಷಿಣ ಆಫ್ರಿಕಾ 'ಎ' ತಂಡದ ಎದುರು ನಾಲ್ಕು ದಿನಗಳ ಎರಡು ಪಂದ್ಯಗಳು ಬೆಂಗಳೂರಿನಲ್ಲೇ ನಡೆಯಲಿವೆ. ಆದರೆ ಇವು ಹೊರವಲಯದ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಅಕ್ಟೋಬರ್ 30 ರಿಂದ ನವೆಂಬರ್ 2 ಮತ್ತು ನವೆಂಬರ್ 6 ರಿಂದ 9ರವರೆಗೆ ನಿಗದಿಯಾಗಿವೆ.

ನವದೆಹಲಿ, ಕೋಲ್ಕತ್ತದ ಪಂದ್ಯಗಳ ಸ್ಥಳ ಬದಲು

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ ತಂಡಗಳ ಭಾರತ ಪ್ರವಾಸದ ವೇಳಾಪಟ್ಟಿಯಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕೆಲವು ಬದಲಾವಣೆಗಳನ್ನು ಮಾಡಿದೆ. ಕೋಲ್ಕತ್ತ ಮತ್ತು ದೆಹಲಿಯಲ್ಲಿ ನಡೆಯಬೇಕಾಗಿದ್ದ ಟೆಸ್ಟ್ ಪಂದ್ಯಗಳ ತಾಣಗಳನ್ನು ಅದಲುಬದಲು ಮಾಡಲಾಗಿದೆ.

ಭಾರತ ತಂಡವು ತವರಿನಲ್ಲಿ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಟೆಸ್ಟ್, ಏಕದಿನ ಮತ್ತು ಟಿ20 ಪಂದ್ಯಗಳನ್ನು ಆಡಲಿದೆ. ವೆಸ್ಟ್ ಇಂಡೀಸ್ ಎದುರಿನ ಮೊದಲ ಟೆಸ್ಟ್ ಪಂದ್ಯ ಅ. 2 ರಂದು ಅಹಮದಾಬಾದಿನಲ್ಲಿ ನಡೆಯಲಿದೆ. ಆದರೆ ಮೂಲ ವೇಳಾಪಟ್ಟಿಯಂತೆ ಕೋಲ್ಕತ್ತದಲ್ಲಿ ಅ. 10 ರಿಂದ ನಿಗದಿ ಆಗಿದ್ದ ಎರಡನೇ ಟೆಸ್ಟ್ ಪರಿಷ್ಕೃತ ವೇಳಾಪಟ್ಟಿ ಪ್ರಕಾರ ನವದೆಹಲಿಯಲ್ಲಿ ನಡೆಯಲಿದೆ.

ಪ್ರವಾಸಿ ದಕ್ಷಿಣ ಆಫ್ರಿಕಾ ತಂಡದ ಎದುರು ನ. 14ರಂದು ಆರಂಭವಾಗುವ ಮೊದಲ ಟೆಸ್ಟ್ ಪಂದ್ಯವನ್ನು ನವದೆಹಲಿಯಿಂದ ಕೋಲ್ಕತ್ತಕ್ಕೆ ಸ್ಥಳಾಂತರಿಸಿರುವುದಾಗಿ ಬಿಸಿಸಿಐ ಪ್ರಕಟಣೆ ತಿಳಿಸಿದೆ.

ತಾಣ ಬದಲಾವಣೆಗೆ ಬಿಸಿಸಿಐ ಕಾರಣ ಉಲ್ಲೇಖಿಸಿಲ್ಲ. ಆದರೆ ರಾಷ್ಟ್ರ ರಾಜಧಾನಿಯಲ್ಲಿ ವರ್ಷದ ಆ ಅವಧಿಯಲ್ಲಿ ಗಾಳಿಯ ಗುಣಮಟ್ಟ ಕುಸಿಯುವ ಅಪಾಯ ಇರುವುದು ಈ ನಿರ್ಧಾರಕ್ಕೆ ಕಾರಣ ಎನ್ನಲಾಗುತ್ತಿದೆ.

ದಕ್ಷಿಣ ಆಫ್ರಿಕಾ ತಂಡವು ತನ್ನ ಪ್ರವಾಸದಲ್ಲಿ ಮೂರೂ ಮಾದರಿಯ ಪಂದ್ಯಗಳನ್ನು ಆಡಲಿದೆ. ಎರಡು ಟೆಸ್ಟ್, ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನು ಆಡಲಿದೆ. ಗುವಾಹಟಿಯ ಬರ್ಸಪಾರಾ ಕ್ರೀಡಾಂಗಣವು ಟೆಸ್ಟ್ ಪಂದ್ಯದ ಆತಿಥ್ಯ ವಹಿಸಲಿರುವ ಹೊಸ ಕ್ರೀಡಾಂಗಣ ಎನಿಸಲಿದೆ. ಇಲ್ಲಿ ಹರಿಣಗಳ ಪಡೆಯ ವಿರುದ್ಧ ನವೆಂಬರ್ 22ರಿಂದ 26ರವರೆಗೆ ಎರಡನೇ ಟೆಸ್ಟ್ ನಡೆಯಲಿದೆ.

ಮೂರು ಏಕದಿನ ಪಂದ್ಯಗಳು ರಾಂಚಿ (ನ. 30), ರಾಯಪುರ (ಡಿ. 3) ಮತ್ತು ವಿಶಾಖಪಟ್ಟಣದಲ್ಲಿ (ಡಿ. 6) ನಡೆಯಲಿವೆ. ಐದು ಟಿ20 ಪಂದ್ಯಗಳು ಕ್ರಮವಾಗಿ ಕಟಕ್ (ಡಿ. 9), ಚಂಡೀಗಢ (ಡಿ. 11), ಧರ್ಮಶಾಲಾ (ಡಿ. 14), ಲಖನೌ (ಡಿ. 17) ಮತ್ತು ಅಹಮದಾಬಾದಿನಲ್ಲಿ (ಡಿ. 19) ನಡೆಯಲಿವೆ.

ಚೆನ್ನೈ ಪಂದ್ಯ ಬದಲು: ಆಸ್ಟ್ರೇಲಿಯಾ ಮಹಿಳಾ ತಂಡದ ವಿರುದ್ಧ ಸೆ. 14ರಂದು ಮಹಿಳಾ ಏಕದಿನ ಪಂದ್ಯದ ಆತಿಥ್ಯ ವಹಿಸಲು ತಮಿಳುನಾಡು ಕ್ರಿಕೆಟ್ ಸಂಸ್ಥೆ ಅಸಹಾಯಕತೆ ವ್ಯಕ್ತಪಡಿಸಿದೆ. ಈ ಪಂದ್ಯಗಳು ಸೆ. 30ರಂದು ಆರಂಭವಾಗುವ ಮಹಿಳಾ ಏಕದಿನ ವಿಶ್ವಕಪ್‌ಗೆ ತಾಲೀಮು ಆಗಿದ್ದವು. ಹೀಗಾಗಿ ಮೊದಲ ಎರಡು ಪಂದ್ಯಗಳನ್ನು ಮುಲ್ಲನಪುರದಲ್ಲಿ ಆಡಲಾಗುವುದು.

ಪೋರ್ಚುಗಲ್‌ಗೆ ನೇಷನ್ಸ್ ಲೀಗ್ ಪ್ರಶಸ್ತಿ

ಮ್ಯೂನಿಚ್, ಜರ್ಮನಿ (ಎಎಫ್‌ಪಿ): ಪೋರ್ಚುಗಲ್ ತಂಡವು ಯುಇಎಫ್‌ಎ ನೇಷನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಎರಡನೇ ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಭಾನುವಾರ ರಾತ್ರಿ ನಡೆದ ಪೋರ್ಚುಗಲ್ ಮತ್ತು ಹಾಲಿ ಚಾಂಪಿಯನ್ ಸ್ಪೇನ್ ನಡುವಣ ಫೈನಲ್ ಪಂದ್ಯವು ನಿಗದಿತ ಅವಧಿಯಲ್ಲಿ 2–2 ಗೋಲುಗಳಿಂದ ಡ್ರಾ ಆಯಿತು. ಪೆನಾಲ್ಟಿಯಲ್ಲಿ 5–3ರಿಂದ ಪೋರ್ಚುಗಲ್ ತಂಡ ಪಾರಮ್ಯ ಸಾಧಿಸಿತು.

21ನೇ ನಿಮಿಷದಲ್ಲಿ ಮಾರ್ಟಿನ್ ಜುಬಿಮೆಂಡಿ ಅವರು ಸ್ಪೇನ್ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. ಅದಾದ ಐದು ನಿಮಿಷದಲ್ಲಿ ಪೋರ್ಚುಗಲ್‌ನ ನುನೊ ಮೆಂಡಿಸ್ ಚೆಂಡನ್ನು ಗುರಿ ಸೇರಿಸಿದ್ದರಿಂದ ತಂಡಗಳ ಸ್ಕೋರ್ ಸಮಬಲಗೊಂಡಿತು.

ವಿರಾಮಕ್ಕೆ ಕೆಲವೇ ಕ್ಷಣ ಇರುವಾಗ ಮೈಕೆಲ್ ಒಯಾರ್‌ಜಬಲ್ (45ನೇ) ಗೋಲು ದಾಖಲಿಸಿದ್ದರಿಂದ ಸ್ಪೇನ್ ಮತ್ತೆ ಮೇಲುಗೈ ಪಡೆಯಿತು. ಆದರೆ, 61ನೇ ನಿಮಿಷದಲ್ಲಿ ಪೋರ್ಚುಗಲ್‌ನ ಅನುಭವಿ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ (61ನೇ) ಅಮೋಘ ರೀತಿಯಲ್ಲಿ ಗೋಲು ದಾಖಲಿಸಿದರು. ಹೀಗಾಗಿ, ಸ್ಕೋರ್ ಪುನಃ ಸಮವಾಯಿತು.

ಎರಡು ವರ್ಷಕೊಮ್ಮೆ ನಡೆಯುವ ಈ ಟೂರ್ನಿಯಲ್ಲಿ 2019ರಲ್ಲಿ ಪೋರ್ಚುಗಲ್ ಮೊದಲ ಬಾರಿ ಪ್ರಶಸ್ತಿ ಗೆದ್ದಿತ್ತು. 2023ರಲ್ಲಿ ಸ್ಪೇನ್ ತಂಡವು ಕ್ರೊವೇಷ್ಯಾ ತಂಡವನ್ನು ಮಣಿಸಿ ಚಾಂಪಿಯನ್ ಆಗಿತ್ತು.



ಎಎಫ್‌ಸಿ ಏಷ್ಯನ್ ಕಪ್ ಅರ್ಹತಾ ಸುತ್ತಿನ ಪಂದ್ಯ ಇಂದು

ಭಾರತಕ್ಕೆ ಹಾಂಗ್‌ಕಾಂಗ್ ಸವಾಲು

ಕೌಲೂನ್, ಹಾಂಗ್‌ಕಾಂಗ್ (ಪಿಟಿಐ): ಭಾರತ ಪುರುಷರ ಫುಟ್‌ಬಾಲ್ ತಂಡವು ಮಂಗಳವಾರ ಇಲ್ಲಿ ನಡೆಯಲಿರುವ ಎಎಫ್‌ಸಿ ಏಷ್ಯನ್ ಕಪ್ ಅರ್ಹತಾ ಸುತ್ತಿನ ನಿರ್ಣಾಯಕ ಪಂದ್ಯದಲ್ಲಿ ಆತಿಥೇಯ ಹಾಂಗ್‌ಕಾಂಗ್ ತಂಡವನ್ನು ಎದುರಿಸಲಿದೆ.

ಉಭಯ ತಂಡಗಳಿಗೆ ನಿರ್ಣಾಯಕವಾಗಿರುವ ಈ ಪಂದ್ಯದ ಎಲ್ಲಾ 50,000 ಟಿಕೆಟ್‌ಗಳು ಮಾರಾಟವಾಗಿದ್ದು, ಹಾಂಗ್‌ಕಾಂಗ್ ಫುಟ್‌ಬಾಲ್ ಇತಿಹಾಸದಲ್ಲೇ ಹೊಸ ದಾಖಲೆ ನಿರ್ಮಾಣವಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 127ನೇ ಸ್ಥಾನದಲ್ಲಿರುವ ಭಾರತ ತಂಡವು ಸಿ ಗುಂಪಿನಲ್ಲಿ ಸ್ಥಾನ ಪಡೆದಿದೆ. ಬಾಂಗ್ಲಾದೇಶ, ಹಾಂಗ್‌ಕಾಂಗ್ ಮತ್ತು ಸಿಂಗಪುರ ತಂಡಗಳು ಸಹ ಇದೇ ಗುಂಪಿನಲ್ಲಿವೆ.

ಮನೊಲೊ ಮಾರ್ಕ್ವೆಝ್ ಮಾರ್ಗದರ್ಶನದ ಭಾರತ ತಂಡವು ಮಾರ್ಚ್‌ನಲ್ಲಿ ಶಿಲ್ಲಾಂಗ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಗೋಲಿಲ್ಲದೆ ಡ್ರಾ ಸಾಧಿಸಿತ್ತು. ಭಾರತ ತಂಡವು ಇದೀಗ ಮೊದಲ ಗೆಲುವಿನ ಛಲದಲ್ಲಿದೆ.

ಮತ್ತೊಂದೆಡೆ, ಹಾಂಗ್‌ಕಾಂಗ್ ತಂಡವು ಮಾರ್ಚ್‌ನಲ್ಲಿ ನಡೆದ ಪಂದ್ಯದಲ್ಲಿ ಸಿಂಗಪುರ ವಿರುದ್ಧ ಗೋಲಿಲ್ಲದೇ ಡ್ರಾ ಮಾಡಿಕೊಂಡಿದೆ. ಇಂಗ್ಲೆಂಡ್‌ನ ಆಶ್ಲೆ ವೆಸ್ಟ್‌ವುಡ್ ಮಾರ್ಗದರ್ಶನದ ಈ ತಂಡವು ತವರಿನ ಪ್ರೇಕ್ಷಕರ ಬೆಂಬಲದ ಲಾಭ ಪಡೆದು, ಗೆಲುವಿನ ಖಾತೆ ತೆರೆಯುವ ವಿಶ್ವಾಸದಲ್ಲಿದೆ.

ಹಾಂಗ್‌ಕಾಂಗ್‌ಗೆ ಈ ಪಂದ್ಯ ಐತಿಹಾಸಿಕವಾಗಿರಲಿದೆ. 59 ವರ್ಷಗಳಲ್ಲಿ ಎರಡನೇ ಬಾರಿ ಎಎಫ್‌ಸಿ ಏಷ್ಯನ್ ಕಪ್ ಟೂರ್ನಿಗೆ ಸ್ಥಾನ ಪಡೆಯಲು ನಿರ್ಣಾಯಕ ಅರ್ಹತಾ ಪಂದ್ಯ ಆಡುತ್ತಿದೆ.

ಕೈ ತಕ್ ಸ್ಪೋರ್ಟ್ಸ್ ಪಾರ್ಕ್‌ನ ಭಾಗವಾಗಿರುವ 50,000 ಆಸನಗಳ ಕೈ ತಕ್ ಸ್ಟೇಡಿಯಂನ ಉದ್ಘಾಟನಾ ಪಂದ್ಯ ಇದಾಗಿದೆ.

1951ರಲ್ಲಿ ಭಾರತ ಮತ್ತು ಹಾಂಗ್‌ಕಾಂಗ್ ತಂಡಗಳು ಮೊದಲ ಬಾರಿ ಮುಖಾಮುಖಿಯಾಗಿದ್ದವು. ಈತನಕದ 24 ಪಂದ್ಯಗಳಲ್ಲಿ ಭಾರತ ಒಂಬತ್ತು, ಹಾಂಗ್‌ಕಾಂಗ್ ಎಂಟರಲ್ಲಿ ಗೆಲುವು ಸಾಧಿಸಿವೆ. ಏಳು ಪಂದ್ಯಗಳು ಡ್ರಾನಲ್ಲಿ ಮುಕ್ತಾಯವಾಗಿವೆ.

ಭಾರತವು ಹಾಂಗ್‌ಕಾಂಗ್ ನೆಲದಲ್ಲಿ ಒಮ್ಮೆ ಮಾತ್ರ ಜಯ ಸಾಧಿಸಿದೆ. 1957ರಲ್ಲಿ ನಡೆದ ಸೌಹಾರ್ದ ಪಂದ್ಯದಲ್ಲಿ 2–1ರಿಂದ ಆತಿಥೇಯ ತಂಡವನ್ನು ಮಣಿಸಿತ್ತು. ಉಭಯ ತಂಡಗಳು ಕೊನೆಯ ಬಾರಿ 2022ರ ಏಷ್ಯನ್ ಕಪ್ ಅರ್ಹತಾ ಪಂದ್ಯದಲ್ಲಿ (ಕೋಲ್ಕತ್ತ) ಮುಖಾಮುಖಿಯಾಗಿದ್ದು, ಮಳೆಯಿಂದ ಅಡಚಣೆಯಾದ ಪಂದ್ಯವನ್ನು 4–0 ಗೋಲುಗಳಿಂದ ಭಾರತ ಗೆದ್ದಿತ್ತು.



ತಾಲೀಮು ನಡೆಸುತ್ತಿರುವ ಭಾರತ ತಂಡದ ಆಟಗಾರ ಸುನಿಲ್ ಚೆಟ್ರಿ 'ಎಕ್ಸ್' ಚಿತ್ರ



ಯು ಎಸ್ ಎ ಅಧ್ಯಕ್ಷ ಹಾಗೂ ಬಿಲಿಯನೇರ್/ ಟೆಸ್ಲಾ ಮಾಲೀಕರ ನಡುವೆ ಸಂಘರ್ಷ

ಭಾರತ ಎ– ಲಯನ್ಸ್ 'ಟೆಸ್ಟ್' ಡ್ರಾ

ನಾರ್ಥಾಂಪ್ಟನ್ (ಇಂಗ್ಲೆಂಡ್) (ಪಿಟಿಐ): ಭಾರತ ಎ ತಂಡ ಹಾಗೂ ಇಂಗ್ಲೆಂಡ್ ಲಯನ್ಸ್ ನಡುವೆ ಇಲ್ಲಿ ನಡೆಯುತ್ತಿರುವ ಎರಡನೇ 'ಟೆಸ್ಟ್' ಪಂದ್ಯ ನಾಲ್ಕನೇ ಹಾಗೂ ಅಂತಿಮ ದಿನವಾದ ಸೋಮವಾರ ಡ್ರಾ ಆಯಿತು.

ಕೆ.ಎಲ್. ರಾಹುಲ್ (51), ಅಭಿಮನ್ಯು ಈಶ್ವರನ್ (80), ತನುಷ್ ಕೋಟಿಯಾನ್ (ಔಟಾಗದೆ 90) ಹಾಗೂ ಅನ್ಷುಲ್ ಕಾಂಭೋಜ್ (ಔಟಾಗದೆ 51) ಅವರ ಅರ್ಧಶತಕಗಳ ನೆರವಿನಿಂದ ಎರಡನೇ ಇನಿಂಗ್ಸ್‌ನಲ್ಲಿ 7 ವಿಕೆಟ್‌ಗೆ 417 ರನ್ ಗಳಿಸಿದ್ದ ಭಾರತ ಎ ತಂಡ ಡಿಕ್ಲೇರ್ ಘೋಷಿಸಿತು. ಅಲ್ಪ ಅವಧಿಯಲ್ಲಿ 439 ರನ್‌ಗಳ ಬೃಹತ್ ಮೊತ್ತದ ಗುರಿ ಬೆನ್ನಟ್ಟಿದ ಇಂಗ್ಲೆಂಡ್ ಲಯನ್ಸ್ ತಂಡವು 3 ವಿಕೆಟ್‌ಗೆ 32 ರನ್ ಗಳಿಸಿದ್ದಾಗ ಆಟಕ್ಕೆ ತೆರೆ ಬಿತ್ತು.

ಭಾರತ ಎ ತಂಡದ ಪರ ಅನ್ಷುಲ್ ಕಾಂಬೋಜ್ ಅವರು ಆಲ್‌ರೌಂಡ್ ಆಟ (ಔಟಾಗದೆ 51 ರನ್ ಹಾಗೂ 6ಕ್ಕೆ 2) ಪ್ರದರ್ಶಿಸಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 348. ಇಂಗ್ಲೆಂಡ್ ಲಯನ್ಸ್: 327. ಎರಡನೇ ಇನಿಂಗ್ಸ್: ಭಾರತ ಎ: 92 ಓವರ್‌ಗಳಲ್ಲಿ 7ಕ್ಕೆ417ಡಿ .(ಕೆ.ಎಲ್. ರಾಹುಲ್ 51, ಅಭಿಮನ್ಯು ಈಶ್ವರನ್ 80, ತನುಷ್ ಕೋಟಿಯಾನ್ ಔಟಾಗದೆ 90, ಅನ್ಷುಲ್ ಕಾಂಬೋಜ್ ಔಟಾಗದೆ 51, ಜಾರ್ಜ್ ಹಿಲ್ 64ಕ್ಕೆ3). ಇಂಗ್ಲೆಂಡ್ ಲಯನ್ಸ್: 11 ಓವರ್‌ಗಳಲ್ಲಿ 3ಕ್ಕೆ 32 (ಅನ್ಷುಲ್ ಕಾಂಬೋಜ್ 6ಕ್ಕೆ2)

ಹೂಪ್ಸ್ 7 ಬಿ.ಸಿ ತಂಡಕ್ಕೆ ಗೆಲುವು

ಬೆಂಗಳೂರು: ಹೂಪ್ಸ್ 7 ಬಿ.ಸಿ ತಂಡವು ಡಿ.ಎನ್. ರಾಜಣ್ಣ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದ ಪಂದ್ಯದಲ್ಲಿ 72–61ರಿಂದ ಮೈಸೂರು ಜಿಲ್ಲೆ ಎ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಸೋಮವಾರ ನಡೆದ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಹೂಪ್ಸ್ 7 ಬಿ.ಸಿ ತಂಡದ ಪರ ಸಮರ್ಥ್ 29 ಅಂಕ ಹಾಗೂ ಮೈಸೂರು ಜಿಲ್ಲೆ ಎ ಪರ ಸುಮನ್ 31 ಅಂಕ ಗಳಿಸಿದರು.

ಫಲಿತಾಂಶ: ಬಾಲಕರು: ಡಿವೈಎಸ್‌ಇ ಬೆಂಗಳೂರು 67–50ರಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ವಿರುದ್ಧ; ಹೂಪ್ಸ್ 7 ಬಿ.ಸಿ 72–61ರಿಂದ ಮೈಸೂರು ಜಿಲ್ಲೆ ಎ ವಿರುದ್ಧ; ಚಿಕ್ಕಮಗಳೂರು ಜಿಲ್ಲೆ 83–53 ಎಚ್‌ಬಿಆರ್ ಬಿ.ಸಿ ವಿರುದ್ಧ ಗೆಲುವು ಸಾಧಿಸಿತು.
ಬಾಲಕಿಯರು: ಮೈಸೂರು ಜಿಲ್ಲೆ ಎ 64–48ರಿಂದ ಮಂಡ್ಯ ಜಿಲ್ಲೆ ಎದುರು; ಮೌಂಟ್ಸ್ ಕ್ಲಬ್ 55–50ರಿಂದ ಬೆಂಗಳೂರು ವ್ಯಾನ್‌ಗಾರ್ಡ್ಸ್ ಎದುರು ಜಯ ಸಾಧಿಸಿತು.

ಡಬ್ಲ್ಯುಟಿಸಿ ಫೈನಲ್: ದಾಖಲೆಗೆ ಕಾಂಗರೂಗಳ ಕಣ್ಣು


ಹರಿಣಗಳ ಸಂಕಲ್ಪದ ಸವಾಲು

ಲಂಡನ್ (ಎಪಿ): ಪ್ರಮುಖ ಕ್ರಿಕೆಟ್ ಹಬ್ಬಗಳ ಫೈನಲ್ಸ್ ವಿಷಯ ಬಂದಾಗ ಆಸ್ಟ್ರೇಲಿಯಾ ತಂಡ ತನ್ನ ಶಕ್ತಿ ಏನೆಂಬುದನ್ನು ತೋರಿಸುತ್ತ ಬಂದಿದೆ. ಫೈನಲ್‌ನಲ್ಲಿ ಈ ತಂಡವನ್ನು ಸೋಲಿಸುವುದು ಕಷ್ಟ ಎಂಬುದೂ ಸಾಬೀತಾಗಿದೆ.

ವಿಶ್ವ ಮಟ್ಟದಲ್ಲಿ ಪುರುಷರ ವಿಭಾಗದ ಎಲ್ಲಾ ನಾಲ್ಕೂ ಟ್ರೋಫಿಗಳನ್ನು ಗೆದ್ದ ಏಕೈಕ ತಂಡ ಆಸ್ಟ್ರೇಲಿಯಾ. ಏಕದಿನ, ಟಿ20 ವಿಶ್ವಕಪ್, ಚಾಂಪಿಯನ್ಸ್ ಟ್ರೋಫಿ ಮತ್ತು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ಗಳಲ್ಲಿ ಒಟ್ಟು 10 ಬಾರಿ ಚಾಂಪಿಯನ್ ಆಗಿದೆ.

ಬುಧವಾರ ಲಾರ್ಡ್ಸ್‌ನಲ್ಲಿ ಆರಂಭವಾಗುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯ ಗೆದ್ದು, ಕಾಂಗರೂ ಪಡೆ 11ನೇ ಪ್ರಮುಖ ಪ್ರಶಸ್ತಿಗೆ ಯತ್ನಿಸಲಿದೆ.

ಈ ತಂಡದ ಎದುರಾಳಿ ದಕ್ಷಿಣ ಆಫ್ರಿಕಾ, ಇನ್ನೊಂದು ಕಡೆ ಪ್ರಮುಖ ಪಂದ್ಯಗಳಲ್ಲಿ ಒತ್ತಡಕ್ಕೆ ಒಳಗಾಗುವ ತಂಡ (ಚೋಕರ್ಸ್) ಎಂಬ ಹಣೆಪಟ್ಟಿ ಹೊಂದಿದೆ. 1998ರಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯ ಮೊದಲ ಆವೃತ್ತಿಯಲ್ಲಿ ಯಶಸ್ಸು ಪಡೆದಿದ್ದು ಬಿಟ್ಟರೆ ಇದುವರೆಗೆ ಈ ತಂಡಕ್ಕೆ ಪ್ರಮುಖ ಪ್ರಶಸ್ತಿ ಗಗನಕುಸುಮವಾಗಿದೆ.




ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್, ತೆಂಬಾ ಬವುಮಾ

ಈಗಿನ ತಂಡ ಅನುಭವಿಗಳಿಂದ ಕೂಡಿದ್ದು ಸರಾಸರಿ ವಯಸ್ಸು 29. ತಂಡ ಮಹತ್ವಾಕಾಂಕ್ಷೆ ಹೊಂದಿದ್ದು, ಲಘುವಾಗಿ ತೆಗೆದುಕೊಳ್ಳುವಂತೆ ಇಲ್ಲ. ತಂಡದ ಸಂಕಲ್ಪ ಶಕ್ತಿ ಈ ಬಾರಿ ಎದ್ದುಕಂಡಿದೆ.

2023–25ರ ಡಬ್ಲ್ಯುಟಿಸಿ ಋತುವಿನಲ್ಲಿ ಹರಿಣಗಳ ಪಡೆ 30 ಆಟಗಾರರನ್ನು ಪರೀಕ್ಷಿಸಿದೆ. ಇದು ಇತರೆಲ್ಲ ತಂಡಗಳಿಗಿಂತ ಹೆಚ್ಚು. ಸಕಾಲದಲ್ಲಿ ಯಶಸ್ವಿ ಬೌಲರ್, ಬ್ಯಾಟರ್‌ಗಳನ್ನು ಕಂಡುಕೊಂಡಿದೆ. ಕೊನೆಯ ಏಳು ಟೆಸ್ಟ್‌ಗಳನ್ನು ಗೆದ್ದು ಡಬ್ಲ್ಯುಟಿಸಿ ಫೈನಲ್‌ಗೆ ಅರ್ಹತೆ ಪಡೆದ ಮೊದಲ ತಂಡ ಎನಿಸಿದ್ದು ಅದರ ಹೆಚ್ಚುಗಾರಿಕೆ.

'ನಾವು ಇತರ ತಂಡಗಳ ವಿರುದ್ಧ ಪ್ರಾಬಲ್ಯ ಸಾಧಿಸುವಂತಹ ನಿರ್ದಯ ಪ್ರದರ್ಶನ ನೀಡಿಲ್ಲ. ಆದರೆ ಫಲಿತಾಂಶ ನಮ್ಮ ಕಡೆ ಇರುವಂತೆ ದಾರಿ ಕಂಡುಕೊಳ್ಳುವಲ್ಲಿ ಯಶಸ್ವಿ ಆಗಿದ್ದೇವೆ' ಎಂದು ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಹೇಳಿದ್ದಾರೆ.

ಲಾರ್ಡ್ಸ್ ಇತಿಹಾಸ: ಕ್ರಿಕೆಟ್ ತವರು ಲಾರ್ಡ್ಸ್ ಕ್ರೀಡಾಂಗಣ ಎರಡೂ ತಂಡಗಳಿಗೆ ಉತ್ತೇಜನಕಾರಿ ಆಗಿದೆ. ವರ್ಣಭೇದ ನೀತಿ ತೊರೆದು 1992ರಲ್ಲಿ ಕ್ರಿಕೆಟ್‌ಗೆ ಪುನರಾಗಮನ ಬಳಿಕ ಹರಿಣಗಳ ಪಡೆ ಇಲ್ಲಿ ಆಡಿರುವ ಏಳು ಟೆಸ್ಟ್‌ಗಳಲ್ಲಿ ಒಮ್ಮೆ ಮಾತ್ರ ಸೋತಿದೆ. 2022ರಲ್ಲಿ ಇಲ್ಲಿ ಆಡಿದ್ದಾಗ ಮೂರೇ ದಿನಗಳಲ್ಲಿ ಜಯಗಳಿಸಿತ್ತು. ಕಳೆದ 10 ವರ್ಷಗಳಲ್ಲಿ ಆಸ್ಟ್ರೇಲಿಯಾ ಲಾರ್ಡ್ಸ್‌ನಲ್ಲಿ ಒಮ್ಮೆಯೂ ಸೋತಿಲ್ಲ.

